ಕಲ್ಯಾಣ ಕಿರಣ

ಸಂಪುಟ ೭
ಸಂಚಿಕೆ ೧೦
ಫೆಬ್ರವರಿ ೧೯೮೧
ಬಸವ ಶಕೆ ೮೭೪
ಬೆಲೆ : ೧-೫೦



Digitalized by e-Sahithya Documentation Forum
Sponsored by Sarayu Foundation Trust

ಕಲ್ಯಾಣ ಕಿರಣ
ಮಾಸ ಪತ್ರಿಕೆ

ಸಂಸ್ಕೃತಿ, ಸಾಹಿತ್ಯ, ನೀತಿ, ಅಧ್ಯಾತ್ಮ ಮೌಲ್ಯಗಳಪ್ರಸಾರಕ್ಕೆ ಮೀಸಲಾದ ಪತ್ರಿಕೆ

ಪ್ರಧಾನ ಸಂಪಾದಕರು :
ಜಗದ್ಗುರು ಮಾತೆ ಮಹಾದೇವಿ

ಪ್ರಕಾಶಕರು :
ಜಗನ್ಮಾತಾ ಅಕ್ಕಮಹಾದೇವಿ ಆಶ್ರಮದ ಪರವಾಗಿ ವಿಶ್ವಕಲ್ಯಾಣ ಮಿಷನ್ ಸಂಸ್ಥೆಯು ಪ್ರಕಾಶನ ಪಡಿಸುವುದು.

ಕೇಂದ್ರ ಕಾರ್ಯಾಲಯ :
ಕಲ್ಯಾಣ ಕಿರಣ ಮಾಸ ಪತ್ರಿಕೆ
ಬಸವ ಮಂಟಪ, ಸಂ. ೨೪, ಎರಡನೇ ವಿಭಾಗ, 'ಕಾರ್ಡ್‌ರೋಡ್' ರಾಜಾಜಿನಗರ
ಬೆಂಗಳೂರು-೫೬೦೦೧೦

ಕಲೆ :
ಬಿ. ಪಿ. ಕೃಷ್ಣಯ್ಯ

ಚಂದಾ ವಿವರ :

ಬಿಡಿ ಸಂಚಿಕೆ	: ರೂ.	೧-೫೦
ವಾರ್ಷಿಕ	: ರೂ.	೧೬-೦೦
ದ್ವೈವಾರ್ಷಿಕ	: ರೂ.	೩೧-೦೦
ಅಜೀವ ಸದಸ್ಯತ್ವ	: ರೂ.	೧೫೧-೦೦
ಪೋಷಕರು	: ರೂ.	೫೦೧-೦೦
ಮಹಾಪೋಷಕರು	: ರೂ	೧೦೦೧-೦೦

* ಪತ್ರಿಕೆಯು ಪ್ರತಿ ತಿಂಗಳ ದಿನಾಂಕ ಒಂದರಂದು ಪ್ರಕಟವಾಗುವುದು.
* ಲೇಖಕರು ಲೇಖನಗಳನ್ನು ಪ್ರತಿತಿಂಗಳ ೧೦ನೇ ದಿನಾಂಕದೊಳಗೆ ಕಳಿಸಬೇಕು.
* ಪತ್ರಿಕೆ ಉದ್ದೇಶವಾದ ಧಾರ್ಮಿಕ, ಸಾಂಸ್ಕೃತಿಕ ಎಲ್ಲಾ ಬಗೆಯ ತಾತ್ವಿಕ ವಿಚಾರಗಳ ಲೇಖನ, ಕಥೆ, ಕವನಗಳಿಗೆ ಸ್ವಾಗತವಿದೆ.
* ಲೇಖನಗಳನ್ನು ಕಾಗದದ ಒಂದು ಮುಗ್ಗುಲಿಗೆ ಸ್ಪಷ್ಟವಾಗಿ ಬರೆದಿರಬೇಕು
* ಲೇಖಕರು ತಮ್ಮ ಹೆಸರು ವಿಳಾಸಗಳನ್ನು ಸ್ಫುಟವಾಗಿ ತಿಳಿಸಬೇಕಲ್ಲದೆ ಅನುವಾದ ರೂಪಾಂತರ ಅಥವಾ ಸಾಧಾರ ಲೇಖನಗಳಾದರೆ ಅವನ್ನು ಸ್ಪಷ್ಟವಾಗಿ ತಿಳಿಸಿ, ಮೂಲ ಲೇಖಕರ ಮತ್ತು ಪ್ರಕಾಶಕರ ಹೆಸರನ್ನು ಕಾಣಿಸಬೇಕು.
* ಅಸ್ವೀಕೃತ ಲೇಖನ ಬೇಕಾಗಿದ್ದಲ್ಲಿ ಮರಳಿಸಲು ಬೇಕಾದ ಅಂಚೆವೆಚ್ಚಕ್ಕೆ ಅವಶ್ಯಕವಿರುವ ಸ್ಟಾಂಪುಗಳನ್ನು ಕಳಿಸಬೇಕು. ಲೇಖನಗಳಲ್ಲಿ ಸೂಕ್ತ ಬದಲಾವಣೆ ಮಾಡಿಕೊಳ್ಳುವ ಅಧಿಕಾರ ಸಂಪಾದಕರಿಗಿದೆ.
* ಚಂದಾ ಹಣ ಕೊಡದೆ ಇದ್ದವರು ಪತ್ರಿಕೆಯು ತಲುಪಿದ ತಕ್ಷಣ ಕಳಿಸಬೇಕು.
  ಹೊಸ ಚಂದಾದಾರರು ೧೬-೦೦ (ಹದಿನಾರು ರೂಪಾಯಿ) ಎಂ. ಓ. ಮಾಡಬೇಕು (ವಿ. ಪಿ. ಇಲ್ಲ.)
* ಚಂದಾದಾರರು ಪತ್ರ ವ್ಯವಹಾರಗಳಲ್ಲಿ ವಿಳಾಸದ ಮೊದಲಲ್ಲಿ ಬರೆದ ಚಂದಾ ಸಂಖ್ಯೆಯನ್ನು ನಮೂದಿಸಬೇಕು.
* ವಿಳಾಸ ಬದಲಾವಣೆಗಳನ್ನು ತಿಳಿಸಬೇಕು ಚಂದಾದಾರರಾದ ತಿಂಗಳಿನಿಂದ ಮರು ವರ್ಷದ ಹಿಂದಿನ ತಿಂಗಳವರೆಗೆ ಪತ್ರಿಕೆಗಳನ್ನು ಕಳಿಸಲಾಗುವುದು.

ಕಲ್ಯಾಣ ಕಿರಣ

ಸಂಪುಟ ೬] ಫೆಬ್ರುವರಿ 1981 [ಸಂಚಿಕೆ ೧೦

ನುಡಿ ನೈವೇದ್ಯ

ಒಂದು ಅನುಭವ

ಏರುತ ಏರುತ ಮುಗಿಲನು ಮೆಟ್ಟುತ ಮೇಲೇರಲು ನಾವು
ತೋರುವುದಲ್ಲಿ ಹಾಲಿನ ಶರಧಿಯು ನಮ್ಮಯ ಅಡಿಯಲ್ಲಿ ||
ಸೂರ್ಯನ ಹೊನ್ನಿನ ಕಿರಣಗಳಿಲ್ಲಿ ಚೆಲ್ಲಿರೆ ಬೆಡಗಿನ ಸೊಬಗಾ
ನೂತನ ಲೋಕವು ಮೆರೆಯುತ ತಾನಿರೆ ಮಾತು ಮೂಕವಾಗುವುದಿಲ್ಲಿ ||

ಹಿಮದ ಬಣ್ಣನ ಹಂಸೆಯ ಹಿಂಡು ತೇಲುತ ತಾನಿಹುದೋ
ಬಿಳಿಯಾನೆಗಳು ಒಂದರ ಹಿಂದೊಂದು ಹಮ್ಮಿಂ ಹೊರಟಹವೋ
ಮೇಲಿಹ ನೀಲಿಯ ಬಾನಿನ ಅಂಗಳ ಶರಧಿಯ ಪ್ರತಿಬಿಂಬ
ಇರುಳಿನ ಆಗಸ ಹೊನ್ನಿನ ಹೂವಿನ ರೇಶಿಮೆ ಜರಿ ಸೀರೆ ||

ಕೋಲನು ಇರಿಸಿ ಮೊಸರನು ಮಥಿಸಲು ತಕತಕ ಕುಣಿಯುವುದೆಂತೋ
ಅಂತೆಯೇ ಮೇಘಗಳ್ ಸ್ಪರ್ಧಿಸಿ ನಡೆವುದು ಕಣ್ಣಿಗೆ ಕಟ್ಟುವುದು
ಅರಳೆಯ ಉಂಡೆಯ ಹಿಂಜುತ ಎಸೆಯುತ ಯಾರೀ ಆಟವನಾಡುವರೋ ?

ಮುಗಿಲಿನ ಕೆಳಗಿನ ಜನರಿಗೆ ಸೂರ್ಯನ ಮೊಗವನು ಮುಚ್ಚುವರೋ
ಸಂತರ ಬದುಕನು ಮುಚ್ಚಲು ಎಳಸುವ ಕಷ್ಟದ ಹಿಂಡಂತೆ
ಸೂರ್ಯನ ಮೊಗಕವಕುಂಠನವೆಳೆಯುವ ಕಾರ್ಯವು ನಡೆದಿಹುದೋ
ಮೋಡದ ಆಚೆಯ ಹೊನ್ನಿನ ಲೋಕವು ತತ್ತ್ವವ ಸಾರುತಿದೆ ;
ಶರಣರ ಬದುಕಿನ ತೆರೆಗಳ ಆಚೆ ಉಜ್ವಲ ಬೆಳಕೊಂದು
ಲೋಕದ ಕಣ್ಣಿಗೆ ಕಾಣದ ತೆರದಲಿ ಬೆಳಗುತ ತಾನಿಹುದು ||

ತೋರಿಕೆಯಾಚೆಗೆ ಇರುವಿಕೆಯೊಂದಿದೆ ಅದುವೆ ನಿಜ ತತ್ತ್ವ
ವಿಶ್ವದ ಲೀಲೆಯ ಹಿಂದೆ ತಾನಿಹುದು ಸತ್-ಚಿತ್-ಆನಂದ.

ಜಗದ್ಗುರು ಮಾತೆ ಮಹಾದೇವಿ

Digitalized by e-Sahithya Documentation Forum
Sponsored by Sarayu Foundation Trust


ಕಲ್ಯಾಣ ಕಿರಣ

ಮಾಸ ಪತ್ರಿಕೆ

ವಾರ್ಷಿಕ ಚಂದಾ ರೂ. ೧೬ ಆಜೀವ ಸದಸ್ಯತ್ವ ೧೫೧ ರೂ.

ಬಿಡಿ ಪ್ರತಿ ೧-೫೦ ರೂ.

ಕಿರಣಗನ್ನಡಿ



ಭಾರತವು ಅಮೆರಿಕಾಕ್ಕೆ ಕಲಿಸುವುದೇನು ?

"ನೀವು ಎಲ್ಲಿಯವರು ?" "ಭಾರತೀಯರು". ಭಾರತದಿಂದಲೇ ನೇರವಾಗಿ ಬಂದವರೋ ? "ಹೌದು". "ಸಂತೋಷ. ಇಂಡಿಯಾ ಅಂದರೆ ನಮಗೇನೋ ಆನಂದ." ಓರ್ವ ಸಾಮಾನ್ಯ ಅಮೆರಿಕಾ ಪ್ರಜೆಯ ಕಣ್ಣಲ್ಲಿಯೂ ಕಳೆಯೊಂದು ಬೆಳಗುತ್ತದೆ, ಭಾರತದ ಹೆಸರನ್ನು ಕೇಳಿದಾಗ. ಆಗ ನಮ್ಮ ಎದೆ ಉಬ್ಬುತ್ತದೆ. ಇಡೀ ಭೂಪಟದಲ್ಲಿ ಒಂದು ಪುಟ್ಟ ದೇಶ. ಅಮೆರಿಕಾ, ರಷ್ಯಾಗಳಿಗೆ ಹೋಲಿಸಿದರೆ ನಮ್ಮ ಪರ್ಯಾಯ ದ್ವೀಪದ ವಿಸ್ತೀರ್ಣ ತೀರಾ ಕಡಿಮೆ. ಎಷ್ಟೆಷ್ಟೋ ವಿಸ್ತಾರವಾದ ಭೂಪ್ರದೇಶವುಳ್ಳ ದೇಶಗಳಿದ್ದರೂ ಇಡೀ ಜಗತ್ತಿನ ಜನಕ್ಕೆ 'ಇಂಡಿಯಾ' ಬಗ್ಗೆ ಗೊತ್ತು.

ನಿನ್ನೆ ಒಮೇಗಾ, ಸ್ಕೈಲಾರ್ಕ್ ಮುಂತಾದ ಕಾರುಗಳನ್ನು ತಯಾರಿಸುವ ಜನರಲ್ ಮೋಟಾರ್ಸ್ ಕಂಪೆನಿ ನೋಡಲು ಡೆಟ್ರಾಯಿಟ್‌ನಿಂದ ಹೋಗಿದ್ದೆವು. ನಮ್ಮನ್ನು ಎಲ್ಲೆಡೆ ಕರೆದೊಯ್ಯಲು ಓರ್ವ ಗೈಡ್ (ಅವನು ಸೆಕ್ಯೂರಿಟಿ ಆಫೀಸರ್ ಕೂಡ) ಬಂದಿದ್ದ. "Are you from India ?" ಎಂದ, ಹೌದು ಎಂದೆವು. "India, Mahatma Gandhi's India" ಎನ್ನುತ್ತಿದ್ದಂತೆಯೇ ಅವನ ಕಣ್ಣು ಮಿನುಗಿದವು. ಅಂತರಂಗವು ಅಭಿಮಾನದಿಂದ ಪುಳಕಗೊಂಡಿತು.

ಭಾರತೀಯರ ಬಗ್ಗೆ, ಭಾರತದ ಬಗ್ಗೆ ವಿಲಕ್ಷಣ ಅಭಿಮಾನ, ಗೌರವ ಇಲ್ಲಿದೆ. ಇತ್ತೀಚೆಗೆ ಪಾಕಿಸ್ತಾನೀ ಜನರು ಕೆಲವು ಅಸಹ್ಯ ವರ್ತನೆಮಾಡಿರುವ ಕಾರಣ ಜಿಗುಪ್ಸೆ ಹುಟ್ಟಿದೆ ಜನರಲ್ಲಿ. ದುರ್ದೈವವೆಂದರೆ ಮುಖದ ಹೋಲಿಕೆಯಲ್ಲಿ ಎಲ್ಲರೂ ಒಂದೇ

Digitalized by e-Sahithya Documentation Forum
Sponsored by Sarayu Foundation Trust

ತರಹ ಕಾಣುವುದರಿಂದ 'ಪಾಕಿಗಳು' ಎಂದುಬಿಡುತ್ತಾರೆ ಅಮೆರಿಕನ್ನರು – ಹಿಂದುಗಳನ್ನೂ ಸಹ. ನಂತರ ತಿಳಿಸಿಹೇಳಿದರೆ, ಭಾರತೀಯರು ಬೇರೆ, ಪಾಕಿಸ್ತಾನಿಗಳು ಬೇರೆ, ಅವರ ಧರ್ಮಗಳೂ ಬೇರೆ ಬೇರೆ ಎಂದಾಗ ಅರಿಯುತ್ತಾರೆ.

ಅಂತೂ ಭಾರತದ ಬಗ್ಗೆ ವಿಶೇಷವಾದ ಅಭಿಮಾನ, ಭಕ್ತಿ, ಜನಸಾಮಾನ್ಯರಲ್ಲಿ ವ್ಯಕ್ತವಾಗುತ್ತದೆ. ಅಲ್ಲದೆ ಜಗತ್ತಿನ ಅತ್ಯಂತ ದೊಡ್ಡ ಪ್ರಜಾಪ್ರಭುತ್ವದ ದೇಶ (ಜನಸಂಖ್ಯೆ ದೃಷ್ಟಿಯಿಂದ) ಎಂಬ ಭಾವವೂ ಇದೆ. ಎಲ್ಲಕ್ಕಿಂತ ಮಿಗಿಲಾಗಿ ಭಾರತವು "ಗುರುಮಾತೆ", ಆಧ್ಯಾತ್ಮಿಕ ಪಥದರ್ಶಿನಿ ಎಂಬ ಭಾವವೂ ತುಂಬಿದೆ. ಆದರೆ ಈ ಅಭಿಮಾನವನ್ನು ಅನೇಕ ಭಾರತೀಯರು ಉಳಿಸಿಕೊಳ್ಳಲು ಪ್ರಾಮಾಣಿಕ ಯತ್ನ ಮಾಡರು. ಧಾರ್ಮಿಕ, ಸಾಂಸ್ಕೃತಿಕ ಪರಂಪರೆಯ ಬಗ್ಗೆ ಭಾರತೀಯರಲ್ಲಿ ಒಂದು ಬಗೆಯ ಕೀಳರಿಮೆ ತುಂಬಿದೆ ಎನ್ನಿಸುತ್ತದೆ. "ಬ್ರಿಟಿಷರು, ಅಮೆರಿಕನ್ನರು ಒಟ್ಟಾರೆ ಬಿಳಿಯ ಚರ್ಮದವರ ಆಚಾರ, ನಡೆ-ನುಡಿ ಅತ್ಯಂತ ಉತ್ಕೃಷ್ಟ. ಅದನ್ನು ಅನುಸರಿಸುವುದೇ ಮುಂದುವರಿಯುವಿಕೆಯ ಲಕ್ಷಣ" ಎಂಬ ಭ್ರಾಂತಿ ಬಹುಪಾಲು ಜನರಲ್ಲಿದೆ. ಹೀಗಾಗಿ ತಮ್ಮ ಸಂಸ್ಕೃತಿ ನಡೆನುಡಿಗಳನ್ನು ಸುಲಭವಾಗಿ ಬಿಟ್ಟುಕೊಡುವ ಅಭ್ಯಾಸ ಇವರಲ್ಲಿದೆ. ಹೆಣ್ಣುಮಕ್ಕಳು ಹಚ್ಚುವ ಕುಂಕುಮವನ್ನೇ ಉದಾಹರಣೆಗೆ ತೆಗೆದುಕೊಳ್ಳುವಾ, ಭಾರತದಲ್ಲೇ ಇರಲಿ, ಅಮೆರಿಕಾದಲ್ಲೇ ಇರಲಿ ಕುಂಕುಮ ಹಚ್ಚುವದನ್ನು ಮೆಲ್ಲನೆ ಹೆಣ್ಣುಮಕ್ಕಳು ಬಿಡುತ್ತಾರೆ. ಏಕೆ ಎಂದರೆ 'ಸುತ್ತಲಿನವರು ಅಪಹಾಸ್ಯ ಮಾಡುತ್ತಾರೆ. ಇದೇನು ಇದೇನು ಎಂದು ಕೇಳುತ್ತಾರೆ' ಎಂದು ಉತ್ತರಿಸುತ್ತಾರೆ. ಅಮೆರಿಕನ್ನರು ಅಪಹಾಸ್ಯ ಮಾಡಿದರೆ ಇವರೇಕೆ ನಾಚಿಕೊಳ್ಳಬೇಕು ? (ಅಮೆರಿಕನ್ನರು ಬಹುಶಃ ಇತರರನ್ನು ಹಾಸ್ಯಮಾಡುತ್ತಾರೆ ಎಂದೇನು ನನಗನ್ನಿಸದು. ಅವರು ಅತ್ಯಂತ ಕುತೂಹಲದಿಂದ, ಆಸಕ್ತಿಯಿಂದ ತಿಳಿದುಕೊಳ್ಳಬೇಕೆಂದು ಕೇಳುತ್ತಾರೆ ಮಾತ್ರ.) ಮೋಟು ಲಂಗ, ಬಿಗಿ ಪ್ಯಾಂಟು, ಬಿಕಿನಿವೇಷ, ಕತ್ತರಿಸಿದ ಕೂದಲ ಸಂಸ್ಕೃತಿಯನ್ನು ಅವರು ಅಷ್ಟೊಂದು ಧಾಡಸಿತನದಿಂದ ಜಗತ್ತಿನ ತುಂಬ ಹಬ್ಬಿಸಿದ್ದಾರೆ. ಭಾರತೀಯ ಸಂಸ್ಕೃತಿಯ ವೇಷಭೂಷಣ, ಗಂಭೀರತೆ, ಸೌಂದರ್ಯಗಳ ಪ್ರತೀಕವಾಗಿದ್ದರೂ ಸ್ವತಃ ಇವರಿಗೇ ಎದೆಗಾರಿಕೆ, ಅಭಿಮಾನ ಇಲ್ಲದ್ದರಿಂದ ಅದನ್ನು ಪ್ರಚಾರ ಮಾಡುವುದಿರಲಿ, ತಾವೇ ಅದನ್ನು ಬಿಡುತ್ತಾರೆ. ಹಣೆಯ ಮೇಲಿನ ಕುಂಕುಮ ಫ್ಯಾಷನ್ ದೃಷ್ಟಿಯಿಂದಲೂ ಅತ್ಯಂತ ಸೂಕ್ತ. ಮುಖದ ಸೌಂದರ್ಯಕ್ಕೆ ವಿಶೇಷ ಕೊಡುಗೆ ನೀಡುತ್ತದೆ.

ಅದೇ ರೀತಿ ಭಾರತೀಯರ ಕೇಶಾಲಂಕಾರ. ಸಾಂಸ್ಕೃತಿಕ ದೃಷ್ಟಿಯಿಂದ ಅಷ್ಟೇನೂ ಮುಂದುವರಿಯದ ಪಾಶ್ಚಿಮಾತ್ಯರು ಕೂದಲನ್ನು ಕತ್ತರಿಸಿಕೊಂಡು, ಹಾಗೆಯೇ

Digitalized by e-Sahithya Documentation Forum
Sponsored by Sarayu Foundation Trust

ಬಿಟ್ಟು ಗಾಳಿಗೆ ತೂರಾಡಿಸುತ್ತ ಓಡಾಡಿದರೆ, ಎಷ್ಟೊಂದು ಬಗೆಯ ಅಲಂಕಾರ ಬಲ್ಲ ಭಾರತೀಯ ನಾರಿಯರು ಏಕದನ್ನು ಅನುಕರಿಸಬೇಕೋ ನನಗಿನ್ನೂ ಅರ್ಥವಾಗದು. ಭಾರತೀಯ ಪುರಾತನ ಶಿಲ್ಪಗಳಲ್ಲಿ ಕಟೆಯಲಾಗಿರುವ ಕೇಶಾಲಂಕಾರದ ವಿನ್ಯಾಸಗಳು ಆಧುನಿಕರನ್ನು ಬೆರಗುಗೊಳಿಸುತ್ತವೆ. ಅತ್ಯಂತ ಸಾತ್ವಿಕ ಸೌಂದರ್ಯದಿಂದ ಕೂಡಿರುವ ಭಾರತೀಯ ಕೇಶಾಲಂಕಾರಗಳನ್ನು ಬಿಟ್ಟು ಚಿತ್ರವಿಚಿತ್ರವಾಗಿ ಕೂದಲು ಕತ್ತರಿಸಿ ಬಿರಿಹೊಯ್ದು ಓಡಾಡುವ ಹೆಂಗೆಳೆಯರನ್ನು ಕಂಡಾಗ ವಿಷಾದವೆನ್ನಿಸದಿರದು.

ಇನ್ನು ಇಲ್ಲಿಯ ಸ್ನಾನಪದ್ಧತಿ. ಬಹುಪಾಲು ಜನರಲ್ಲಿ ನಿತ್ಯಸ್ನಾನದ ಪದ್ಧತಿ ಇಲ್ಲ. ನಿತ್ಯ ಸ್ನಾನ ಮಾಡುವವರೂ ಸಂಜೆಯ ವೇಳೆಯಲ್ಲಿ ಮಾಡುವವರೇ ಹೆಚ್ಚು. ಬಹುಶಃ ಹೀಟಿಂಗ್ ವ್ಯವಸ್ಥೆ ಇಲ್ಲದಾಗ, ಮೈತೆರೆದರೆ ಸಾಯುವಂಥ ಚಳಿ ಇದ್ದಾಗ ಈ ಪದ್ಧತಿ ಇಲ್ಲಿ ಬಳಕೆಗೆ ಬಂದಿರಬಹುದೇನೋ. ಆದರೆ ಅದನ್ನು ಭಾರತೀಯರೂ ಅನುಕರಿಸುತ್ತಿದ್ದಾರೆ ಇಲ್ಲಿಗೆ ಬಂದು. ನಮ್ಮ ದೇಶದಲ್ಲಿ ನೀರು ದೊರಕಿಸಲು ಕಷ್ಟ, ಕಾಯಿಸುವುದು ಶ್ರಮದಾಯಕ. ಇಷ್ಟಾದರೂ ಕಷ್ಟಪಟ್ಟು ವ್ಯವಸ್ಥೆ ಒದಗಿಸಿಕೊಂಡು ಜನರು ಸ್ನಾನಮಾಡುವರು. ಇಲ್ಲಿ ಇಪ್ಪತ್ನಾಲ್ಕು ಗಂಟೆಗಳ ಕಾಲವೂ ನೀರು ಬರುತ್ತಿರುತ್ತದೆ. ಕಾಯಿಸುವ ಶ್ರಮವಿಲ್ಲ; ನೀರು ಸಂಗ್ರಹಿಸುವ ಶ್ರಮವಿಲ್ಲ. ಆದರೂ ಜನ ಹಾಸಿಗೆಯಿಂದ ಏಳುತ್ತಲೇ ಮುಖತೊಳೆದು ತಿನ್ನಲು ತೊಡಗುತ್ತಾರೆ. 'ಬೆಳಿಗ್ಗೆ ಸ್ನಾನ-ಮುಗಿಸಿಕೊಂಡು ತಿನ್ನುವ ಅಭ್ಯಾಸ ಮಾಡಿರಿ' ಎಂದರೆ; 'ತುಂಬಾ ಬೇಗನೇ ಕೆಲಸಕ್ಕೆ ಹೋಗಬೇಕಾಗುತ್ತದೆ ನಮಗೆ ಸಮಯ ಸಾಕಾಗದು' ಎನ್ನುತ್ತಾರೆ. ಆರೂವರೆಗೆ ಕೆಲಸಕ್ಕೆ ಹೋಗಬೇಕಾಗುತ್ತದೆ ಎಂದಿಟ್ಟುಕೊಳ್ಳೋಣ. ಆರೂಕಾಲಿಗೆ ಎದ್ದು ಮುಖತೊಳೆದು ಓಡುವ ಬದಲಿಗೆ ಇನ್ನೊಂದು ಹದಿನೈದು ನಿಮಿಷ ಮೊದಲೇ ಎದ್ದು, ತಯಾರಾಗಿರುವ ಬಿಸಿನೀರನ್ನು ಮಿಂದುಹೋಗುವುದು ಕಷ್ಟಕರವೇನಲ್ಲ. ಸ್ನಾನ - ಒಂದು ದೈನಿಕ ಕ್ರಿಯೆ. ಅದು ಶ್ರಮದಾಯಕವೇನಲ್ಲ, ಶ್ರಮ ಪರಿಹಾರಕ. ಸ್ನಾನಮಾಡಿದರೆ ಪುನರ್ಜನ್ಮ ಪಡೆದಂತಹ ಅನುಭವವಾಗುವುದಷ್ಟೇ.

ಸ್ನಾನವನ್ನು ಇಲ್ಲಿಯ ಜನ ಕ್ರಮವಾಗಿ ಮಾಡುವುದಿಲ್ಲ ಎಂದು ಭಾರತೀಯರೂ ಅದನ್ನೇ ಅನುಕರಿಸತೊಡಗುತ್ತಾರೆ. ಬೆಳಗಿನ ಸ್ನಾನ ಭಾರತೀಯ ಸಂಸ್ಕೃತಿಯ ಸಲ್ಲಕ್ಷಣವಾದರೆ ರಾತ್ರಿಯ ಸ್ನಾನ ಈ ದೇಶಗಳ ಪದ್ಧತಿ. ಎರಡರ ಹಿಂದೆ ತುಂಬಾ ಅರ್ಥವ್ಯತ್ಯಾಸವಿದೆ. ಸುಪ್ರಭಾತದಲ್ಲಿ ಎದ್ದು ಮಿಂದು, ಆರ್ತಿಯಿಂದ ದೇವರನ್ನು ನೆನೆದು ದಿನವನ್ನು ಆರಂಭಿಸಬೇಕು ಎಂಬ ಪವಿತ್ರ ತತ್ತ್ವ ಬೆಳಗಿನ ಸ್ನಾನದಲ್ಲಿದ್ದರೆ, ಬೆಳಗಿನಿಂದ ಸಂಜೆಯವರೆಗೆ ಚೆನ್ನಾಗಿ ತಿಂದು ಕುಡಿದು, ರಾತ್ರಿವೇಳೆ ಸ್ನಾನ ಮಾಡಿ, ಸುಗಂಧ ದ್ರವ್ಯಗಳನ್ನು ಪಸರಿಸಿಕೊಂಡು, ಶಾರೀರಿಕ ಸುಖಕ್ಕೆ ಅಣಿಯಾಗುವ

ಲೌಕಿಕ ಪ್ರಜ್ಞೆ ಪಾಶ್ಚಿಮಾತ್ಯರ ಸ್ನಾನದಲ್ಲಿದೆ. ಉಭಯತರ ಮೌಲ್ಯಗಳಲ್ಲಿ ಅಜಗಜಾಂತರ ವ್ಯತ್ಯಾಸ. ಕೇವಲ ಸುಗಂಧ ದ್ರವ್ಯಗಳನ್ನೇ ಪಸರಿಸಿಕೊಳ್ಳುತ್ತ, ಸ್ನಾನ ಮಾಡದೆ ನಾಲ್ಕಾರು ದಿನ ಉಳಿಯುವ ಜನರಿದ್ದಾರೆ.

ಅದೇ ರೀತಿ ಕನ್ನಡಿಗಳ ಬಳಕೆ. ಭಾರತೀಯರಲ್ಲಿ ಒಂದು ನಂಬಿಕೆ ಮತ್ತು ಗಾದೆ ಇದೆ. 'ಕನ್ನಡಿಯನ್ನು ಹೆಚ್ಚು ನೋಡಬಾರದು ; ನೋಡಿದರೆ ಆಯುಷ್ಯ ಕಮ್ಮಿಯಾಗುತ್ತದೆ', ಎಂಬುದಾಗಿ. ಇದು ಒಂದು ಮೂಢನಂಬಿಕೆ ಎನಿಸಿದರೂ ಆಳವಾಗಿ ಚಿಂತಿಸಿದರೆ ಒಂದು ಸಿದ್ಧಾಂತವನ್ನು ಒಳಗೊಂಡಿದೆ ಎನಿಸುತ್ತದೆ. ಕನ್ನಡಿಯಲ್ಲಿ ತನ್ನ ತಾನು ಹೆಚ್ಚು ಹೆಚ್ಚು ನೋಡಿಕೊಳ್ಳತೊಡಗಿದಷ್ಟೂ ಶರೀರ ಪ್ರಜ್ಞೆ, ಅಹಂ ಪ್ರಜ್ಞೆ ಜಾಸ್ತಿಯಾಗುತ್ತ ಹೋಗುತ್ತದೆ. ಕೇವಲ ಸೌಂದರ್ಯ ರಕ್ಷಣೆ, ವೃದ್ಧಿಗಾಗಿ ಮನುಷ್ಯ ತನ್ನೆಲ್ಲ ಗಮನವನ್ನು ಹರಿಸತೊಡಗುತ್ತಾನೆ. ತಾನೇ ತನ್ನ ಆಕರ್ಷಣೆಯ, ಪ್ರೇಮದ ಕೇಂದ್ರವಾಗತೊಡಗುತ್ತಾನೆ. ಇದರಿಂದಾಗಿ ಅವನ ಶಕ್ತಿ, ಚಿಂತನೆ ವ್ಯರ್ಥವಾಗಲಾರಂಭಿಸುತ್ತದೆ. ಈ ಸಂಸ್ಕೃತಿಯಲ್ಲಿಯಾದರೋ ಕನ್ನಡಿಗಳ ಉಪಯೋಗ ಅತ್ಯಂತ ವಿಪರೀತ. ಕುಳಿತಲ್ಲಿ, ನಿಂತಲ್ಲಿ ಬಚ್ಚಲಿನಲ್ಲಿ ಶೌಚಗೃಹಗಳಲ್ಲಿ ಸಂಪೂರ್ಣವಾಗಿ ತನ್ನನ್ನು ತಾನು ನೋಡಿಕೊಳ್ಳಲು ಕನ್ನಡಿಗಳ ಸಮೂಹವೇ ಇರುತ್ತದೆ. ಆದರೆ ಭಾರತೀಯ ತತ್ತ್ವವೇತ್ತರೂ ಕನ್ನಡಿಯನ್ನು ನೋಡಿಕೊಳ್ಳಲು ಹೇಳುತ್ತಾರೆ ; ಅದು ಆತ್ಮನಿರೀಕ್ಷಣೆಯ (self-introspection) ಕನ್ನಡಿ, ತನ್ನ ಸ್ವರೂಪ ಸಾಕ್ಷಾತ್ಕಾರ ಮಾಡಿಸುವ ಆತ್ಮವಿದ್ಯೆಯ ಕನ್ನಡಿ.

ಭಾರತೀಯರಿಂದ ಪಾಶ್ಚಿಮಾತ್ಯರು ಕಲಿಯಬೇಕಾದ ಮತ್ತೊಂದು ಸಾಂಸ್ಕೃತಿಕ, ಸಾಮಾಜಿಕ ಮೌಲ್ಯವೆಂದರೆ 'ಕುಟುಂಬ ಪದ್ಧತಿ'. ಪರಸ್ಪರರಲ್ಲಿ ಆತ್ಮೀಯತೆಯ ಬೆಸುಗೆ ಇಲ್ಲದ ತೀರಾ ವೈಯಕ್ತಿಕ ಸ್ವಚ್ಛಂದ ಜೀವನವನ್ನು ಬಹುಪಾಲು ಪಾಶ್ಚಾತ್ಯರು ನಡೆಸುವರು. ಜೀವನ ಪರ್ಯಂತರ ಪರಸ್ಪರ ಅರ್ಥಮಾಡಿಕೊಂಡು ಬಾಳುವ ದಂಪತಿಗಳು ಇಲ್ಲವೆಂದೇನೂ ಅಲ್ಲ. ಆದರೆ ಅಂಥವರ ಸಂಖ್ಯೆ ಕಡಿಮೆ. ಹದಿನೇಳು ವರ್ಷವಾಗುತ್ತಲೇ ತನ್ನ ಅನ್ನ ತಾನು ಸಂಪಾದಿಸಬೇಕು ಎಂಬ ಪ್ರವೃತ್ತಿ ಬೆಳೆದಿರುವ ಈ ದೇಶಗಳಲ್ಲಿ, ಮತ್ತು ಸುಲಭವಾಗಿ ಏನಾದರೂ ಕೆಲಸ ಸಿಕ್ಕುವ ಅವಕಾಶ ಇರುವುದರಿಂದ, ಮಕ್ಕಳು ತೀರಾ ಸ್ವತಂತ್ರರಾಗಿ ಉಳಿದು ಬಿಡುವರು. ತಾಯಿ ತಂದೆಗಳ ಭಯ, ಹಿಡಿತ ಮಕ್ಕಳ ಮೇಲೆ ಏನೂ ಇಲ್ಲದಿರುವುದರಿಂದ ತಾವಾವ ಮಾರ್ಗ ತುಳಿಯುತ್ತಿದ್ದೇವೆಂಬ ಅರಿವೂ ಇಲ್ಲದೆ ಮಕ್ಕಳು ಅಡ್ಡದಾರಿ ಹಿಡಿಯುವರು. "ನಿಮ್ಮ ದೇಶದಲ್ಲಿ ಡೇಟಿಂಗ್ ಇಲ್ಲದೆ ಮದುವೆಯಾಗುವರೇ ? ಇದು ತುಂಬಾ ತಮಾಷೆ" ಎಂದು ಇಲ್ಲಿಯವರು ಕೇಳುವರು. ಒಮ್ಮೆ, ಅಮೆರಿಕಾದಲ್ಲಿ ಬೆಳೆದ ಲಿಂಗಾಯತ ಹುಡುಗನೊಬ್ಬ

Digitalized by e-Sahithya Documentation Forum
Sponsored by Sarayu Foundation Trust

ಕರ್ನಾಟಕಕ್ಕೆ ಬಂದು ಹೆಣ್ಣುಮಕ್ಕಳನ್ನು ನೋಡಿ, ಅವರ ತಂದೆಯೊಡನೆ "ನಿಮ್ಮ ಮಗಳು ಹೇಗಿದ್ದಾಳೆಂಬುದನ್ನು ತಿಳಿಯಬೇಕಾದರೆ ಒಟ್ಟಿಗೆ ಹೋಗಿ ಬರಲು ಅವಕಾಶ ಕೊಡಿರಿ. ಡೇಟಿಂಗ್ ಇಲ್ಲದೆ ಮದುವೆಯಾಗುವುದು ಹೇಗೆ ?" ಎಂದನಂತೆ, "ಇದು ಅಮೆರಿಕಾ ಅಲ್ಲ ಭಾರತ. ನಾವು ಹಾಗೆಲ್ಲ ಕಳಿಸುವುದಿಲ್ಲ" ಎಂದರಂತೆ ಆ ತಂದೆ. 'ಡೇಟಿಂಗ್' ಎಂಬ ವಿಲಕ್ಷಣ, ಸ್ವಚ್ಛಂದ ಪದ್ಧತಿ ಇಲ್ಲಿ ಸ್ವಾಭಾವಿಕ. ಆ ವಯಸ್ಸಿನ ಹುಡುಗ–ಹುಡುಗಿಯರಿಗೆ ಪರಸ್ಪರರ ಅಭಿರುಚಿ, ಮಾನಸಿಕ ಪ್ರವೃತ್ತಿಗಳನ್ನೂ ಅರಿಯುವ ಸಾಮರ್ಥ್ಯ ಬಲಿತಿರುವುದಿಲ್ಲ. ಹೀಗಾಗಿ ಕೇವಲ ದೈಹಿಕ ಕಾಮನೆಗಳ ದೃಷ್ಟಿಯಿಂದ ಪರಸ್ಪರ ಅರಿತಿದ್ದೇವೆಂದು ಭಾವಿಸುವರು. ನಿಜಕ್ಕೂ ಅರಿತೇ ಮದುವೆಯಾದುದಾದರೆ ಡೈವೋರ್ಸ್ ಸಂಖ್ಯೆ ಏಕಷ್ಟು ಇರಲು ಸಾಧ್ಯ ! ಕೆಲವು ಭಾರತೀಯರು, 'ಹಾಗಾದರೆ Arranged marriages ಭಾರತದಲ್ಲಿ ನಡೆಯುವವಲ್ಲ ಅವೆಲ್ಲವೂ ಯಶಸ್ವಿಯಾಗಿರುವವೇ ?' ಎಂದು ಹುಬ್ಬೇರಿಸುವರು. ಯಾವುದೂ ನೂರಕ್ಕೆ ನೂರು ಸರಿಯಾಗದು. ಅಂಕೆಸಂಖ್ಯೆಗಳ ದೃಷ್ಟಿಯಿಂದಲೇ ಎಲ್ಲವನ್ನೂ ಅಳೆಯಬೇಕಾಗುತ್ತದೆ. ಮದುವೆಯಾಯಿತು ಎಂದ ಮಾತ್ರಕ್ಕೇ ಇಲ್ಲಿ ಜೀವನ ಸುಭದ್ರವಾಯಿತೆಂದೇನೂ ಅಲ್ಲ ; ನೌಕರಿ ಸಿಕ್ಕಿತೆಂದ ಮಾತ್ರಕ್ಕೆ ಸುಭದ್ರತೆಯಾಯಿತೆಂದೇನೂ ಅಲ್ಲ. ಸಂಜೆ ಆರರ ತನಕ ನಗುನಗುತ್ತ ಮಾತನಾಡಿದ ಮಾಲಿಕ ಸಂಜೆ ಕರೆದು 'ನಾಳೆಯಿಂದ ನೀನು ಕೆಲಸಕ್ಕೆ ಬರಬೇಕಾದುದಿಲ್ಲ' ಎಂದುಬಿಡಬಹುದು. ಆಫೀಸಿಗೆ ಹೋಗಿ ಮನೆಗೆ ಬರುವಷ್ಟರಲ್ಲಿ ಹೆಂಡತಿಯು ಮಕ್ಕಳನ್ನು ಕರೆದುಕೊಂಡೋ ಬಿಟ್ಟೋ ಎಲ್ಲಿಗಾದರೂ ಹಾರಿಹೋಗಿರಬಹುದು, ಅಷ್ಟು ಅಭದ್ರ ಜೀವನ. ಸ್ವೇಚ್ಛಾ ಪ್ರವೃತ್ತಿ, ಪರಸ್ಪರರಲ್ಲಿ ಆತ್ಮೀಯತೆ ಸೌಹಾರ್ದತೆ ಇಲ್ಲದ ವೈವಾಹಿಕ, ಕೌಟುಂಬಿಕ ಪದ್ಧತಿ ಈ ಸಮಾಜದ ವಿನಾಶಕ್ಕೆ ನೇರ ಕಾರಣ. ಭಾರತೀಯರ ಅಚ್ಚುಮೆಚ್ಚಿನ ದಾಂಪತ್ಯ ಜೀವನ ನೋಡಿ ಕೆಲವು ಅಮೆರಿಕನ್ನರು ಆಶ್ಚರ್ಯ ಪಡುವುದೂ ಉಂಟು ಮತ್ತು ಅಸೂಯೆ ಪಡುವುದೂ ಉಂಟು. ಆದ್ದರಿಂದ ಭಾರತೀಯ ಧರ್ಮಗುರುಗಳು ಮಾಡಬಹುದಾದ ಕೆಲಸದೊಡನೆ ಭಾರತೀಯರು ಮುಖ್ಯವಾಗಿ ಹಿಂದುಗಳು ತಮ್ಮ ಜೀವನ ಪದ್ಧತಿ, ಮೌಲ್ಯಗಳನ್ನು ಅಮೆರಿಕಾ ನಿವಾಸಿಗಳಿಗೆ ಕಲಿಸಬೇಕು. ಅದರ ಬದಲಿಗೆ ತಾವೂ ತಮ್ಮ ಸಂಸ್ಕೃತಿ ಬಿಟ್ಟು ಇಲ್ಲಿಯವರಂತೇ ಆಗಬಾರದು. ತಮ್ಮ ಧಾರ್ಮಿಕ ಆಚಾರ–ವಿಚಾರಗಳನ್ನು ಪ್ರದರ್ಶಿಸಲು ಕೆಲವರು ಸಂಕೋಚ ಪಡುವುದುಂಟು. ಉತ್ಸುಕತೆ, ಅಭಿಮಾನಗಳಿಂದ ಅಮೆರಿಕನ್ನರು ಅರಿಯಲು ಯತ್ನಿಸುವಾಗ ಇವರು ತಮ್ಮ ಸಂಸ್ಕೃತಿ-ಧರ್ಮಗಳ ಬಗ್ಗೆ ಸಂಕೋಚಪಡುವುದು ದುಃಖಕರ ವಿಷಯ. ತಮ್ಮ ವೈಶಿಷ್ಟ್ಯ ಉಳಿಸಿಕೊಳ್ಳುವುದರ ಜೊತೆಗೆ ಅಮೆರಿಕನ್ನರನ್ನು ತಮ್ಮ ಸಂಘ-ಸಂಸ್ಥೆಗಳಲ್ಲಿ ಬರಮಾಡಿಕೊಂಡು, ಅವರಿಗೆ ಭಾರತೀಯ ಸಾಂಸ್ಕೃತಿಕ ಮೌಲ್ಯಗಳ ಪರಿಚಯ ಮಾಡಿ

ಕೊಡಬೇಕು. ಇಲ್ಲಿಯ ಉದ್ವಿಗ್ನಪೂರ್ಣ ಜೀವನ ನೋಡಿದರೆ ಭಾರತೀಯ ಜೀವನ ಪದ್ಧತಿ ಎಷ್ಟೋ ಮೇಲು ಎನ್ನಿಸದಿರದು. ಮತ್ತು ಭಾರತದ ಆಧ್ಯಾತ್ಮಿಕ ಸಂಪತ್ತಿನ ದೃಷ್ಟಿಯಿಂದ ನಿಜಕ್ಕೂ ನಾವು ಪುಣ್ಯವಂತರು ಎಂದು ಹೆಮ್ಮೆ ಪಡಬೇಕಾಗುತ್ತದೆ. ಆದ್ದರಿಂದ ವಿಪುಲವಾದ ಸಂಖ್ಯೆಯಲ್ಲಿ ಸಾಧು-ಸಂತರನ್ನು ನಮ್ಮ ದೇಶ ಲೋಕಕ್ಕೆ ಕಾಣಿಕೆಯಾಗಿ ನೀಡಿದೆ. ಕ್ರೈಸ್ತಧರ್ಮ ಇಸ್ಲಾಂ ಧರ್ಮಗಳು ಅನುಯಾಯಿಗಳ ಸಂಖ್ಯೆಯಲ್ಲಿ ದೊಡ್ಡವಿದ್ದರೂ, ಹಿಂದೂ ಪರಂಪರೆಯಷ್ಟು ಅಧಿಕ ಸಂಖ್ಯೆಯಲ್ಲಿ ಮಹಾತ್ಮರನ್ನು ನೀಡಲು ಆಗಿಲ್ಲ. ಅಂಥ ಫಲವತ್ತಾದ ಆಧ್ಯಾತ್ಮಿಕ ಕ್ಷೇತ್ರ ಭರತ ಭೂಮಿ. ಈ ಅಭಿಮಾನವು ಭಾರತದಲ್ಲಿರುವ ಹಿಂದುಗಳಲ್ಲಿ ಮತ್ತು ವಿದೇಶಗಳಲ್ಲಿರುವ ಹಿಂದುಗಳಲ್ಲಿ ಉಭಯತರಲ್ಲೂ ಬೆಳೆಯಬೇಕು.

—ಜಗದ್ಗುರು ಮಾತೆ ಮಹಾದೇವಿ

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರ ೩೫ನೆಯ ಹುಟ್ಟು ಹಬ್ಬ

ಪರಮ ಪೂಜ್ಯರಾದ ಶ್ರೀ ಜಗದ್ಗುರು ಮಾತೆ ಮಹಾದೇವಿಯವರು ಉತ್ತರ ಅಮೇರಿಕಾದ ಪ್ರವಾಸದಲ್ಲಿದ್ದು ಮಾರ್ಚ್ ತಿಂಗಳ ಮೂರನೆಯ ವಾರದಲ್ಲಿ ಮಾತೃಭೂಮಿಗೆ ಮರಳುವ ಸಾಧ್ಯತೆ ಇದೆ. ಅವರ 35ನೆಯ ಜನ್ಮದಿನೋತ್ಸವವನ್ನು ಪ್ರತಿವರ್ಷದಂತೆ ಇಲ್ಲಿ ಆಚರಿಸಲು ಆಗದು. ಈ ಬಾರಿ ಅಲ್ಲಿಯೇ ಆಚರಿಸಲಾಗುವುದು. ಆದ್ದರಿಂದ ಜನ್ಮದಿನೋತ್ಸವ ಶುಭಹಾರೈಕೆಗಳನ್ನು ಕಳಿಸುವವರು ನೇರವಾಗಿ ಅಲ್ಲಿಗೇ ಕಳಿಸಬೇಕು. ಭಾರತದಿಂದ ಪತ್ರಮುಟ್ಟಲು ಎರಡುವಾರಗಳ ಅವಧಿಯನ್ನು ಹಿಡಿದರೆ, ಫೆಬ್ರುವರಿ ಮೂರನೆಯವಾರದ ಸುಮಾರಿಗೆ ಅಂಚೆಗೆ ಹಾಕಿದರೆ ಮಾರ್ಚಿ ಎರಡನೆಯ ವಾರಕ್ಕೆ ತಪ್ಪದೆ ತಲುಪುತ್ತದೆ.

ವಿಳಾಸವು ಹೀಗಿದೆ :

Pujya Sri Jagadguru Mata Mahadevi
9, Hemingway Drive
Dix Hills,
NEW YORK-11746
U. S. A.

ಕಾರ್ಯದರ್ಶಿ
ವಿಶ್ವ ಕಲ್ಯಾಣ ಮಿಷನ್,
ಬೆಂಗಳೂರು-೧೦

ವಚನ ಪರುಷ

ಸದ್ಗುರು ಶ್ರೀ ಲಿಂಗಾನಂದ ಸ್ವಾಮಿಗಳು

ಭಕ್ತರ ಭಾವದಲ್ಲಿ ಸುಳಿವ ಸುಳುಹು
ವಿರಕ್ತರ ಜ್ಞಾನದಲ್ಲಿ ಹೊಳೆವ ಕಳೆಯು ನೀನೆಯಯ್ಯಾ!
ಸೂರ್ಯನ ಬೆಳಗಿನೊಳಗೆ ಸಚರಾಚರ ಪ್ರಾಣಿಗಳು ಸುಳಿವಂತೆ
ನಮ್ಮ ಕಟ್ಟಿನ ನೇಮದ ನಿಷ್ಠೆ ನೀನೆಯಯ್ಯಾ!
ಅಮರೇಶ್ವರ ಲಿಂಗದ ಒಡಲು ಸಂಗನ ಬಸವಣ್ಣನೆಂಬುದನು
ಮಡಿವಾಳ ಮಾಚಿ ತಂದೆಗಳು ಬಲ್ಲರು ಕಾಣಾ
ಸಂಗನ ಬಸವಣ್ಣಾ !

—ಆಯ್ದಕ್ಕಿ ಮಾರಯ್ಯ.

ವಿಶ್ವಗುರು ಬಸವಣ್ಣನವರ ವಿವಿಧ ಮುಖಗಳನ್ನು ಅರಿತವರು ಅವರ ಸಮಕಾಲೀನ ಶರಣರು. ಅವರು ಕೈಗೊಂಡ ಕ್ರಾಂತಿ, ಸುಧಾರಣೆ, ಕೊಟ್ಟ ತತ್ತ್ವ ಅಳವಡಿಸಿಕೊಂಡ ಆಚರಣೆಗೆ ಮಾರು ಹೋಗುವದರೊಡನೆ ಅವರ ದೈವೀವ್ಯಕ್ತಿತ್ವಕೆ ಶರಣಾದರು. ಹಾಗೆ ಶರಣಾಗಿ ಬಸವಣ್ಣನವರಲ್ಲಿ ಕಂಡ ಮಹಾನ್ ವ್ಯಕ್ತಿತ್ವವನ್ನು ಆಯ್ದಕ್ಕಿ ಮಾರಯ್ಯನವರು ಹೀಗೆ ಚಿತ್ರಿಸುತ್ತಾರೆ.

ಆಧ್ಯಾತ್ಮ ಪಥದಲ್ಲಿ ಮುನ್ನಡೆವ ಭಕ್ತರ, ಸಾತ್ವಿಕ ಸದ್ಗೃಹಸ್ಥರ ಭಾವದಲ್ಲಿ ಪ್ರತಿಷ್ಠಾಪಿತನಾದ ವ್ಯಕ್ತಿಯಾರು ? ಬಸವಣ್ಣನವರು ! ತೀಕ್ಷ್ಣವಾದ ವೈರಾಗ್ಯ ಪಥದಲ್ಲಿ ನಡೆಯಬಯಸುವ ವಿರಕ್ತರ ಹೃದಯ ಮಧ್ಯದಲ್ಲಿದ್ದು, ಪರಂಜ್ಯೋತಿಯಾಗಿ ಹೊಳೆಯುತ್ತ, ಚಿತ್ಕಳೆಯಾಗಿ ಪಥವ ತೋರುವರಾರು ? ಬಸವಣ್ಣನವರು. ಇದು ಹೇಗೆ ? ಮತ್ತು ಏಕೆ ?

ಸತಿಯ ಕಂಡು ವ್ರತಿಯಾದ ಬಸವಣ್ಣ
ವ್ರತಿಯಾಗಿ ಬ್ರಹ್ಮಚಾರಿಯಾದ ಬಸವಣ್ಣ
ಬ್ರಹ್ಮಚಾರಿಯಾಗಿ ಭವಗೆಟ್ಟ ಬಸವಣ್ಣ
ಗುಹೇಶ್ವರ ಲಿಂಗದಲ್ಲಿ ಬ್ರಹ್ಮಚಾರಿಯಾದವ
ಬಸವಣ್ಣನೊಬ್ಬನೆ !

Digitalized by e-Sahithya Documentation Forum
Sponsored by Sarayu Foundation Trust

"ಸತಿಪತಿ ಉಭಯದೃಷ್ಟಿ ಏಕವಾಗಿ ಮಾಡಬಲ್ಲಡೆ ಅದೇ ಮಾಟ ಕೂಡಲ ಸಂಗಮದೇವನ ಕೂಡುವ ಕೂಟ" ಎಂದು ನುಡಿದು ಒಂದೇ ಆದರ್ಶ, ಒಂದೇ ಅಭಿರುಚಿ, ಎರಡಿಲ್ಲದ ನಿಷ್ಠೆ, ಪರಧನ-ಪರಸತಿಯನೊಲ್ಲದ ನೇಮ ಇವುಗಳಿಂದ ಅಲಂಕೃತರಾದ ಗೃಹಸ್ಥ ದಂಪತಿಗಳೂ ಶಿವನೊಲಿಮೆಗೆ ಪಾತ್ರರಾಗಬಲ್ಲರು ಎಂದು ಸಾರಿ, ಬಹುಸಂಖ್ಯಾತ ವರ್ಗದವರಾದ ಗೃಹಸ್ಥರಿಗೂ ಮೋಕ್ಷಮಂದಿರದ ಹೆಬ್ಬಾಗಿಲನ್ನು ತೆರೆದರು ಬಸವಣ್ಣನವರು. ಸತ್ಯಶುದ್ಧ ಕಾಯಕ, ನಿಸ್ವಾರ್ಥ ದಾಸೋಹ, ನಿತ್ಯದೇವಪೂಜೆ ಇವು ಮೋಕ್ಷಮಂದಿರದ ಒಳಕ್ಕೆ ಪ್ರವೇಶಿಸಲು ನೀಡಬೇಕಾದ ನಾಣ್ಯಗಳು ಎಂದು ಲೌಕಿಕ ಜೀವನವ ಬಾಳಬಯಸಿದ ಜನಕ್ಕೆ ದಾರಿ ತೋರಿದರು.

ಏಕಾಂತ ಅಥವಾ ಏಕಾಂತವಲ್ಲದಿದ್ದರೂ(loneliness) ಏಕಾಂತ ಜೀವಿಗಳಾಗಿ ಲೋಕ ಹಿತಾರ್ಥಕ್ಕೆ. ಧರ್ಮಪ್ರಸಾರಕ್ಕೆ ತ್ಯಾಗಜೀವನ ಸ್ವೀಕರಿಸಿ ಬಾಳುವ ವೈರಾಗ್ಯ ಮೂರ್ತಿಗಳಿಗೂ ಬಸವಣ್ಣನವರು ಅನುಕರಣೀಯರಾದರು, ಆದರ್ಶವಾದರು, ಆರಾಧ್ಯರಾದರು. ಸತಿಯರನ್ನು ವೈವಾಹಿಕ ಧರ್ಮದಿಂದ ಸ್ವೀಕರಿಸಿದರೂ ವಿಶೇಷ ವ್ರತವನ್ನು ತೊಟ್ಟರು. ಬ್ರಹ್ಮಚಾರಿಯಾಗಿ ಬಾಳಲು ಸಂಕಲ್ಪಿಸಿದರು. ಸತ್ವಗುಣಶೀಲ, ಸೌಮ್ಯಮೂರ್ತಿ ಗಂಗಾಂಬಿಕೆ, ಜ್ಞಾನನಿಧಿ, ಪೃಥ್ವಿಗಗ್ಗಳ ಚೆಲುವೆ ನೀಲಲೋಚನೆಯರಂತಹ ಪತ್ನಿಯರಿದ್ದರೂ ಬ್ರಹ್ಮಚರ್ಯ ವ್ರತತೊಟ್ಟ ಧೀಮಂತ ಸಂಯಮಿ ಬಸವಣ್ಣನವರು. "ಗುಹೇಶ್ವರ ಲಿಂಗದಲ್ಲಿ ಬ್ರಹ್ಮಚಾರಿಯಾದವನು ಬಸವಣ್ಣನೊಬ್ಬನೆ" ಎಂಬಲ್ಲಿ ಪ್ರಭುದೇವರು ಆಶ್ಚರ್ಯಯುಕ್ತ ಅಭಿಮಾನ-ಗೌರವ ಸಲ್ಲಿಸುತ್ತಿರುವರು. ವಿವಾಹಿತ ಪತ್ನಿಯಿದ್ದು ಹಲವು ಹನ್ನೊಂದೆಸೆಗೆ ಹರಿದಾಡುವ ಮಂಗನಂಥ ಮನದ ಹೀನರು ಕೆಲವರು; ತನ್ನ ಪತ್ನಿಯನ್ನುಳಿದು ಅನ್ಯರನ್ನು ಕಣ್ಣೆತ್ತಿ ನೋಡೆನೆಂಬ ವ್ರತಿಗಳಾದ ಸಜ್ಜನ ಸದ್ಗೃಹಸ್ಥರು ಮತ್ತೆ ಕೆಲವರು. ಸ್ತ್ರೀಯದರ್ಶನ, ಸಂಭಾಷಣೆ ಯಾವುದೂ ಬೇಡ, ತಮ್ಮ ವ್ರತ-ನೇಮಕ್ಕೆಲ್ಲಿ ಚ್ಯುತಿ ಬಂದಿತೋ ಎಂದು ಹೆತ್ತ ತಾಯಿಯನ್ನೂ ನೋಡದ ವಿರಕ್ತರು ಕೆಲವರು. ಸ್ವತಃ ಕೈವಿಡಿದ ಪತ್ನಿಯರಲ್ಲೇ ಮಾತೃತ್ವವನ್ನು ಅರಸಿ, ಗೌರವಿಸಿ, ಮಾತೃ ಸ್ಥಾನದಲ್ಲಿರಿಸಿ ಬ್ರಹ್ಮಚರ್ಯಪಾಲನೆಯನ್ನು ಕೈಗೊಂಡವರು ಅಪರೂಪದವರು, ಬೆರಳಮೇಲೆಣಿಸುವಷ್ಟು. ಅಂಥ ಮಹಾನುಭಾವರು ಬಸವಣ್ಣನವರು. ಅವರು ಪರಮ ವಿರಕ್ತರು. ಪುರುಷಭಾವವನ್ನು ಮರೆತು ದೇವನಿಗೆ ಸತಿಯಾದವರು; ಸ್ತ್ರೀ ಭಾವ ಮರೆತು ಪತ್ನಿಯರಲ್ಲಿ ದೇವರನ್ನು ಕಂಡವರು. ಎಂಥ ವಿಶೇಷ ಸಾಧನೆ! ಸ್ತ್ರೀಗೆ ಈಡಾಗುವವರು ಬಹುಪಾಲು: ಸ್ತ್ರೀಯು ಮಾಯೆಯೆಂದು ಅಂಜಿ ಹೋಗುವವರು ಕೆಲವರು. ಸ್ತ್ರೀಯಲ್ಲಿ ದೈವತ್ವವನ್ನು ಗುರುತಿಸಿ ನಿರ್ವಿಕಾರಿಗಳಾಗುವವರು ವಿರಳ. ಅಂಥ ಮಹಾಸಾಧಕ ಬಸವಣ್ಣನವರು ಅಂತೆಯೇ 'ಅಸಾಧ್ಯಸಾಧಕ ಬಸವಣ್ಣ' ಎನ್ನುತ್ತಾರೆ ಚನ್ನಬಸವಣ್ಣನವರು.

ಆಯ್ದಕ್ಕಿ ಮಾರಯ್ಯನವರು ಅತ್ಯಂತ ಮಹತ್ವಪೂರ್ಣವಾದ ಒಂದು ಮಾತನ್ನಾಡುತ್ತಾರೆ. 'ಸೂರ್ಯನ ಬೆಳಗಿನೊಳಗೆ ಸಚರಾಚರ ಪ್ರಾಣಿಗಳು ಸುಳಿವಂತೆ, ಬಸವಣ್ಣನ ನೇಮದ ಕಟ್ಟನೊಳಗೆ ನಾವೆಲ್ಲ ಸುಳಿವೆವು' ಎಂಬುದಾಗಿ, constitution maker (ಸಂವಿಧಾನ ಕರ್ತ)ಬಸವಣ್ಣನವರು ಎಂಬುದು ಶರಣರ ದೃಢ ಅಭಿಪ್ರಾಯ. ಪೃಥ್ವಿ ಮಂಡಲದ ಸಕಲ ಆಗು ಹೋಗುಗಳ ನಿರ್ಣಾಯಕ ಶಕ್ತಿ ಸೂರ್ಯ. ಅವನ ಸೂತ್ರವಿಡಿದೇ ಸೂರ್ಯೋದಯ-ಸೂರ್ಯಾಸ್ತ, ಹಗಲು-ರಾತ್ರಿ, ವಿವಿಧ ಋತುಗಳ ಆಗಮನ-ನಿರ್ಗಮನ. ಅದೇ ರೀತಿ ಬಸವ ಭಾನುವಿನ ನಿಯಮಾವಳಿವಿಡಿದೇ ಅವನ ಧರ್ಮಾನುಯಾಯಿಯ ದಿನಚರಿ. ಬಸವಣ್ಣನವರು ಒಲಿದುದನ್ನು ಅವನ ಅನುಯಾಯಿ ಒಪ್ಪಬೇಕು; ಅವರು ಒಲ್ಲದುದನ್ನು ಬಿಡಬೇಕು. "ಅಮರೇಶ್ವರ ಲಿಂಗದ ಒಡಲು ಸಂಗನ ಬಸವಣ್ಣ" ಎಂಬುವಲ್ಲಿ ಆಯ್ದಕ್ಕಿ ಮಾರಯ್ಯನವರು ಬಸವಣ್ಣನವರಲ್ಲಿ ದೈವತ್ವದ ಪರಾಕಾಷ್ಠತೆಯನ್ನು ಕಾಣುತ್ತಾರೆ. ನಿರಾಕಾರನಾದ, ಒಡಲಿಲ್ಲದ ಪರಮಾತ್ಮನ ಒಡಲಾವುದು ? ಪ್ರವಾದಿಕ ಬದುಕು ಬದುಕಿದ ಬಸವಣ್ಣನಂತಹವರ ದೇಹ. ಕ್ರೈಸ್ತರಲ್ಲಿ ಬರುವ God came in flesh and blood in the form of Jesus ಎಂಬ ಕಲ್ಪನೆಗೂ ಆಯ್ದಕ್ಕಿ ಮಾರಯ್ಯನ ವಿಚಾರಕ್ಕೂ ತುಂಬಾ ಸಾಮ್ಯವಿದೆ. ನಿರಾಕಾರ ನಿರ್ಗುಣನಾದ ಪರಮಾತ್ಮನು ಹುಟ್ಟಲಾರನು, ಸಾಯಲಾರನು ! ಅವಯವ ರಹಿತನಾದ ಅವನು ಸಾವಯುವ ಸಹಿತರಾದ ಬಸವಣ್ಣನವರಂಥ ಪ್ರವಾದಿಗಳಲ್ಲಿ ತನ್ನ ವಿಶೇಷ ಶಕ್ತಿಯನ್ನಿಳುಹಿ ಲೋಕವನ್ನುದ್ಧರಿಸುವನು. ಒಂದು ದೇಶ ಓರ್ವರಾಯಭಾರಿಯ ಮುಖಾಂತರ ವ್ಯವಹರಿಸುವಂತೆ, ದೇವರೂ ತನ್ನ ರಾಯಭಾರಿಗಳನ್ನಾಗಿ ಈ ಪ್ರವಾದಿಗಳನ್ನು ಲೋಕದಲ್ಲಿರಿಸುವನು. ಅಂಥ ವಿಶೇಷ ರಾಯಭಾರಿ, ದೇವರ ಒಡಲು ವಿಶ್ವಗುರು ಬಸವಣ್ಣನವರು.

ನಗೆ-ಹನಿ

[ಮೇಷ್ಟ್ರು ವ್ಯಾಕರಣ ಪಾಠ ಮಾಡುತ್ತಿರುವ ಸಂದರ್ಭ]

ಮೇಷ್ಟ್ರು :- ಶಂಕರ ಹುಲಿಯು ಬರುತ್ತಿದೆ, ಇದು ಯಾವ ಕಾಲ ?

ಶಂಕರ :- ಇದು ಅಪಾಯ ಕಾಲ ಸಾರ್.

ಮೇಷ್ಟ್ರು :- ನೀನು ಹೇಳಮ್ಮ ಕಲ್ಯಾಣಿ.

ಕಲ್ಯಾಣಿ – ಇದು ಸಾವಿನ ಕಾಲ ಸಾರ್.

Digitalized by e-Sahithya Documentation Forum
Sponsored by Sarayu Foundation Trust

ಸಮಸ್ಯೆ ಸಮಾಧಾನ!

ಉಮಾ ಮಹೇಶ್ವರಿ, ಬೀದರ್

* ಒಬ್ಬನು ಮಹಾನ್ ವ್ಯಕ್ತಿಯಾಗಲು ದೈವೀಕಾರುಣ್ಯ ಮುಖ್ಯವೋ ? ಪ್ರಚಾರ ಮುಖ್ಯವೋ ?

* 'ಚೆನ್ನಾಗಿ ಜಾಹೀರಾತು ಮಾಡಿದ ವಸ್ತುಗಳು ಅರ್ಧ ಮಾರಾಟವಾದಂತೆಯೇ' ಎಂಬ ಒಂದು ಇಂಗ್ಲಿಷ್ ಗಾದೆ ಇದೆ. ಅದರಂತೆ ಮೂಢರ ಗುಂಪಿನಲ್ಲಿ ದೊಡ್ಡವನಾಗಲು ಪ್ರಚಾರ; ವಿವೇಕಿಗಳ ವಲಯದಲ್ಲಿ ಮೆಚ್ಚುಗೆ ಗಳಿಸಲು ಪ್ರತಿಭೆ–ಸಾಮರ್ಥ್ಯಗಳು ಬೇಕು. ಇದು ಲೋಕದ ಪರಿಪಾಠವೇ ಆದರೂ ಅದರಿಂದ ಅವನ ವೈಯಕ್ತಿಕ ಆತ್ಮೋದ್ಧಾರವಾಗದು. ಆಧ್ಯಾತ್ಮಶಾಸ್ತ್ರದ ದೃಷ್ಟಿಯಿಂದ ಹೇಳಬೇಕಾದರೆ ದೈವ ಕೃಪೆಯೇ ಮುಖ್ಯ. ದೈವೀಕಾರುಣ್ಯ, ಸ್ವಂತ ಪ್ರತಿಭೆಯಿಂದ ಗಳಿಸಿದ ವ್ಯಕ್ತಿತ್ವ, ಮಲ್ಲಿಗೆಯಿಂದ ಸೂಸುವ ಕಂಪು; ಬರೀ ಏಜಂಟರ ಪ್ರಚಾರದಿಂದ ಬಂದುದು, ಪ್ಲಾಸ್ಟಿಕ್ ಹೂವಿಗೆ ಸಿಡಿಸಿದ ಸುವಾಸನೆ. ಬೇಗನೇ ಬಯಲಾಗದಿರದು.

ರಾಜಕುಮಾರ ಧನಶೆಟ್ಟಿ, ಇಂಡಿ.

* ಮಾನವನಿಂದ ನಿರ್ಮಿತವಾದ ಎಲ್ಲ ವಸ್ತುಗಳ ಬೆಲೆ ಗಗನಕ್ಕೇರಿದರೂ ಮಾನವನ ಬೆಲೆ ಮಾತ್ರ ಇಳಿದಿದೆಯಲ್ಲಾ ಏಕೆ ?

* ಮಾನವನಿಂದ ನಿರ್ಮಿತವಾದ ವಸ್ತುಗಳ ಬೆಲೆ ಏರಿರುವುದು ಯಾರಿಂದ ಎಂದು ಕೊಂಡಿರಿ ? ಮಾನವನಿಂದಲೇ ಅಲ್ಲವೆ ! ಅದೇ ರೀತಿ ತನ್ನ ಬೆಲೆ ಇಳಿಯಲಿಕ್ಕೂ ಕಾರಣ ಪುರುಷ ಮಾನವನೇ ! ತನ್ನ ಬೆಲೆಯನ್ನು ತಾನೇ ಕಂಡುಕೊಳ್ಳುವ ಪ್ರಯತ್ನ ಅವನೇ ಮಾಡಬೇಕಾಗಿದೆ. ಅರಿತೊಡೆ ಶರಣ, ಮರೆತೊಡೆ ಮಾನವ, ಅರಿತೂ ದುಷ್ಕಟಗಳಲ್ಲಿ ತೊಡಗುವವ ದಾನವ.

ಸು. ಮಲ್ಲಿಕಾರ್ಜುನಪ್ಪ, ಮತ್ತೀಪುರ.

* ಜೈನ ಮತದ ಸ್ಥಾಪಕ–ಮಹಾವೀರ, ಬೌದ್ಧಮತದ ಸ್ಥಾಪಕ–ಬುದ್ಧ, ಸಿಕ್ಖ ಮತದ ಸ್ಥಾಪಕ–ಗುರುನಾನಕ್, ಮುಸಲ್ಮಾನ ಮತದ ಸ್ಥಾಪಕ–ಪೈಗಂಬರ್,

ಕ್ರೈಸ್ತಮತದ ಸ್ಥಾಪಕ–ಏಸುಕ್ರಿಸ್ತ. ಅಂತೆಯೇ ವೀರಶೈವ ಮತದ ಸ್ಥಾಪಕರು ಯಾರು ?

* ಮಲ್ಲಿಕಾರ್ಜುನಪ್ಪನವರೇ, ಹಳ್ಳಿಗಳಲ್ಲಿ ಒಂದು ಗಾದೆಯನ್ನು ಹೇಳುವುದನ್ನು ಕೇಳಿರಬಹುದು. ನಿಮ್ಮ ಪುರದಲ್ಲೂ ಹೇಳಬಹುದು, ಒಂದು ಊರಿನಲ್ಲಿ ರಾಮಾಯಣ ನಾಟಕ ನಡೆಯುತ್ತಿದ್ದು ಇಬ್ಬರು ದಂಪತಿಗಳು ನೋಡಲೆಂದು ಹೋಗಿದ್ದರಂತೆ. ನಾಟಕ ನೋಡಿ ಬರುವಾಗ ಪತಿ ಕೇಳಿದನಂತೆ ಪತ್ನಿಗೆ, ರಾಮನಿಗೂ ಸೀತೆಗೂ ಏನು ಸಂಬಂಧ ಎಂದು ? ಹಾಗಿದೆ ನಿಮ್ಮ ಪ್ರಶ್ನೆ. ಕಲ್ಯಾಣ ಕಿರಣ ಪತ್ರಿಕೆಯನ್ನು ಇಷ್ಟು ದಿನ ಓದಿಯಾದರೂ ಏನು ಸಾರ್ಥಕ ! ಹೋಗಲಿ, ಬಸವಣ್ಣನನ್ನೇ ಕೇಳುವ ಸಾಮರ್ಥ್ಯ ಬೆಳೆಸಿಕೊಳ್ಳಿ.

ಶಾರದಾ ರಾಜಶೇಖರ್, ದಾವಣಗೆರೆ.

* ಇಷ್ಟಲಿಂಗಪೂಜೆ ಕೇವಲ ಒಂದು ಭಕ್ತಿ ಸಾಧನ ಮಾತ್ರ. ಅದು ಎಲ್ಲ ಯೋಗಗಳ ಸಮನ್ವಯ ಎಂದು ಬರೆದಿದ್ದೀರಲ್ಲಾ (ದೇವಪೂಜಾ ವಿಧಾನ ಎಂಬ ಗ್ರಂಥದಲ್ಲಿ) ಇದು ಹೇಗೆ ?

* ಕೇವಲ ಭಕ್ತಿ ಸಾಧನವಾಗಿದ್ದ ವಿಗ್ರಹಾರಾಧನೆ, ಸ್ಥಾವರಲಿಂಗಾರ್ಚನೆಗಳನ್ನು ಅಷ್ಟಾಗಿ ಮೆಚ್ಚದೆ, ಸರ್ವಯೋಗಗಳ ಸಮನ್ವಯವಾಗಿ ಇಷ್ಟಲಿಂಗ ಪೂಜೆಯನ್ನು ಬಸವಣ್ಣನವರು ಕೊಟ್ಟರು. ಇದು ಹೇಗೆ ಎಂಬುದನ್ನು ನೋಡೋಣ. ಇಷ್ಟಲಿಂಗಕ್ಕೆ ತಾತ್ತ್ವಿಕ, ಸಾಮಾಜಿಕ, ಆರ್ಥಿಕ, ಮತ್ತು ಯೋಗಿಕ ಮಹತ್ವವಿದೆ. ದೇವರು ನಿರಾಕಾರ; ಅವನ ಸಾಕಾರ ಬ್ರಹ್ಮಾಂಡ ಗೋಲಾಕಾರ. ಕಾರ್ಯದ ಮೂಲಕ ಕರ್ತನ ವ್ಯಕ್ತಿತ್ವ ಗೋಚರವಾಗುವುದು ಆದ್ದರಿಂದ ಗೋಲಾಕಾರದ ಮುಖಾಂತರ ಅವನನ್ನು ಅರ್ಚಿಸಬೇಕು. ಇದು ತಾತ್ತ್ವಿಕ ಸಂಕೇತ. ಅದನ್ನು ಧರಿಸಿದವನು ಯಾರೇ ಇರಲಿ ಅವನು ದೇವರ ಮಗ, ದೇವಾಯತ, ದೇವಭಕ್ತ. ಪೂರ್ವಜಾತಿಯ ನಿವೃತ್ತಿ ಮಾಡಿಕೊಂಡ ಅವನಲ್ಲಿ ಮೇಲು-ಕೀಳು ಎಂದೆಣಿಸದೆ ಧರ್ಮಬಂಧುವೆಂದು ಭಾವಿಸಿ ಸಮಭಾವದಿಂದ ಕಾಣಬೇಕು. ಇದು ಸಾಮಾಜಿಕ. ದೇವಾಲಯ ಕಟ್ಟುವುದು ವೆಚ್ಚದಾಯಕ ಮತ್ತು ಪೂಜಾರಿಯ ಮುಖಾಂತರ ಗೈವ ಪೂಜೆಯೂ ಖರ್ಚಿನ ಬಾಬ್ತು. ತನ್ನ ದೇಹವನ್ನು ದೇವಾಲಯ ಮಾಡಿ, ತಾನೇ ಮನೆಯಲ್ಲಿ ನಿತ್ಯಾರ್ಚನೆ ಗೈದು, ಸರಳವಾದ ಪರಿಕರಗಳಿಂದಲೇ ದೇವನನ್ನು ಆರಾಧಿಸಲು ಸಾಧ್ಯವಿದೆ. ಇದು ಆರ್ಥಿಕ ವಿಚಾರದ ಕ್ರಾಂತಿ. ಇಷ್ಟಲಿಂಗವನ್ನು ಕೇವಲ ಪೂಜೆಗೆ ಮಾತ್ರ ಬಳಸದೆ ದೃಷ್ಟಿಯೋಗ, ತ್ರಾಟಕ ಯೋಗಕ್ಕೆ ಬಳಸಿಕೊಳ್ಳಬೇಕು. ಎಂಬುದೇ ಯೋಗಿಕ ಸಂಕೇತ.

Digitalized by e-Sahithya Documentation Forum
Sponsored by Sarayu Foundation Trust

ಇಷ್ಟಲಿಂಗ ಪೂಜೆಯಲ್ಲಿ ಎಲ್ಲ ಯೋಗಗಳ ಸಮನ್ವಯ ಹೇಗಾಗಿದೆ ನೋಡುವಾ. ಪೂಜೆಗಾಗಿ ಒಂದು ವಿಶಿಷ್ಟ ಆಸನದಲ್ಲಿ ಕೂಡ್ರಬೇಕು. ಸ್ವಸ್ತಿಕಾಸನ, ಸಿದ್ಧಾಸನ, ಪದ್ಮಾಸನ, ಸುಖಾಸನ ಯಾವುದರಲ್ಲಾದರೂ ನಿಶ್ಚಲನಾಗಿ ಕುಳಿತುಕೊಂಡರೆ ಆಸನ ಸಿದ್ಧಿಯಾಗುವುದು; ಇದು ಹಠಯೋಗ. ನೀರು, ಪತ್ರೆ, ಪುಷ್ಪ, ಊದಿನಕಡ್ಡಿ, ಕರ್ಪೂರ ಇವೆಲ್ಲ ಅರ್ಪಿಸಿ ಮಾಡುವುದು ಅರ್ಚನಾ ಭಾಗ-ಭಕ್ತಿಯೋಗ. ಆನಂತರ ದೇವರ ಸ್ವರೂಪ ಕುರಿತು ಚಿಂತನೆಗೈವುದು ಜ್ಞಾನಯೋಗ. ಹನ್ನೆರಡಂಗುಲ ದೂರದಲ್ಲಿರಿಸಿ ನೆಟ್ಟ ದೃಷ್ಟಿಯಿಂದ ನಿರುಕಿಸುವುದು, ಅನಿಮಿಷ ದೃಷ್ಟಿ. ಅರೆತೆರೆದ ನೇತ್ರದಿಂದ ನೋಡುವುದು ತ್ರಾಟಕಯೋಗ; ಕಣ್ಣುಮುಚ್ಚಿ ದೃಷ್ಟಿಯನ್ನು ಅಂತರ್ಮುಖಗೊಳಿಸಿ ನಿಲ್ಲಿಸಿ, ಧ್ಯಾನಿಸುವುದು ಧ್ಯಾನಯೋಗ (ರಾಜಯೋಗ); ಆಗಲೇ ಷಡಕ್ಷರಿ ಮಂತ್ರವನ್ನು ಧ್ಯಾನಿಸುವುದು ಮಂತ್ರಯೋಗ. ಈ ಅನುಸಂಧಾನದಿಂದ ತನ್ನಂತರ್ಗತ ಕುಂಡಲಿನೀ ಶಕ್ತಿಯನ್ನು ಪ್ರಾಣಲಿಂಗಿ ಸ್ಥಲದಲ್ಲಿ ಜಾಗೃತಗೊಳಿಸುವುದು ಕುಂಡಲಿನೀಯೋಗ. ಹೀಗೆ ಆ ಎಲ್ಲ ಬೇರೆ ಬೇರೆ ಯೋಗಗಳು ಕುದುರೆಯೊಂದನ್ನು ಹತ್ತಿ ಸವಾರಿ ಮಾಡಿ, ಪ್ರಯಾಣ ಮಾಡಿ ಊರು ಸೇರಿದಂತಾದರೆ ಶಿವಯೋಗವು ಭಕ್ತಿ, ಜ್ಞಾನ, ಧ್ಯಾನ, ಮುಂತಾದ ಯೋಗಗಳೆಂಬ ಕುದುರೆಗಳನ್ನು ಕಟ್ಟಿಕೊಂಡು ಶಿವಯೋಗವೆಂಬ ರಥದಲ್ಲಿ ಕುಳಿತು ಊರು ಸೇರಿದಂತೆ. ಪೂಜೆಯಷ್ಟೇ ಕಾಯಕಮತ್ತು ಸೇವೆಗಳಿಗೂ ಬಸವಧರ್ಮ ಸ್ಥಾನ ಕೊಟ್ಟಿರುವುದರಿಂದ, ಅದು ಕರ್ಮಯೋಗದ ಅಂಶವನ್ನೂ ಹೊಂದಿದೆ. ಹೀಗೆ ಶಿವಯೋಗ ಎಲ್ಲ ಯೋಗಗಳ ಸಮನ್ವಯ.

ನಗೆ-ಹನಿ

ಪ್ರಸಾದ :-ಅಜ್ಜ ರಾತ್ರಿ ಮಲಗುವಾಗ ನೀವು ಕನ್ನಡಕವನ್ನು ಏಕೆ ಹಾಕಿಕೊಳ್ಳುವಿರಿ?
ಅಜ್ಜ :- ಕನಸಿನಲ್ಲಿ ನಡೆಯುವುದನ್ನೆಲ್ಲಾ ನೋಡುವುದಕ್ಕೆ.

ನಗೆ-ಹನಿ

ಬಸಪ್ಪ :- ಸಣ್ಣಪ್ಪ, ದಪ್ಪಗಿರುವವರು ಸ್ವಭಾವತಃ ಏಕೆ ಒಳ್ಳೆಯವರಾಗಿರುತ್ತಾರೆ ?
ಸಣ್ಣಪ್ಪ :- ಏಕೆಂದರೆ ಅವರಿಗೆ ಜಗಳ ಆಡಲು, ಓಡಲು ಆಗುವುದಿಲ್ಲ.

ಬಾಳಬುತ್ತಿ

—ಮಾತಾಜಿ

ಕ್ಷುಲ್ಲಕರು

ಕೆಲವು ಜನ ತುಂಬಾ ಕ್ಷುಲ್ಲಕ ಸ್ವಭಾವದವರು, ಅಹಂ ಪ್ರಜ್ಞೆಯವರೂ ಆಗಿರುತ್ತಾರೆ. ತಮ್ಮ ಕ್ಷುಲ್ಲಕ ಬುದ್ಧಿಯಿಂದಾಗಿ ಅಥವಾ ಅಹಂ ಪ್ರಜ್ಞೆಯ ತೃಪ್ತಿಗಾಗಿ ದುಡುಕಿ ಏನೇನೋ ಮಾಡಿ ಬಿಡುತ್ತಾರೆ. ಕೆಲವರು ಸಂಸಾರಗಳನ್ನು ಒಡೆಯುತ್ತಾರೆ; ಸಂಘ-ಸಂಸ್ಥೆಗಳನ್ನು ಒಡೆಯುತ್ತಾರೆ. ನಂತರ ಕೆಲವೊಮ್ಮೆ ತಮ್ಮ ಹೇಸಿ ಕಾರ್ಯಕ್ಕಾಗಿ ಪಶ್ಚಾತ್ತಾಪ ಪಡುವುದುಂಟು. ಆದರೇನಂತೆ ; ಕೊಳ್ಳಿ ಹಚ್ಚಿ ಮನೆ ಬೆಂದು ಹೋದ ಬಳಿಕ ಪಶ್ಚಾತ್ತಾಪ ಪಟ್ಟರೆ ಆದ ನಾಶವನ್ನಂತೂ ಸರಿಪಡಿಸಲು ಎಂದಿಗೂ ಆಗದಷ್ಟೆ. ಇದಕ್ಕೊಂದು ಕಥೆ ನೆನಪಾಗುತ್ತದೆ.

ಒಂದು ಹಳ್ಳಿಯಲ್ಲಿ ಓರ್ವ ಕೂಲಿಕಾರ ಸ್ತ್ರೀ ಇದ್ದಳು. ಆಕೆ ಬಹಳ ಕಷ್ಟಪಟ್ಟು ಹಣ ಕೂಡಿಟ್ಟು ಒಂದು ಸೀರೆಯನ್ನು ಕೊಂಡುಕೊಂಡಳು. ತನ್ನ ಸೀರೆಯು ಹಲವಾರು ಜನರ ಗಮನ ಮತ್ತು ಮೆಚ್ಚುಗೆ ಪಡೆಯಲೆಂದು ಅದನ್ನು ಉಟ್ಟು ಸಂಭ್ರಮದಿಂದ ಭಾವಿ ಕಟ್ಟೆಗೆ ಹೋದಳು; ಗುಡಿಗೆ ಹೋಗಿ ಬಂದಳು. (ದೇವರಿಗಾಗಿ ಅಲ್ಲ) ಸನಿಹದಲ್ಲಿದ್ದ ಗುರು ಮಠಕ್ಕೂ ಹೋಗಿ ಬಂದಳು. ಆದರೆ ಎಲ್ಲರೂ ತಮ್ಮ ಪಾಡಿಗೆ ತಾವು ಇದ್ದರೇ ವಿನಾ ಯಾರೂ ಗಮನಿಸಲಿಲ್ಲ. ಅವಳಿಗೆ ಅತ್ಯಂತ ನಿರಾಶೆಯಾಯಿತು. ಸಂಜೆಯವರೆಗೆ ಕಾಯ್ದಳು ಯಾರೂ ಗಮನಿಸಲಿಲ್ಲ. ರಾತ್ರಿ ಒಂಭತ್ತರ ಸುಮಾರಿಗೆ ಆಗಲೇ ಹಳ್ಳಿಯಲ್ಲಿ ದಟ್ಟವಾದ ಕತ್ತಲೇ ಹಬ್ಬಿತ್ತು. ಜನರೆಲ್ಲ ಮಲಗುವ ವ್ಯವಸ್ಥೆಯಲ್ಲಿರುವಾಗಲೇ ಒಂದು ಹಿತ್ತಲಲ್ಲಿದ್ದ ಬಣವೆಗೆ ಬೆಂಕಿ ಬಿದ್ದಿತು. ಊರವರೆಲ್ಲ ಗಾಬರಿಯಾಗಿ ಓಡಿ ಬಂದು ನೀರು, ಮರಳು ಹಾಕಿ ಬೆಂಕಿ ಆರಿಸತೊಡಗಿದರು. ಗುಂಪು ಸೇರಿ ಹೆಣ್ಣುಮಕ್ಕಳೆಲ್ಲ ಹೊತ್ತಿ ಉರಿಯುವ ಬೆಂಕಿಯನ್ನು, ಗಂಡಸರು ಆರಿಸುವುದನ್ನು ನೋಡುತ್ತಾ ನಿಂತರು. ಆಗ ಓರ್ವ ಸ್ತ್ರೀಯು ಉರಿಯ ಬೆಳಕಿನಲ್ಲಿ ಕಾಣುತ್ತಿದ್ದ ಹೊಸ ಸೀರೆ ನೋಡಿ, "ಯಾವಾಗ ತಗೊಂಡೆಮ್ಮ ? ಸೀರೆ ಚೆನ್ನಾಗಿದೆ ಅಲ್ವೇನ್ರಿ ?" ಎಂದು ಬೇರೆಯವರಿಗೂ ತೋರಿಸಿ ಕೂಲಿಕಾರಳನ್ನು ಕೇಳಿದಳು. ಆಗ ಆಕೆ ಅಂದಳು, "ಈ ಪ್ರಶ್ನೇನ ಬೆಳಿಗ್ಗೇನೇ ಕೇಳಿದ್ದರೆ ಬಣವೆಗೆ ಬೆಂಕಿ ಹಚ್ಚೋದಾದರೂ ತಪ್ಪುತ್ತಿತ್ತು"

Digitalized by e-Sahithya Documentation Forum
Sponsored by Sarayu Foundation Trust

ಊರಿನ ಜನರ ಗಮನ ಸೆಳೆಯಲು ಆ ಸ್ತ್ರೀಯು ಅಂಥ ಕೆಲಸ ಮಾಡಿದ್ದಳು. ಆಕೆಯಂಥವರು ಬಹಳಷ್ಟು ಜನ. ತಾವು ಮಾಡುವ ಹೀನ ಕೆಲಸಗಳ ಪರಿಣಾಮ ವೇನಾದೀತು ಎಂಬುದನ್ನೂ ಅರಿಯದೆ ದುಷ್ಟಕಾರ್ಯಕ್ಕೆಳಸುವರು.

2. ಸೂರ್ಯನ ರಶ್ಮಿಯಿಂದ ಕಾಯ್ದ ಮರಳು

ನಮ್ಮ ಪ್ರವಾಸದಲ್ಲಿ ಓರ್ವ ದಂಪತಿಗಳನ್ನು ಕಾಣುವ ಸಂದರ್ಭ ಬಂದಿತು. ಅವರ ಮನೆಯಲ್ಲೂ ಇರಬೇಕಾಯಿತು. ಗಂಡ ಒಳ್ಳೇ ಪ್ರತಿಭಾವಂತರು. ಚೆನ್ನಾಗಿ ಹಣಗಳಿಸಿದ್ದಾರೆ. ಗುಣವೂ ಹಾಗೆಯೇ. ವಿನಯ, ಸೌಜನ್ಯ, ಆತಿಥ್ಯ ಎಲ್ಲದರಲ್ಲೂ ಮುಂದು. ಆದರೆ ಅವರ ಹೆಂಡತಿ ಹೆಚ್ಚಿನ ವಿದ್ಯಾವಂತಳೇನಲ್ಲ. ಗೃಹಿಣಿ ಮಾತ್ರ. ಬೇರೆಲ್ಲೂ ಉದ್ಯೋಗವನ್ನೇನೂ ಮಾಡುತ್ತಿಲ್ಲ. ನಮ್ಮನ್ನು ಚೆನ್ನಾಗಿ ನೋಡಿಕೊಂಡರು. ಆದರೆ ಆಕೆಗೆ ತುಂಬಾ ಜಂಭ. ತಾವು ಈ ದೇಶಕ್ಕೆ ಬಂದು ತುಂಬಾ ಹಣ ಕಳಿಸಿದ್ದೇವೆ ಎಂಬ ಹಮ್ಮು. ಹೀಗಾಗಿ ಮನೆಗೆ ಬಂದವರನ್ನು ಕಡೆಗಣಿಸುವ ದುರಹಂಕಾರ. ಹಣವನ್ನು ಗಳಿಸುತ್ತಿರುವ ಗಂಡನೇ ಸೌಜನ್ಯ ಶೀಲನಾಗಿರುವಾಗ ಹೆಂಡತಿ ಈ ರೀತಿ ತಾನು ಅಹಂಕರಿಸುವುದನ್ನು ಕಂಡು ನನಗೆ ತುಂಬಾ ಆಶ್ಚರ್ಯವಾಯಿತು. ಆಗ ಥಟ್ಟನೆ ಒಂದು ವಿಚಾರ ನೆನಪಾಯಿತು. ನೆತ್ತಿಯಮೇಲೆ ಸೂರ್ಯನ ಬಿಸಿಲಿದ್ದರೆ ಅಷ್ಟೊಂದು ತ್ರಾಸಾಗದು. ಅದೇ ಸೂರ್ಯನ ಬಿಸಿಲಿನಿಂದ ಚೆನ್ನಾಗಿ ಕಾಯ್ದ ಉಸುಕಿನ ಮೇಲೆ ನಡೆಯಲು ತುಂಬಾ ಕಷ್ಟವಾಗುವುದು. ಹಾಗೆಯೇ ದೊಡ್ಡವರಾದ ಕೆಲವರು ಸಹನೀಯರು. ಅವರ ಆಶ್ರಯದಲ್ಲಿ ಬೆಳೆಯುವ ಸಣ್ಣ ಜನರು ಕಾಯ್ದ ಮರಳಿನಂತೆ ಇತರರಿಗೆ ತ್ರಾಸುಕೊಡುವರು.

ಬಸವ ವಚನಾಮೃತ

'ಕಾಂಚನಕ್ಕೆ ವೇಳೆಯಲ್ಲದೆ ಲಿಂಗಕ್ಕೆ ವೇಳೆಯಿಲ್ಲ', 'ಬೆಂದವೊಡಲ ಹೊರೆಯ ಹೋಯಿತ್ತೆನ್ನ ಸಂಸಾರ'– ಬಸವಣ್ಣನವರ ವಚನದ ಸಾಲುಗಳು ಅಮೆರಿಕಾಕ್ಕೆ ಬಂದ ಮೇಲೆ ಚೆನ್ನಾಗಿ ಅರ್ಥವಾದವು. ಭಾರತದಲ್ಲಿರುವಾಗಲೂ ಕೆಲವರ ಬದುಕನ್ನು ನೋಡಿ ಈ ವಚನದ ಸಾಲು ಅರ್ಥವಾಗಿತ್ತು. ಒಂದು ಕ್ಷಣಕಾಲವೂ ಬಿಡುವಿಲ್ಲದೆ ಹಣದ ಗಳಿಕೆಯಲ್ಲಿ ತೊಡಗುತ್ತಾರೆ. ಲಾಭ-ನಷ್ಟ ಏರಿಳಿತಗಳ ಬಗ್ಗೆ ಉದ್ವಿಗ್ನರಾಗಿ ಕಾಲಕಳೆಯುತ್ತಾರೆ. ನೆಮ್ಮದಿಯಾಗಿ ಬಿಸಿ ಬಿಸಿ ಉಣ್ಣಲೂ ಬಿಡುವಿಲ್ಲ; ಹೆಂಡತಿಮಕ್ಕಳೊಡನೆ ಆರಾಮವಾಗಿ ನಾಲ್ಕುಗಳಿಗೆ ಕಳೆಯಲೂ ಸಾಧ್ಯವಿಲ್ಲ. ಇನ್ನು ದೇವರ ಚಿಂತೆಯಂತೂ ಅವನಿಗೇ ಬಿಟ್ಟುದ್ದು. ಯಾತಕ್ಕಾಗಿ, ಯಾರಿಗಾಗಿ ಇಷ್ಟು ಗಳಿಸುತ್ತಾರೆ ? ತನ್ನ ಸಂತೋಷಕ್ಕಾಗಿ ಇಲ್ಲದ ಧನದಿಂದ ಯಾರಿಗೇನಾಗಬೇಕು ? ಎಂದು ಎಷ್ಟೋ ಬಾರಿ

(೩೭ ನೇ ಪುಟಕ್ಕೆ ಮುಂದುವರಿಸಿದೆ)

Digitalized by e-Sahithya Documentation Forum
Sponsored by Sarayu Foundation Trust

ಧರ್ಮದ ಪಾರಿಭಾಷಿಕ ಪದಪುಂಜ

ಮೂಲ : ಟಿ. ಆರ್. ಮಹಾದೇವಯ್ಯ.
ಸಂಗ್ರಹ : ಸೊ. ದಾ. ವಿರುಪಾಕ್ಷಗೌಡ.

ಅಂಗ : ೧. ಶುದ್ಧಜೀವ; ಚಿದ್ಬಿಂದುವಾದ ಜೀವ.
೨. ಗುರುಸೇವೆಯಲ್ಲಿ ಒಂದು ಬಗೆ.

ಅಂಗತ್ರಯ : ೧. ತ್ಯಾಗಾಂಗ – ಕೆಡುಕನ್ನುಂಟುಮಾಡುವ ಪದಾರ್ಥ ಗುಣ ತೊಲಗಿಸುವುದು.

೨. ಭೋಗಾಂಗ – ಶಿವಾರ್ಪಣ ಬುದ್ಧಿಯಿಂದ ಪ್ರಸಾದೀಕರಿಸಿ ಭೋಗಿಸುವದು.

೩. ಯೋಗಾಂಗ–ಮನುಷ್ಯ ತನ್ನ ನಿಜ ಸುಖದಲ್ಲಿ ಏಕರೂಪವಾಗಿ ಲಿಂಗಾಂಗ ಸಮರಸನಾಗಿರುವುದು.

ಅಂಗಸ್ಥಲ : ಶಿವ ತತ್ತ್ವವು ಸ್ವಶಕ್ತಿಯ ಪ್ರೇರಣೆಯಿಂದ ತಾಳಿದ ಎರಡು ಪ್ರಕಾರಗಳಲ್ಲಿ ಒಂದು ; ಏಕೋತ್ತರ ಶತಸ್ಥಲದ ಳಳ ಸ್ಥಲಗಳು.

ಅಂತಃಕರಣ ಚತುಷ್ಟಯ : ಮನ, ಅಹಂಕಾರ, ಬುದ್ಧಿ, ಚಿತ್ತ.

ಅಗ್ಗಣಿ : ಅರ್ಘವಣಿ, ಶುದ್ಧೋದಕ, ಪೂಜಾರ್ಹವಾದ ಮಡಿನೀರು.

ಅಗ್ನಿಕೊಂಡ : ಕೆಂಡದಿಂದ ಕೂಡಿದ ಗುಂಡಿ; ಶಾಸ್ತ್ರೋಕ್ತವಾಗಿ ಅಗ್ನಿಯ ಕುಂಡವನ್ನು ನಿರ್ಮಿಸಿ, ಅದರಲ್ಲಿ ಹಾದು ಹೋಗುವುದು.

ಅನುಭವ ಮಂಟಪ : ಹನ್ನೆರಡನೆಯ ಶತಮಾನದಲ್ಲಿ ವಿಶ್ವಗುರು ಬಸವಣ್ಣನವರು ಕಲ್ಯಾಣದಲ್ಲಿ ಸ್ಥಾಪಿಸಿದ ತತ್ತ್ವಜಿಜ್ಞಾಸೆಯ ಕೂಟ; ಶರಣರ ಆಧ್ಯಾತ್ಮ ಚರ್ಚೆಯ ಸ್ಥಳ.

ಅನುಭಾವ : ಆಧ್ಯಾತ್ಮ ವಿಚಾರ ಮಂಥನ; ಭಗವಂತನ ಸಾಕ್ಷಾತ್ಕಾರ ಮಾಡಿಕೊಳ್ಳುವುದು ; ಪರಮಾತ್ಮನೊಡನೆ ನೇರ ಸಂಪರ್ಕ ಪಡೆದುಕೊಳ್ಳುವುದು.

ಅನುಭಾವಿ : ಅಪರೋಕ್ಷಾನುಭವವುಳ್ಳವನು ; ಸಾಕ್ಷಾತ್ಕಾರ ಹೊಂದಿದವನು.

ಅಮರಗಣ : ಜನನಮರಣಾತೀತರು ; ಕೈಲಾಸದ ಪ್ರಮಥರು (೭೭೦ ಮಂದಿ).

ಅರುಹಿನ ಕುರುಹು : ಇಷ್ಟಲಿಂಗ.

ಅರ್ಪಣ : ದೇವರಿಗೆ ನೈವೇದ್ಯ ಮಾಡುವುದು. ಮನುಷ್ಯನು–ಪ್ರಾಣ, ಅಂಗ, ಭಾವಗಳ ಮೂಲಕ ಕೆಲಸ ಮಾಡುತ್ತಾನೆ. ಇವು ಶುದ್ಧವಾದರೆ ಕ್ರಿಯೆಯೂ ಶುದ್ಧವಾಗುತ್ತದೆ. ಆದಕ್ಕೆ ಇಷ್ಟಲಿಂಗಕ್ಕೆ ಅಂಗ, ಪ್ರಾಣಲಿಂಗಕ್ಕೆ ಮನ, ಭಾವಲಿಂಗಕ್ಕೆ ತೃಪ್ತಿಯನ್ನು ಅರ್ಪಿಸಬೇಕು. ಇದೇ ಕ್ರಮವಾಗಿ ಕಾಯಾರ್ಪಣ, ಕರಣಾರ್ಪಣ, ಭಾವಾರ್ಪಣವಾಗುತ್ತದೆ.

ಅವಧೂತ : ವರ್ಣಾಶ್ರಮಗಳನ್ನು ಮೀರಿ ಕೇವಲ ಆತ್ಮನಲ್ಲಿಯೆ ವಿಹರಿಸುವ ಯೋಗಿ; ಎಲ್ಲಾ ಬಗೆಯ ಅಭಿಮಾನವನ್ನು ತಳ್ಳಿಹಾಕಿದವನು ; ವಿರಕ್ತ.

ಅವಸ್ಥಾತ್ರಯ : ೧. ಜಾಗ್ರತ–ಎಚ್ಚತ್ತಿರುವುದು.
೨. ಸ್ವಪ್ನ–ಕನಸು ಕಾಣುವುದು.
೩. ಸುಷುಪ್ತಿ–ಮೈಮರೆದಿರುವುದು, ಗಾಢನಿದ್ರೆಯಲ್ಲಿರುವದು. ಇದಕ್ಕೆ ತೂರ್ಯ, ತೂರ್ಯಾತೀತಗಳನ್ನು ಸೇರಿಸಿ ಪಂಚಾವಸ್ಥೆಗಳೆಂದು ಹೆಸರಿಸಿದ್ದಾರೆ.

ಅವಿಮುಕ್ತಕ್ಷೇತ್ರ : ೧. ಶರಣರ ಪುಣ್ಯಭೂಮಿ ; ಶಿವಶಕ್ತಿಗಳಿಂದ ವಿಮುಕ್ತವಾಗದ ಕ್ಷೇತ್ರ.
೨. ಕಾಶಿಯ ಬಳಿ ಇರುವ ಒಂದು ಸುಕ್ಷೇತ್ರ.

ಅಷ್ಟತನು : ೧. ಲಿಂಗದ ಎಂಟು ದೇಹಗಳು : ಪೃಥ್ವಿ, ಅಪ್ಪು, ತೇಜ, ವಾಯು, ಆಕಾಶ, ಸೂರ್ಯ, ಚಂದ್ರ, ಆತ್ಮ.
೨. ಅಂಗದ ಎಂಟು ದೇಹಗಳು : ಸ್ಥೂಲ, ಸೂಕ್ಷ್ಮ, ಕಾರಣ, ನಿರ್ಮಲ, ಆನಂದ, ಚಿನ್ಮಯ, ಚಿದ್ರೂಪ, ಶುದ್ಧ.

ಅಷ್ಟಮದ : ೧. ಬಾಹ್ಯ–ಕುಲ, ಛಲ, ಧನ,ರೂಪ,ಯೌವನ, ವಿದ್ಯೆ, ರಾಜ್ಯ, ತಪ.
೨. ಅಂತರಿಕ–ಸಂಸ್ಥಿತ, ತೃಣೀಕೃತ, ವರ್ತಿನಿ, ಕ್ರೋಧಿನಿ, ಅತಿಚಾರಿಣಿ, ಗಂಧಚಾರಿಣಿ, ವಾಸಿನಿ, ಮೋಹಿನಿ.

ಅಷ್ಟಾಂಗಯೋಗ : ಎಂಟು ಅಂಗಗಳಿಂದ ಕೂಡಿದ ಕ್ರಮಬದ್ಧವಾದ ಯೋಗ :– ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧಾರಣ, ಧ್ಯಾನ, ಸಮಾಧಿ.

ಅಷ್ಟಾವರಣ : ಜೀವನಿಗೆ ಇರುವ ಎಂಟು ಆವರಣಗಳು. ವೀರಶೈವ ಧರ್ಮಕ್ಕೆ ಅಷ್ಟಾವರಣವು ಅಂಗಸ್ವರೂಪ. ಗುರು ಲಿಂಗ ಜಂಗಮ–ಉಪಾಸ್ಯ ವಸ್ತುಗಳು. ವಿಭೂತಿ, ರುದ್ರಾಕ್ಷಿ, ಮಂತ್ರ ಉಪಾಸನ ಸಾಧನಗಳು. ಪಾದೋದಕ, ಪ್ರಸಾದ– ಉಪಾಸನ ಫಲಗಳು.

ಆತ್ಮ : ಎಲ್ಲರ ಶರೀರದಲ್ಲಿಯೂ ಇರುವ ಪರಶಿವನ ಅಂಶ.

ಆತ್ಮತ್ರಯ : ೧. ಜೀವಾತ್ಮ–ಸಂಸಾರದಲ್ಲಿ ಬೆರೆತಿರುವ ಆತ್ಮ.
೨. ಅಂತರಾತ್ಮ–ಸಂಸಾರದಲ್ಲಿ ಇದ್ದೂ ಇಲ್ಲದಿರುವಿಕೆ.
೩. ಪರಮಾತ್ಮ–ಸಂಸಾರವನ್ನು ಬಿಟ್ಟು ನಿಃಕಲನಾಗಿರುವುದು.

ಆಯತ : ಗುರುವಿನ ಹಸ್ತದಿಂದ ಬಂದುದು ; (ಇಷ್ಟಲಿಂಗ).

ಆರೂಢಸ್ಥಲ : ಜೀವನ್ಮುಕ್ತನ ಸ್ಥಾನ; ಸಿದ್ಧನ ಸ್ಥಾನ.

ಆರೋಗಣೆ : ಪ್ರಸಾದ ಸ್ವೀಕಾರ; ಭೋಜನ; ಊಟ.

ಈಷಣತ್ರಯ : ಮೂರು ಬಗೆಯ ಮೋಹಗಳು ; ಸತಿ, ಸುತ, ಅರ್ಥ, ಎಂಬ ಪ್ರಲೋಭನೆಗಳು.
೧. ದಾರೇಷಣ ೨. ಪುತ್ರೇಷಣ ೩. ವಿತ್ರೇಷಣ.

ಉಘೇ : ಶಿವನನ್ನು ಕುರಿತು ಮಾಡುವ ಜಯಕಾರ– ಘೋಷಣೆ.

ಉದ್ಧರಣೆ : ೧. ವೀರಶೈವ ತತ್ತ್ವಗಳನ್ನು ತಿಳಿಸುವ ಸಾಧನಗಳು. ಷಟ್ಸ್ಥಲದ ಮರ್ಮವನ್ನು ಸ್ಪಷ್ಟಮಾಡಿ ತೋರಿಸುವ ಉದ್ದಿಶ್ಯವಾಗಿ ಇವನ್ನು ನಿರ್ಮಿಸಿದ್ದಾರೆ. ಇದನ್ನು ವಿವಿಧ ಬಣ್ಣಗಳಲ್ಲಿ ಚಿತ್ರ ಬರೆದಿಡುವ ಸಂಪ್ರದಾಯವಿತ್ತು. ಇವು ೩೨ ಇವೆ. ಭಾವುಕ ಜನ ಇವನ್ನು ಯಂತ್ರ ತಂತ್ರಗಳಂತೆ ಉಪಯೋಗಿಸುತ್ತಾರೆ.
೨. ಶಿವಪೂಜೆಯಲ್ಲಿ ಅರ್ಘ್ಯಬಿಡಲು, ತೀರ್ಥ ಮುಂತಾದವುಗಳನ್ನು ಕೊಡಲು ಬಳಸುವ ಸಣ್ಣ ಸೌಟು.

ಏಕೋತ್ತರ ಶತಸ್ಥಲ : ನೂರರ ಮೇಲೆ ಒಂದು ಸ್ಥಲ. ಶಿವತತ್ತ್ವವು ಸ್ವಶಕ್ತಿಯ ಸ್ಫುರಣೆಯಿಂದ ತಾಳಿದ ಘಟ್ಟಗಳು. ಅಂಗಸ್ಥಲಗಳುಳ್ಳ ಮತ್ತು ಲಿಂಗಸ್ಥಳಗಳು ೫೭. ಅಂಗಸ್ಥಲದಲ್ಲಿ ಭಕ್ತನು ಯಾವ ರೀತಿ ಆಚರಿಸಬೇಕೆಂಬ ವಿವರಣೆಯೂ, ಲಿಂಗಸ್ಥಲದಲ್ಲಿ ಆ ಆಚರಣೆಗಳಿಂದ ಯಾವ ಪರಿಣಾಮಗಳಾಗುತ್ತವೆ ಎಂಬುದರ ವಿವರಣೆಯೂ ಇರುತ್ತವೆ.

ಒಕ್ಕುಮಿಕ್ಕುದು : ಅರ್ಪಿಸಿ ಉಳಿದಿದ್ದು ; ಶೇಷ ಪ್ರಸಾದ.

Digitalized by e-Sahithya Documentation Forum
Sponsored by Sarayu Foundation Trust

ಓಂಕಾರ : ಮಹಾಲಿಂಗದಿಂದ ಉದ್ಭವವಾಗುವ ಅ ಉ ಮ ಅಕ್ಷರಗಳ ಬೆರಕೆ, ಓಂಕಾರಕ್ಕೆ ಮೂಲ ಪ್ರಣವವೆಂತಲೂ, ಉಳಿದವಕ್ಕೆ ಪ್ರಣವಾಕ್ಷರಗಳೆಂದೂ ಹೆಸರು.

ಕಂತಿ : ಇಷ್ಟಲಿಂಗಕ್ಕೆ ಧರಿಸುವ ಚಿದ್ರಸ, ಇದರಲ್ಲಿ ತುಪ್ಪದ ಕಂತಿ, ಕರ್ಪೂರದ ಕಂತಿ ಎಂದು ಮುಂತಾಗಿ ವಿಧಗಳಿವೆ.

ಕಂತೆ : ೧. ದೇಹ ೨. ಸನ್ಯಾಸಿಗಳು (ಯೋಗಿಗಳು) ಧರಿಸುವ ಬಟ್ಟೆ ೩. ಜೋಳಿಗೆ.

ಕದಳಿ : ಶ್ರೀಶೈಲದಲ್ಲಿರುವ ತಪಸ್ಸಿಗೆ ಅರ್ಹವಾಗಿರುವ ಗುಪ್ತಸ್ಥಳ.

ಕಪನಿ, ಕಫಿನಿ : ವಿರಕ್ತರು ಹಾಕಿಕೊಳ್ಳುವ ಕಾವಿಯ ನಿಲುವಂಗಿ.

ಕರಡಿ, ಕರಡೆ : ವಿಶಿಷ್ಟವಾದ ಒಂದು ಮಂಗಳ ವಾದ್ಯ.

ಕರಡಿಗೆ : ಇಷ್ಟಲಿಂಗವಿಡುವ ಸಂಪುಟ, ಲಿಂಗದಕಾಯಿ, ನಾನವತ್ತಿಗೆ, ಗುಂಡುಗಡಿಗೆ.

ಕರಣಹಸಿಗೆ : ಮನುಷ್ಯನ ಮನಸ್ಸು ಮತ್ತು ದೇಹದ ವ್ಯಾಪಾರವನ್ನು ತಿಳಿಸುವ ಹೊತ್ತಿಗೆ.

ಕರ್ಮತ್ರಯ : ೧. ಅಶುಭ ಕರ್ಮ, ಶುಭಕರ್ಮ, ಜ್ಞಾನಕರ್ಮ.
೨. ಸಂಚಿತ, ಪ್ರಾರಭ್ಧ, ಆಗಾಮಿ.

ಕಾಯಕ : ೧. ಶರೀರ ಶ್ರಮದಿಂದ ಮಾಡುವ ಪವಿತ್ರ ಉದ್ಯೋಗ.
೨. ಸಮರ್ಪಣ ಭಾವದಿಂದ ಮಾಡುವ ವೃತ್ತಿ–ಕೈಂಕರ್ಯ.

ಕಾಯಕವೇ ಕೈಲಾಸ : ಸತ್ಯ ಶುದ್ಧ ಕಾಯಕದಲ್ಲಿಯೇ ಸುಯಿಧಾನ ಸಂತೃಪ್ತಿ.

ಕಿಂಕುರ್ವಾಣ : "ಮಹಾಪ್ರಸಾದ, ಏನು ಮಾಡಲಿ ಸ್ವಾಮಿ (ಪೂಜ್ಯರೇ....)" ಎಂದರ್ಥ. ಸೇವಾವೃತ್ತಿ ; ಭೃತ್ಯಭಾವ.

ಕೊಂಡ : ಅಗ್ನಿಕೊಂಡ. ಕೊಂಡಹಬ್ಬ–ವೀರಭದ್ರನ ಮೂರ್ತಿಯನ್ನು ಹೊತ್ತುಕೊಂಡು ಬರಿಗಾಲಲ್ಲಿ ಹಾಯುವ ಅಗ್ನಿಕೊಂಡ.

ಕೈಲಾಸವಸ್ತ್ರ : ಶರಣರನ್ನು ಸಮಾಧಿ ಮಾಡುವಾಗ ಶವದ ಮೇಲೆ ಹಾಕುವ ಹೊಸ ವಸ್ತ್ರ.

ಕ್ರಿಯಾಕಟ್ಟಳೆ : ಅಷ್ಟಾವರಣದಿಂದ ಕೂಡಿದ ಒಂದು ಕರ್ಮ ವಿಶೇಷ ; ಗುರು–ಜಂಗಮರ ಪಾದಪೂಜೆ ಮಾಡಿ ಪಾದೋದಕ ಪ್ರಸಾದ ಸ್ವೀಕರಿಸುವುದು.

ಕ್ರಿಯಾಬಟ್ಟಲು : ೧. ಭಕ್ತರು ಗುರು–ಜಂಗಮರ ಪಾದತೀರ್ಥವನ್ನು ಸ್ವೀಕರಿಸುವ ಬಟ್ಟಲು.
೨. ಶರಣರು ಊಟಮಾಡುವ ತಟ್ಟೆ–ಗಂಗಳ.

ಕ್ರಿಯಾಭಸಿತ : ಗುರುವಿನಿಂದ ಸಂಸ್ಕರಿಸಲ್ಪಟ್ಟ ಪವಿತ್ರ ವಿಭೂತಿ.

ಕ್ರಿಯಾಮೂರ್ತಿ : ಭಕ್ತರುಗಳು ಪಾದ ಪೂಜೆಗಾಗಿ ಗೊತ್ತುಮಾಡಿಕೊಂಡಿರುವ ಗುರು.

ಕ್ರಿಯಾಸಮಾಧಿ : ಶಿವಯೋಗಿಗಳಿಗೂ, ಶರಣರಿಗೂ ಮಾಡುವ ವಿಶೇಷ ರೀತಿಯ ಆಗಮೋಕ್ತ ಸಮಾಧಿ.

ಖಂಡಿತವಮಾಡು : ೧. ಊಟದ ತಟ್ಟೆಯಲ್ಲಿನ ಪ್ರಸಾದವನ್ನು ಸ್ವಲ್ಪವೂ ಉಳಿಸದಂತೆ ಸ್ವೀಕರಿಸುವುದು.
೨. ಪಾದೋದಕವನ್ನು ನಿಶ್ಯೇಷವಾಗಿ ಸ್ವೀಕರಿಸುವುದು.

ಗಂಟೆಬಟ್ಟಲು : ಶುಭ ಪ್ರಸಂಗಗಳಲ್ಲಿ ಹೆಗಲ ಮೇಲೆ ಇಟ್ಟುಕೊಂಡು ಹೋಗುವ ಗಂಟೆ ಮತ್ತು ಬಟ್ಟಲು ಇರುವ ಮಂಗಳವಸ್ತು.

ಗಣಾರಾಧನೆ : ಜಂಗಮರ ತೃಪ್ತಿಗಾಗಿ ಮಾಡುವ ಭೋಜನಕೂಟ.

ಗದ್ದಿಗೆ : ಶರಣರ ಅಥವಾ ಶಿವಯೋಗಿಗಳ ಸಮಾಧಿ.

ಗದ್ದಿಗೆಹಾವಳಿ : ಶಿವಪೂಜೆಗೆ ಕುಳಿತುಕೊಳ್ಳಲು ಹಾಸುವ ಬಿಳಿಯ ಕಂಬಳಿ.

ಗುರು : ಜೀವಿಗೆ ಅರಿವಿನ ಕುರುಹಾದ ಇಷ್ಟಲಿಂಗವನ್ನು ನೀಡಿ, ಧರ್ಮೋಪದೇಶ ಮಾಡುವ ಪೂಜ್ಯವ್ಯಕ್ತಿ. ಭಕ್ತನಿಗೆ ಲಿಂಗವನ್ನು ಅನುಗೊಳಿಸಿ ದೀಕ್ಷಾಗುರುವೂ, ಮನದಲ್ಲಿ ಅರಿವು ಮೂಡಿಸಿ ಶಿಕ್ಷಾಗುರುವೂ, ಸಾಮರಸ್ಯದ ಗುಟ್ಟನ್ನು ತಿಳಿಸಿ ಭವದ ಬೇರನ್ನು ಹರಿದು ಜ್ಞಾನಗುರುವೂ ಆಗುವನು.

ಚತುರ್ವಿಧ ಫಲಪದ : ನಾಲ್ಕು ಬಗೆಯ ಮೋಕ್ಷ ಪದವಿಗಳು. ಮೋಕ್ಷ ಸುಖಾನುಭವದ ಪ್ರಕಾರಗಳು.
೧. ಸಾಲೋಕ್ಯ–ದೇವರ ವಾಸಸ್ಥಳವೇ ಜೀವಿಯ ವಾಸಸ್ಥಳವಾಗುವಿಕೆ-
೨. ಸಾಮೀಪ್ಯ–ದೇವರ ಬಳಿಯಲ್ಲೇ ಇರುವಿಕೆ.
೩. ಸಾಯುಜ್ಯ–ದೇವರಲ್ಲಿ ಕೂಡಿಕೊಳ್ಳುವಿಕೆ ;
೪. ಸಾರೂಪ್ಯ–ದೇವರ ಸಮರೂಪವನ್ನು ಹೊಂದುವಿಕೆ.

ಚರಮೂರ್ತಿ : ಜಂಗಮ ; ವಿರಕ್ತ.

ಜಂಗಮ : ಜನನ, ಮರಣ, ಗಮನಗಳನ್ನು ಶೂನ್ಯಮಾಡಿಕೊಂಡ ಶಿವಯೋಗಿ ಮತ್ತು ಸಮಾಜ.

ತತ್ತ್ವಮಸಿ : ತತ್–ಲಿಂಗ, ತ್ವಂ–ಅಂಗ, ಅಸಿ–ಐಕ್ಯ 'ಅದು ನೀನೇ ಇದ್ದೀ.'

Digitalized by e-Sahithya Documentation Forum
Sponsored by Sarayu Foundation Trust

ತನ್ಮಾತ್ರೆ: ಪಂಚಭೂತಗಳಿಗೆ ಉತ್ಪತ್ತಿ ಸ್ಥಾನಗಳಾದಂಥವು ; ಪಂಚೇಂದ್ರಿಯಗಳಿಗೆ ವಿಷಯವಾದವು ; ಶಬ್ದ, ಸ್ಪರ್ಶ, ರೂಪ, ರಸ, ಗಂಧ.

ತನುತ್ರಯಿ : ಮೂರು ದೇಹಗಳು,

೧. ಸ್ಥೂಲ-ಪಂಚಭೂತಗಳಿಂದಾದ ವೃತ್ತಿಗಳಿಂದ ಕೂಡಿದ ಭೌತಿಕದೇಹ.

೨. ಸೂಕ್ಷ್ಮ-ಜ್ಞಾನೇಂದ್ರಿಯ, ಮನ, ಬುದ್ಧಿಗಳನ್ನುಳ್ಳ ಸಂಸ್ಕಾರದಿಂದ ಕೂಡಿದ ಸೂಕ್ಷ್ಮ ಶರೀರ.

೩. ಕಾರಣ-ವಾಸನೆಯಿಂದ ಕೂಡಿದ ಕಾರಣ ಶರೀರ.

ತಾಪತ್ರಯ : ಮೂರು ಬಗೆಯ ತಾಪಗಳು ;

೧. ಆಧ್ಯಾತ್ಮಿಕ (ಅ) ಶಾರೀರಿಕ-ರೋಗ ಮುಂತಾದ ಭೌತಿಕ ಅಪಾಯಗಳು.

(ಆ) ಮಾನಸಿಕ-ಅಸೂಯೆ, ಮದ, ಮತ್ಸರ, ಚಿಂತೆಗಳಿಂದ, ಬರುವ ತೊಂದರೆ.

೨. ಆಧಿಭೌತಿಕ-ಶೀತ, ಉಷ್ಣ, ವಾಯು, ಸಿಡಿಲು ಇತ್ಯಾದಿಗಳಿಂದ ಬರುವ ಕೇಡು.

೩. ಆಧಿದೈವಿಕ-ಜನನ, ಮರಣ, ಹಸಿವು, ತೃಷೆ, ಅಜ್ಞಾನ ಮೊದಲಾದವುಗಳಿಂದ ಬರುವ ತೊಂದರೆ.

ತೋರಗದ್ದಿಗೆ: ಶಿವಯೋಗಿಗಳ ಸಮಾಧಿಯಿಂದ ಸ್ವಲ್ಪ ಮೃತ್ತಿಕೆಯನ್ನು (ಪವಿತ್ರವಾದ ಮಣ್ಣು) ತೆಗೆದುಕೊಂಡು ಹೋಗಿ ಬೇರೆ ಕಡೆ ಅವರ ಹೆಸರಿನಲ್ಲಿ ಸ್ಥಾಪಿಸುವ ಗದ್ದುಗೆ.

ತ್ರಿಕರಣ : ೧. ಮೈ ೨. ಮಾತು ೩. ಮನ

ತ್ರಿದೋಷ : ವಾತ ಪಿತ್ತ ಶ್ಲೇಷಗಳು. ಇವು ಕ್ರಮವಾಗಿ ಮುಪ್ಪು, ಯೌವನ ಬಾಲ್ಯದಲ್ಲಿ ಪೀಡಿಸುವುವು.

ತ್ರಿಪುಟ : ಜ್ಞಾತೃ, ಜ್ಞೇಯ ಮತ್ತು ಜ್ಞಾನ.

ತ್ರಿವಿಧಕ್ಕೆ ತ್ರಿವಿಧಾರ್ಪಣ : ೧. ಅನ್ನದಾಸೋಹ, ಜ್ಞಾನದಾಸೋಹ, ಆಧ್ಯಾತ್ಮ ದಾಸೋಹ.

೨. ಗುರುವಿಗೆ ತನು, ಲಿಂಗಕ್ಕೆ ಮನ, ಜಂಗಮಕ್ಕೆ ಧನ.

ತ್ರಿವಿಧಮಲ : ಮೂರು ಬಗೆಯ ಮಲಗಳು : ಆಣವ, ಮಾಯಾ, ಕಾರ್ಮಿಕ.

ದಾಸೋಹ : ಸೋಹಂಭಾವದ ಪರಿಪಕ್ವಾವಸ್ಥೆ. ಆಸೆ-ರೋಷಗಳನ್ನು ಬಿಟ್ಟು ಮಾಡುವ ಸೇವೆ. ನಿರಹಂಕಾರದಿಂದ, ನಿಷ್ಕಾಮ ಬುದ್ಧಿಯಿಂದ ಅತಿಥಿಗಳನ್ನು ಸೇವಿಸುವುದು.

ದಾಸೋಹಂಭಾವ : 'ನಾನು ಗುರುಲಿಂಗ ಜಂಗಮರಿಗೆ ದಾಸನಾಗಿದ್ದೇನೆ' ಎಂಬ ಭಾವ. ಸೇವಾವೃತ್ತಿಯನ್ನು ಕೈಗೊಳ್ಳುವುದು.

ದೀಕ್ಷೆ: ಗುರುವು ಶಿಷ್ಯನಿಗೆ ನೀಡುವ ಒಂದು ಧಾರ್ಮಿಕ ಸಂಸ್ಕಾರ. ಗುರುವು ಹಸ್ತ-ಮಸ್ತಕ ಸಂಯೋಗದಿಂದ ಅರಿವಿನ ಕುರುಹಾದ ಇಷ್ಟಲಿಂಗವನ್ನು ಭಕ್ತನ ದೇಹದಲ್ಲಿ ಅನುಗೊಳಿಸಿ ಲಿಂಗಪೂಜಾ ಅನುಸಂಧಾನವನ್ನು ಹೇಳಿಕೊಡುವುದು. ಇದರಲ್ಲಿ ವೇಧಾದೀಕ್ಷೆ, ಮಂತ್ರದೀಕ್ಷೆ, ಕ್ರಿಯಾದೀಕ್ಷೆಗಳೆಂದು ಮೂರು ವಿಧಗಳಿವೆ.

ದಾರಿವಟ್ಟಲು : ಶಿವಾಲಯಗಳಲ್ಲಿ ಲಿಂಗದ ಮೇಲೆ ಕಟ್ಟುವ ಅಭಿಷೇಕದ ಪಾತ್ರೆ, ಧಾರಾಪಾತ್ರೆ.

ನಂದಿಧ್ವಜ : ದೇವಸ್ಥಾನದ ಉತ್ಸವಗಳಲ್ಲಿ ಕರಡಿವಾದ್ಯದೊಡನೆ ಕುಣಿಸುವ ನಂದಿಯ ವಿಗ್ರಹವುಳ್ಳ ಧ್ವಜ.

ನವವಿಧಭಕ್ತಿ : ಒಂಬತ್ತು ವಿಧವಾದ ಭಕ್ತಿಗಳು ; ಶ್ರವಣ, ಕೀರ್ತನ, ಸ್ಮರಣ, ಪಾದಸೇವನ, ಅರ್ಚನ, ವಂದನ, ದಾಸ್ಯ, ಸಖ್ಯ, ಆತ್ಮನಿವೇದನ.

ನಾದಬಿಂದುಕಳೆ : ಜಗತ್ತಿನ ಸೃಷ್ಟಿಯ ಕಾಲಕ್ಕೆ ಇವು ಉತ್ಪನ್ನವಾಗುತ್ತವೆ. ಪರಶಿವನಲ್ಲಿ ಜಗತ್‌ಸೃಷ್ಟಿಯ ಇಚ್ಛೆ ತಲೆದೋರಿದಾಗ ಮಹಾಜ್ಞಾನ ಚಿತ್ತು ಉದಯವಾಗುವುದು. ಅದರಿಂದ ಅ ಉ ಮ ಎಂಬ ಅಕ್ಷರತ್ರಯ ಉತ್ಪನ್ನವಾಗುತ್ತವೆ. ಅಕಾರವೇ ನಾದ, ಉಕಾರವೇ ಬಿಂದು, ಮಕಾರವೇ ಕಳೆ. ನಾದ ಒಂದು ಬಗೆಯ ಅಲುಗಾಡುವಿಕೆ. ಇದೇ ಜಗದುತ್ಪತ್ತಿಗೆ ಮುಖ್ಯ ಕಾರಣ. ಈ ಹೊಯ್ದಾಟದಿಂದ ಬಿಂದುವಿನ ಪ್ರಾದುರ್ಭಾವ. ಬಿಂದು ಜಗತ್ತು ಘನೀಭೂತವಾಗುವ ಮೊದಲ ಸ್ಥಿತಿ. ನಾದ-ಬಿಂದುಗಳ ಪರಸ್ಪರ ಸಂಯೋಗದಿಂದ ಕಳೆ ಉತ್ಪನ್ನವಾಗುತ್ತದೆ. ಜಗತ್ತಿನಲ್ಲಿ ತೋರುವ ದೃಶ್ಯ ಶಕ್ತಿಯೆ ಕಳೆ. ದೇಹದಲ್ಲಿ ನಾದವೇ ಪ್ರಾಣ. ಬಿಂದುವೇ ದೃಶ್ಯ ಶರೀರ. ಕಳೆಯೇ ಚೈತನ್ಯಾತ್ಮಕ ಮನ. ಇವು ಕೂಡಿದಾಗಲೇ ಮಾನವನಲ್ಲಿ ಕಾರ್ಯಗಳು ಸಂಭವಿಸುತ್ತವೆ.

ನಿರವಯಲು : ಬಯಲಿಗೆ ಬಯಲು, ಆತ್ಯಂತಿಕ ಬಯಲು, ನಿಃಶೂನ್ಯ.

Digitalized by e-Sahithya Documentation Forum
Sponsored by Sarayu Foundation Trust

ನೂತನರು : ಹನ್ನೆರಡನೆಯ ಶತಮಾನದಿಂದೀಚಿನ ಶಿವಭಕ್ತರು, ವಿಶ್ವಗುರು ಬಸವೇಶ್ವರರೇ ಮೊದಲಾದ ಶರಣರು.

ನಿವೃತ್ತಿ : ವೈರಾಗ್ಯ ಭಾವನೆ, ನಿರ್ಲಿಪ್ತ ಜೀವನ.

ನಿರ್ವಾಣ : ಮೋಕ್ಷ, ಮುಕ್ತಿ.

ಪಂಚಕೃತ್ಯ : ಪರಶಿವನ ಐದು ಕಾರ್ಯಗಳು — ಸೃಷ್ಟಿ, ಸ್ಥಿತಿ, ಸಂಹಾರ, ತಿರೋಧನ, ಅನುಗ್ರಹ.

ಪಂಚಭೂತಗಳು : ಸದ್ಯೋಜಾತ ಮುಖದಲ್ಲಿ ಪೃಥ್ವಿ, ವಾಮದೇವ ಮುಖದಲ್ಲಿ ಅಪ್ಪು, ತತ್ಪುರುಷ ಮುಖದಲ್ಲಿ ವಾಯು, ಅಘೋರ ಮುಖದಲ್ಲಿ ಅಗ್ನಿ. ಈಶಾನ್ಯ ಮುಖದಲ್ಲಿ ಆಕಾಶ ಹುಟ್ಟಿವವು.

ಪಂಚ ಮುಖಗಳು : ಸದ್ಯೋಜಾತ, ವಾಮದೇವ, ಅಘೋರ, ಈಶಾನ್ಯ ಮತ್ತು ತತ್ಪುರುಷ.

ಪಂಚವಿಂಶತಿ ತತ್ವ : ಇಪ್ಪತ್ತೈದು ತತ್ವಗಳು —

೧. ಪಂಚ ಕರ್ಮೇಂದ್ರಿಯಗಳು (೫)
೨. ಪಂಚ ಜ್ಞಾನೇಂದ್ರಿಯಗಳು (೫)
೩. ಪಂಚ ಪ್ರಾಣಗಳು (೫)
೪. ಪಂಚ ವಿಷಯಗಳು (೫)
೫. ಮನ, ಬುದ್ಧಿ, ಚಿತ್, ಅಹಂಕಾರ, ಜ್ಞಾತೃ (೫)

ಪಂಚಾಕ್ಷರಿ : ನಮಃಶಿವಾಯ ಎಂಬ ಮಂತ್ರ.

ಪಂಚಾಗ್ನಿಗಳು : ಐದು ಅಗ್ನಿಗಳು

೧. ಉದರಾಗ್ನಿ–ಉಂಡ ಅನ್ನಪಾನಾದಿಗಳು ಜೀರ್ಣಿಸುವುದು.
೨. ಮಂದಾಗ್ನಿ – ಶರೀರದ ಶೈತ್ಯವಾರಿಸಿ, ಹಸಿವು, ತೃಷೆ ಕಡಿಮೆ ಮಾಡುವುದು.
೩. ಕಾಮಾಗ್ನಿ–ವಿಷಯವಿಕಾರದ ವಿರಹ ತಾಪ.
೪. ಶೋಕಾಗ್ನಿ–ದುಃಖಾಗ್ನಿಯಲ್ಲಿ ಜೀವನ ತಾಪ.
೫. ಬಡಬಾಗ್ನಿ–ಜ್ವರವೇ ಮೊದಲಾದ ತಾಪ.

ಪಂಚಾಚಾರ : ೧. ಲಿಂಗಾಚಾರ (ಏಕದೇವೋಪಾಸನೆ)
೨. ಸದಾಚಾರ (ಸಮಾಜವಾದ)

೩. ಶಿವಾಚಾರ (ದೇವನ ಪಿತೃತ್ವ-ಮಾನವರ ಭ್ರಾತೃತ್ವ)
೪. ಗಣಾಚಾರ (ಅನಿಷ್ಟದೊಡನೆ ಹೋರಾಟ)
೫. ಭೃತ್ಯಾಚಾರ (ವ್ಯಕ್ತಿ-ಸಮಾಜಸೇವೆ ಮಾಡುವ ಕೈಂಕರ್ಯ)

ಪಂಚಶುದ್ಧಿ : ಐದು ಬಗೆಯ ಶುದ್ಧಿಗಳು — ಆತ್ಮಶುದ್ಧಿ, ಭೂತಶುದ್ಧಿ, ಜೀವ ಶುದ್ಧಿ, ಮನಶುದ್ಧಿ, ದ್ರವ್ಯಶುದ್ಧಿ.

ಪಂಚೀಕರಣ : ದೇಹದ ವ್ಯಾಪಾರಗಳನ್ನು ತಿಳಿಸುವ ಜ್ಞಾನ. ಪಂಚ ಮಹಾ ಭೂತಗಳಿಂದ ಶರೀರದಲ್ಲಿ ೨೫ ತತ್ತ್ವಗಳುಂಟಾಗುತ್ತವೆ. ಈ ತತ್ತ್ವಗಳ ಸಂಬಂಧದ ಜ್ಞಾನವೇ ಪಂಚೀಕರಣಜ್ಞಾನ — ಮಿಶ್ರಾರ್ಪಣ, ಷಟ್ಸ್ಥಲ, ಪಂಚಾಚಾರ, ಅಷ್ಟಾವರಣ ಮತ್ತು ಕರಣಹಸಿಗೆಗಳೇ ಕುಂಚೀಕರಣಗಳು.

ಪಂಚೇಂದ್ರೀಯಗಳು : ೧. ಜ್ಞಾನೇಂದ್ರಿಯ – ಮೂಗು, ನಾಲಗೆ, ಕಣ್ಣು, ತ್ವಚೆ, ಕಿವಿ,
೨. ಕರ್ಮೇಂದ್ರಿಯ – ಗುದ, ಗುಹ್ಯ, ಕಾಲು, ಕೈ, ಬಾಯಿ.

ಪವಾಡ : ಮಹಿಮೆ – ಅದ್ಭುತ, ನಿಸರ್ಗ ನಿಯಮಕ್ಕೆ ಹೊರತಾದ ಅಸಾಮಾನ್ಯ ಘಟನೆಗಳು.

ಪಾದಪೂಜೆ : ಗುರು – ಜಂಗಮರ ಪೂಜ್ಯಪಾದಗಳನ್ನು ವಿದ್ಯುಕ್ತವಾಗಿ ಪೂಜಿಸಿ ಪಾದೋದಕವನ್ನು ಪಡೆಯುವುದು.

ಪಾದೋದಕ : ಗುರುವಿನ ಪಾದತೀರ್ಥ. ಗುರುಶಿಷ್ಯರ ಸಾಮರಸ್ಯದ ಫಲವಾಗಿ ಲಭಿಸುವ ಸಿದ್ಧಿ. ಗುರುವಿನ ಪಾದ, ಶಿಷ್ಯನ ಹಸ್ತ ಸಂಯೋಗದಿಂದ ಲಭಿಸುವ ಪರಮ ಪವಿತ್ರವಾದ ಉದಕ. ಅದನ್ನು ಸ್ವೀಕರಿಸುವ ಕ್ರಮ ವನ್ನನುಲಕ್ಷಿಸಿ ಹತ್ತು ವಿಧಗಳಾಗಿ ವಿಂಗಡಿಸಿದ್ದಾರೆ – ಗುರುಪಾದೋದಕ, ಲಿಂಗಪಾದೋದಕ, ಜಂಗಮಪಾದೋದಕ, ಸ್ಪರ್ಶನೋದಕ, ಅವಧಾನೋದಕ, ಆಪ್ಯಾಯನೋದಕ, ಹಸ್ತೋದಕ, ಪರಿಣಾಮೋದಕ, ನಿರ್ನಾಮೋದಕ, ಸತ್ಯೋದಕ.

ಪಿಂಡ : ಆತ್ಮ.

ಪಿಂಡಾಂಡ : ಇಂದ್ರಿಯ ಗೋಚರವಾದ ಶರೀರ – ಕ್ರಿಯಾಯುಕ್ತ ಹಾಗೂ ಜೀವಮಯವಾದ ದೇಹ.

ಪುರಾತನರು : ತಮಿಳುನಾಡಿನ ಪ್ರಸಿದ್ಧರಾದ ೬೩ ಜನ ಶಿವಭಕ್ತರು.

ಪ್ರಣಮ, ಪ್ರಣವ : ಓಂಕಾರ.

Digitalized by e-Sahithya Documentation Forum
Sponsored by Sarayu Foundation Trust

ಪ್ರಮಥರು : ಶ್ರೀ ಗುರು ಬಸವೇಶ್ವರಾದಿ ಶರಣರು.

ಪ್ರಸಾದ : ಅಷ್ಟಾವರಣಗಳಲ್ಲಿ ಒಂದು. ಆಧ್ಯಾತ್ಮ ಸಾಧನೆಯ ಫಲ. ಇದಕ್ಕೆ ಎರಡು ಅರ್ಥ —

೧. ಗುರು-ಜಂಗಮರಿಗೆ ಅರ್ಪಿತವಾಗಿ ಬಂದುದು, ಶಿವಾರ್ಪಿತವಾದ ವಸ್ತು.

೨. ದೇವಾನುಗ್ರಹ, ಶಿವನಪ್ರಸನ್ನತೆ.

ಪ್ರಸಾದದಲ್ಲಿ ಮೂರು ವಿಧಗಳಿವೆ.

೧. ಗುರುವಿನಿಂದ ಬಂದುದು ಶುದ್ಧ ಪ್ರಸಾದ.

೨. ಲಿಂಗದಿಂದ ಬಂದುದು ಸಿದ್ಧಪ್ರಸಾದ.

೩. ಜಂಗಮದಿಂದ ಬಂದುದು ಪ್ರಸಿದ್ಧ ಪ್ರಸಾದ.

ಎಲ್ಲ ಪದಾರ್ಥಗಳ ರೂಪವನ್ನು ಇಷ್ಟಲಿಂಗಕ್ಕೆ ಅರ್ಪಿಸಿದ್ದು ಶುದ್ಧಪ್ರಸಾದ, ರುಚಿಯನ್ನು ಪ್ರಾಣಲಿಂಗಕ್ಕೆ ಅರ್ಪಿಸಿದರೆ — ಸಿದ್ಧಪ್ರಸಾದ, ತೃಪ್ತಿಯನ್ನು ಭಾವಲಿಂಗಕ್ಕೆ ಅರ್ಪಿಸಿದರೆ — ಪ್ರಸಿದ್ಧ ಪ್ರಸಾದ.

ಪ್ರಸಾದಿ : ಲಿಂಗಾರ್ಪಿತವಾದುದನ್ನು ಮಾತ್ರ ಸೇವಿಸುವವನು. ಲಿಂಗ — ಭೋಗೋಪಭೋಗಿ.

ಬಯಲು : ಶೂನ್ಯ, ಲಿಂಗ, ಶಿವ.

ಭಿನ್ನಹ : ವಿಜ್ಞಾಪನೆ, ಗುರುಗಳನ್ನು ಪೂಜೆಗೆ ಆಹ್ವಾನಿಸುವುದು, ಜಂಗಮರನ್ನು ಊಟಕ್ಕೆ ಕರೆಯುವುದು.

ಭಕ್ತಿ : ದೇವರಲ್ಲಿ ತೋರುವ ಪ್ರೀತಿ. ಅದು ಆರು ಬಗೆಯಾಗಿದೆ, ಶ್ರದ್ಧಾಭಕ್ತಿ, ನಿಷ್ಠಾಭಕ್ತಿ, ಅವಧಾನಭಕ್ತಿ, ಅನುಭವಭಕ್ತಿ, ಆನಂದಭಕ್ತಿ, ಸಮರಸಭಕ್ತಿ.

ಭವಿ : ೧. ಅಂತರ್ಭವಿ — ಅರಿಷಡ್ವರ್ಗಗಳಿಗೆ, ಸಪ್ತವ್ಯಸನಗಳಿಗೆ ದಾಸನಾದವನು.

೨. ಬಹಿರಂಗ ಭವಿ – ಅಂಗದ ಮೇಲೆ ಲಿಂಗವಿಲ್ಲದವನು, ಶಿವಭಕ್ತನಲ್ಲದವನು.

ಭಸ್ಮ : ವಿಭೂತಿ.

ಮಂತ್ರ : ಅಷ್ಟಾವರಣಗಳಲ್ಲಿ ಒಂದು, ಉಪಾಸನೆಯ ಸಾಧನ, 'ಶಿವನಿಗೆ - ನಮಸ್ಕಾರ' ಎಂಬರ್ಥದ ಪಂಚಾಕ್ಷರಿ ಮಂತ್ರ.

ಮಾಯೆ : ಶಿವಶಕ್ತಿ, ಸೃಷ್ಟಿಯ ಬೀಜ, ಗಂಡಿಗೆ ಹೆಣ್ಣಾಗಿ, ಹೆಣ್ಣಿಗೆ ಗಂಡಾಗಿ ಕಾಡುವ ಆಕರ್ಷಕ ಶಕ್ತಿ, ಮನುಷ್ಯನಲ್ಲಿರುವ ಕೆಡುಕು ಮಾಡುವ ಪ್ರವೃತ್ತಿಗೆ ಪ್ರೇರಣೆ ನೀಡುವ ಶಕ್ತಿ.

ಮಿಶ್ರಾರ್ಪಣ : ಮಿಶ್ರವೆಂದರೆ ಪದಾರ್ಥ. ಅರ್ಪಣವೆಂದರೆ ಲಿಂಗಕ್ಕೆ ನೈವೇದ್ಯ ಮಾಡುವುದು. ಲಿಂಗಾರ್ಪಣದ ಸಕೀಲಗಳನ್ನು ಹೇಳುವ ಶಾಸ್ತ್ರವೇ ಮಿಶ್ರಾರ್ಪಣ. ಇವುಗಳಲ್ಲಿ ಕಾಯಾರ್ಪಣ, ಕರಣಾರ್ಪಣ ಮತ್ತು ಭಾವಾರ್ಪಣವೆಂಬ ಮೂರು ವಿಭಾಗಗಳಿವೆ.

ಮುಕ್ತಿ : ಜನನ – ಮರಣ ಚಕ್ರದಿಂದ ಬಿಡುಗಡೆ ಹೊಂದುವುದು. ಮೋಕ್ಷ.

ರುದ್ರಭೂಮಿ : ಶಿವಭಕ್ತರನ್ನು ಸಮಾಧಿಮಾಡುವ, ಲಿಂಗಮುದ್ರೆ ಕಲ್ಲಿನ ಎಲ್ಲೆ ಕಟ್ಟನ್ನುಳ್ಳ ಪ್ರದೇಶ.

ರುದ್ರಾಕ್ಷಿ : ಅಷ್ಟಾವರಣಗಳಲ್ಲಿ ಒಂದು ಪೂಜಾಸಾಧನ. ಪೂಜ್ಯವಾದ ಒಂದು – ಬಗೆಯ ಕಾಯಿ. ಶಿವನ ಕಣ್ಣಿನಿಂದ ಹುಟ್ಟಿದುದು ಎಂಬ ಭಾವನೆ ಇದೆ.

ಲಿಂಗ : ಅಷ್ಟಾವರಣಗಳಲ್ಲಿ ಒಂದು ; ಪರಮ ನಿರಂಜನದ ಕುರುಹು – ಇಷ್ಟಲಿಂಗ.

ಲಿಂಗವೀರ, ಲಿಂಗದ ಬೀರ : ವೀರಭದ್ರನಂತೆ ವೇಷಧರಿಸಿ ಖಡ್ಗಧಾರಿಯಾಗಿ, ವೀರಭದ್ರನ ಹಲಗೆಯೊಡನೆ ಕುಣಿಯುವ ಕಾಯಕದವನು.

ಲಿಂಗವೇದಿ : ಲಿಂಗತತ್ತ್ವದ ರಹಸ್ಯವನ್ನು ಅರಿತವನು, ಲಿಂಗಾನುಭಾವಿ.

ಲಿಂಗಸಂಗಿ : ತನುಗುಣಗಳನ್ನು ನೀಗಿಕೊಂಡವನು, ಸರ್ವಾಂಗ ಲಿಂಗಿ.

ಲಿಂಗಸಾರಾಯ : ಲಿಂಗತತ್ತ್ವಗಳನ್ನು ಅರಿತವನು, ಅನುಭಾವಿ.

ಲಿಂಗಾಂಗ ಕೂಟ : ಕರಸ್ಥಲದ ಲಿಂಗ, ಕಣ್ಣಿನ ದೃಷ್ಟಿಗಳ ಕೂಟ, ಹೃದಯ ಪೀಠದ – ಚಿತ್‌ಲಿಂಗ, ಮನಸ್ಸಿನ ನೆನಪುಗಳ ಕೂಟ.

ಲಿಂಗಾಂಗ ಸಾಮರಸ್ಯ : ಜೀವನು ಪರಮಾತ್ಮನಲ್ಲಿ ಬೆರೆದ ಸ್ಥಿತಿ, ಐಕ್ಯ.

ಲಿಂಗೈಕ್ಯ : ಮುಕ್ತಿಗೆ ಸಂದವನು, ಭವಮಾಲೆಯನ್ನು ಗೆದ್ದವನು.

ಲಿಂಗೋದ್ಭವ : ಶಿವನ ಕೃಪೆಯಿಂದ ಜನಿಸಿದವನು.

ವಿಭೂತಿ : ವೀರಶೈವರ ಪೂಜಾ ಸಾಧನೆಗಳಲ್ಲಿ ಮೊದಲನೆಯದು, ಶಿವನ ಚಿತ್ಕಳೆ. ಇದನ್ನು ಹಸುವಿನ ಸಗಣಿಯಿಂದ ಶಿವಮಂತ್ರನ್ಯಾಸದಿಂದ ಶಿವಾಗ್ನಿಯಲ್ಲಿ ಸುಟ್ಟು ಶಿವಮಂತ್ರದಿಂದ ಶೋಧಿಸಿ ತಯಾರಿಸುತ್ತಾರೆ.

ಷಟ್‌ಕಲೆ : ಆರು ಕಲೆಗಳು — ನಿವೃತ್ತಿ, ಪ್ರತಿಷ್ಟ, ವಿದ್ಯಾ, ಶಾಂತಿ, ಶಾಂತ್ಯಾ. ತೀತ, ಶಾಂತ್ಯಾತೀತೋತ್ತರ.

Digitalized by e-Sahithya Documentation Forum
Sponsored by Sarayu Foundation Trust

ಷಟ್‌ಚಕ್ರ : ಯೋಗದ ಆರು ಚಕ್ರಗಳು — ಆಧಾರ ಚಕ್ರ (ಗುದ)
ಸ್ವಾಧಿಷ್ಟಾನ (ಗುಹ್ಯ),
ಮಣಿಪೂರಕ ಚಕ್ರ (ನಾಭಿ)
ಅನಾಹತ ಚಕ್ರ (ಹೃದಯ)
ವಿಶುದ್ಧ ಚಕ್ರ (ಕಂಠ)
ಆಜ್ಞಾ ಚಕ್ರ (ಹಣೆ)

ಷಡ್‌ದರ್ಶನ : ಆರು ದರ್ಶನಗಳು — ಸಾಂಖ್ಯ, ಯೋಗ, ನ್ಯಾಯ, ವೈಶೇಷಿಕ, ಪೂರ್ವ ಮೀಮಾಂಸೆ, ಉತ್ತರ ಮೀಮಾಂಸೆ.

ಷಡ್ ಅಂಗಗಳು : ೧. ಭಕ್ತ, ಮಾಹೇಶ್ವರ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯ.
೨. ಆತ್ಮಾಂಗ, ವ್ಯೋಮಾಂಗ, ಅನಿಲಾಂಗ, ಅನುಲಾಂಗ, ಜಲಾಂಗ, ಭೂಮ್ಯಾಂಗ.

ಷಡಕ್ಷರ : ಪವಿತ್ರವಾದ ಆರು ಅಕ್ಷರಗಳು – 'ಓಂ ನಮಃಶಿವಾಯ' ಎಂಬ ಮಂತ್ರ.

ಷಡದ್ವ : ಆರು ಆದ್ವಗಳು. ಅವು ವಿದ್ಯುಲ್ಲತೆಯು ಹರಿದುಹೋಗುವ ತಾರಯಂತ್ರಗಳಂತಿರುತ್ತವೆ. ಮಂತ್ರ, ಪದ, ವರ್ಣ, ಭರ್ತ, ತತ್ವ ಮತ್ತು ಕಲಾ. ವಿಶ್ವವು ಪ್ರಕಟವಾಗಲು ಇವು ಸಾಧನವಾಗುತ್ತವೆ. ಇವುಗಳ ಜ್ಞಾನದಿಂದ ಮನುಷ್ಯನಿಗೆ ಪ್ರಗತಿಯ ದಾರಿ ಕಾಣುವುದು.

ಷಡೂರ್ಮಿ : ಆರು ಅಲೆಗಳು — ಕ್ಷುತ್ತು. ಪಿಪಾಸೆ (ಪ್ರಾಣದ ಧರ್ಮ), ಶೋಕ, ಮೋಹ (ಮನದ ಧರ್ಮ), ಜರೆ, ಮರಣ (ದೇಹದ ಧರ್ಮ).

ಷೋಡಶೋಪಚಾರ : ಶಿವಪೂಜೆಯಲ್ಲಿನ ೧೬ ಉಪಚಾರಗಳು. ಪಾದ್ಯ, ಅರ್ಘ್ಯ, ಗೀತ, ವಾದ್ಯ, ನರ್ತನ, ಪ್ರದಕ್ಷಣ, ನಮಸ್ಕಾರ, ಸ್ತೋತ್ರ, ಆಚಮನ, ಗಂಧ, ಪತ್ರಪುಷ್ಪ, ಅಕ್ಷತೆ, ರುದ್ರಾಕ್ಷಿಮಾಲಿಕೆ, ಛತ್ರ, ಚಾಮರ, ವ್ಯಜನ.

ಶಕ್ತಿ ವಿಶಿಷ್ಟಾದ್ವೈತ : ರವಿ-ರಶ್ಮಿ, ಚಂದ್ರ-ಚಂದ್ರಿಕೆಯಂತೆ ಶಿವ-ಶಕ್ತಿಯರು ಅವಿನಾಭಾವ ಸಮ್ಮಂಧದಿಂದ ಇದ್ದಾರೆಂಬ ಸಿದ್ಧಾಂತ.

ಶರಣ : ಶಿವನನ್ನು ಶರಣು ಹೊಕ್ಕವನು ;

ಶರಣಸತಿ ಲಿಂಗಪತಿ : ಭಕ್ತನು ತಾನು ಸತಿಯಾಗಿ, ಲಿಂಗವನ್ನು ಪತಿಯೆಂದು ಭಾವಿಸಿ ಮಾಡುವ ಸೇವೆ, ಭಕ್ತನ ಸಾಮರಸ್ಯ ವಿಧಾನ.

ಶರಣಾರ್ಥಿ : ಶರಣರು ಒಬ್ಬರೊನ್ನೊಬ್ಬರು ಕಂಡಾಗ ಭಕ್ತಿಯಿಂದ ಗೌರವ ಸೂಚಕವಾಗಿ ನಮಸ್ಕರಿಸುವುದು.

ಶಿವದಾನ : ೧. ಶಿವನ ಹೆಸರಿನಲ್ಲಿ ಮಾಡುವ ದಾನ. ೨. ಮಜ್ಜಿಗೆ.

ಶಿವದಾರ : ಲಿಂಗದ ಕರಡಿಗೆ ಕಟ್ಟುವ ೬೩ ಎಳೆಗಳ ದಾರ.

ಶಿವಘೋ : ಶಿವನ ಹೆಸರಿನಲ್ಲಿ ಮೊರೆಯಿಡುವುದು.

ಶಿವಯೋಗಿ : ಶಿವಯೋಗವನ್ನು ಸಾಧಿಸಿದವನು, ಹಠಯೋಗ, ಮೊದಲಾದವುಗಳನ್ನು ಸಾಧಿಸಿದ ಯೋಗಿ.

ಶಿವಾನುಭವ : ಶಿವಶರಣರು ನಿರೂಪಿಸಿದ ಆಧ್ಯಾತ್ಮ ಶಾಸ್ತ್ರ, ಜೀವನು ಶಿವನೊಡನೆ ಸಮರಸವಾಗುವುದನ್ನು ನಿರೂಪಿಸುವ ಶಾಸ್ತ್ರ.

ಶೂನ್ಯ : ಪರಮಾತ್ಮ ವಾಚಕ ಶಬ್ದ ೧. ಅತ್ಯಂತ ಶಾಂತಸ್ಥಿತಿ, ಏನೇನೂ ತೋರದ ಸ್ಥಿತಿ.
೨. ಪರಮಾತ್ಮ ; ಪರಬ್ರಹ್ಮ ವಸ್ತು.

ಶೂನ್ಯಪೀಠ : ಅನುಭವ ಮಂಟಪದ ಅಧ್ಯಕ್ಷ ಪೀಠ.

ಶೂನ್ಯ ಸಂಪಾದನೆ : ೧. ಬಯಲ ಗಳಿಕೆ ಲಿಂಗಾಂಗ ಸಾಮರಸ್ಯ.
೨. ಶಿವನನ್ನು ಸಂಪಾದಿಸುವ ಮಾರ್ಗವನ್ನು ತಿಳಿಸುವ ವಚನಶಾಸ್ತ್ರದ ಗ್ರಂಥ.

ಶೈವಕ್ಷೇತ್ರ : ಶ್ರೀಶೈಲ, ಕಾಶಿ, ಕೇದಾರ, ಕಾಳಹಸ್ತಿ, ಹಂಪಿ.

ಸಕೀಲ : ಸ್ಥಲಗಳ ರಹಸ್ಯವನ್ನು ತಿಳಿಸುವ ಶಾಸ್ತ್ರ. ಸಕೀಲಗಳು ಎರಡು ಸ್ಥಲಗಳನ್ನು ಕೂಡಿಸುವ ಕೊಂಡಿಗಳಾಗಿವೆ. ಮೊದಲು ಎಂಟು ಸಕೀಲಗಳು ಬಹಿರಂಗಕ್ಕೆ ಸಂಬಂಧಪಟ್ಟರೆ ಉಳಿದ ೧೦೮ ಸಕೀಲಗಳು ಅಂತರಂಗಕ್ಕೆ ಸಂಬಂಧಪಡುತ್ತವೆ.

ಸದ್ಭಾವತ್ರಯ : ೧. ಪ್ರಕಾಶನ — ಅರಿವು - ಮರೆವೆಯಿಲ್ಲದೆ ಸದಾ ಬೆಳಗುವ ಸುಜ್ಞಾನ.
೨. ಪ್ರವರ್ತನ – ಸತ್ಯಸದಾಚಾರ ಸನ್ಮಾರ್ಗವಿಡಿದು ನಡೆವುದು.
೩. ಮೋಹನ – ಸದಿಚ್ಛೆಯಿಂದ ಪರಮಾತ್ಮನಲ್ಲಿ ಮೋಹ ವಿಡುವುದು.

ಸನ್ನಿಹಿತ : ನಿರಂತರ ಪ್ರಾಣಲಿಂಗಾನುಸಂಧಾನದಿಂದ ಲಭಿಸಿದ ಭಾವಮುಗ್ನತೆ ; ಭಾವಲಿಂಗಜ್ಞಾನ.

Digitalized by e-Sahithya Documentation Forum
Sponsored by Sarayu Foundation Trust

ಸಪ್ತವ್ಯಸನಗಳು : ಏಳು ಗೀಳುಗಳು —

೧. ತನುವ್ಯಸನ, ಮನವ್ಯಸನ, ಧನವ್ಯಸನ, ರಾಜ್ಯವ್ಯಸನ, ಉತ್ಸಾಹವ್ಯಸನ, ಸೇವಕವ್ಯಸನ, ಸ್ತ್ರೀವ್ಯಸನ.

೨. ಬೇಟೆ, ಜೂಜು, ಹಗಲುನಿದ್ರೆ, ಪರನಿಂದೆ, ಸ್ತ್ರೀಲಾಲಸೆ, ಮದ್ಯಪಾನ, ನೃತ್ಯಗಾನ, ವಾದನಾಭಿರುಚಿ.

ಸಪ್ತಾಚಾರಗಳು : ಅಂತರಂಗ ಕ್ರಿಯೆಯ ಶುದ್ಧಿಗೆ ಇರುವ ಏಳು ಆಚಾರಗಳು — ಕ್ರಿಯಾಚಾರ, ಜ್ಞಾನಾಚಾರ, ಭಾವಾಚಾರ, ಸತ್ಯಾಚಾರ, ನಿತ್ಯಾಚಾರ, ಧರ್ಮಾಚಾರ, ಸರ್ವಾಚಾರ,

ಸಮಾಧಿ: ೧. ಧ್ಯಾನಸ್ಥಿತಿ.

೨. ಪರಶಿವನಲ್ಲಿ ಐಕ್ಯವಾಗುವುದು.

೩. ದೈವಾಧೀನರನ್ನು ಹೂಳಲ್ಪಟ್ಟ ಪವಿತ್ರಗೋರಿ.

ಸಾದಾಖ್ಯ: ಇವು ಪ್ರಣವ ಸ್ವರೂಪವಾದ ಮಹಾಲಿಂಗದಲ್ಲಿ ಜಗತ್ತು ಸೃಷ್ಟಿಯಾಗುವ ಮುಂಚೆಯೇ ಪ್ರಕಟವಾಗುತ್ತವೆ. ಇವುಗಳಲ್ಲಿ ಜಗತ್ತು ಪ್ರಕಟವಾಗಲು ಬೇಕಾಗುವ ಸಾಧನ ಸಾಮಾಗ್ರಿಗಳಿರುತ್ತವೆ. ಇವು ಐದು — ಮಹಾಸಾದಾಖ್ಯ, ಮೂರ್ತಿಸಾದಾಖ್ಯ, ಅಮೂರ್ತಿಸಾದಾಖ್ಯ, ಕರ್ತೃಸಾದಾಖ್ಯ, ಕರ್ಮಸಾದಾಖ್ಯ—ಈ ಪಂಚ ಸಾದಾಖ್ಯಗಳು ಪರಶಿವನ ಪಂಚಮುಖಗಳೆಂದು ಹೆಸರಾಂತಿವೆ.

ಸಾರಾಯ : ನಿಜತತ್ತ್ವ; ಪರಮಸಾರ,—ತಿರುಳು.

ಸಿದ್ಧ: ಜನನ-ಮರಣಗಳನ್ನು ಗೆದ್ದವನು, ಶಿವಯೋಗಿ.

ಸುಷುಮ್ನಾನಾಡಿ: ಯೋಗಸಾಧನೆಗೆ ಅನುಕೂಲವಾದ ನಾಡಿ; ಬೆನ್ನು ಮೂಳೆಯಲ್ಲಿರುವ ನಾಡಿ.

ಸ್ಥಲ: ೧. ಶೂನ್ಯ; ಶಿವ.

೨. ಶಿವಕವಿಗಳು ತಮ್ಮ ಗ್ರಂಥಗಳಲ್ಲಿ ವಿಷಯ ವಿವೇಚನೆಗಾಗಿ ಮಾಡಿಕೊಂಡ ವಿಭಾಗಕ್ಕೆ ಕೊಟ್ಟ ಹೆಸರು.

ಸ್ವಾಯುತ: ಇಷ್ಟಲಿಂಗದ ಅನುಸುಂದಾನದಿಂದ ಅಳವಡಿಸಿಕೊಂಡ ಪ್ರಾಣಲಿಂಗಾನುಸಂಧಾನ.

ಹಠಯೋಗ: ಯೋಗಗಳಲ್ಲೊಂದು; ಉಗ್ರಕ್ರಮಗಳುಳ್ಳ ಯೋಗ.

ಹಾವುಗೆ: ಶರಣರುಗಳು, ಗುರುಗಳು ಧರಿಸಿಕೊಳ್ಳುವ ಮರದ ಶ್ರೀಪಾದರಕ್ಷೆ.

ಹುದುಗ ಪಾವುಡ: ಕರಡಿಗೆಯೊಳಗೆ (ಲಿಂಗದ ಕಾಯಿ) ಇಷ್ಟಲಿಂಗವನ್ನು ಮುಚ್ಚಿಡುವ (ರಕ್ಷಿಸಿಡುವ) ವಸ್ತ್ರ.

ಸಾದರ - ಸ್ವೀಕಾರ

ವೀರಶೈವ ಅಧ್ಯಯನ ಸಂಸ್ಥೆ, ಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠ ಡಂಬಳ – ಗದಗಇವರ ಪ್ರಕಟಣೆಗಳು

೧. ಹಳಕಟ್ಟಿ ಫಕೀರಪ್ಪನವರು; (ಜೀವನ ಚಿತ್ರಣ) ಲೇ || ಪ್ರೊ. ಸಂಗಮನಾಥ ಹಂಡಿ. ಪುಟಗಳು 88 ಫುಲ್ ಸ್ಕೇಪ್ ⅛ ಬೆಲೆ 1-50 ರೂ (1980)

೨. ಬಸರಿಗಿಡದ ವೀರಪ್ಪನವರು (ಜೀವನ ಚರಿತ್ರೆ) ಲೇ|| ಶಾಂತರಸ. ಪುಟಗಳು 72 ಫುಲ್‌ಸ್ಕೇಪ್ ⅛ ಬೆಲೆ 1-50 ರೂ (1980).

೩. ಗುಬ್ಬಿ ತೋಟದಪ್ಪನವರು (ಜೀವನ ಚರಿತ್ರೆ) ಲೇ || ಪ್ರೊ. ಆರ್. ರಾಜಪ್ಪ ಪುಟಗಳು 66 ಫುಲ್‌ಸ್ಕೇಪ್ ⅛ ಬೆಲೆ 1-50 ಊ (1980).

೪. ಸರದಾರ ವೀರನಗೌಡರು (ಜೀವನ ಚರಿತ್ರೆ) ಲೇ || ಶಾಂತಾದೇವಿ ಮಾಳವಾಡ ಪುಟಗಳು 90 ಫುಲ್‌ಸ್ಕೇಪ್ ⅛ ಬೆಲೆ 1-50 ರೂ (1980).

೫. ದೊಡ್ಡಮೇಟಿ ಅಂದಾನಪ್ಪನವರು (ಜೀವನ ಚರಿತ್ರೆ) ಲೇ || ಜ್ಞಾನದೇವ ದೊಡ್ಡಮೇಟಿ. ಪುಟಗಳು 136 ಫುಲ್‌ಸ್ಕೇಪ್ ⅛ ಬೆಲೆ 1-50 ರೂ (1980)

೬. ಪರಮ ಪ್ರಸಾದಿ ಮಾಯಾ ಶಿವಶರಣ ಕಕ್ಕಯ್ಯ; ಲೇ|| "ಮಾಯಾ ಪ್ರಸಾದ" **ಪ್ರಕಾಶಕರು :** ಚಂದ್ರಪ್ರಭ ಪ್ರಕಾಶನ, 6/ಬಿ, ಬಿ. ಎಸ್. ಅಂಬೇಡ್ಕರ್ ರಸ್ತೆ, ಫ್ರೇಜರ್ ಟೌನ್ ಬೆಂಗಳೂರು - 5. ಪುಟಗಳು 10+67. ಬೆಲೆ 4-00 ರೂ (1980).

(**ಸೂಚನೆ :**–ಸಾದರ ಸ್ವೀಕಾರಕ್ಕೆ ಒಂದು ಪ್ರತಿ ; ವಿಮರ್ಶೆಗೆ ಎರಡುಪ್ರತಿ ಕಳಿಸಬೇಕು).

ಪ್ರತಿಯೊಬ್ಬ ಮಾನವನೂ ತಾನು ಇಷ್ಟಪಡುವ ಕೆಲಸವನ್ನು ಕಂಡುಕೊಳ್ಳಬೇಕು. ಆದರಿಂದ ಅವನಿಗೆ ಹೊಟ್ಟೆ ತುಂಬದು; ಹಣ ಸಿಗದು, ಆದರೂ ಅದನ್ನು ಮಾಡುತ್ತಿರಬೇಕು. ಏಕೆಂದರೆ ಆದರಿಂದ ಅವನಿಗೆ ಪರಿಪೂರ್ಣತೆ ಸಿಗುತ್ತದೆ.

Digitalized by e-Sahithya Documentation Forum
Sponsored by Sarayu Foundation Trust

ಸೇವಾವಕಾಶಗಳು ಲಭ್ಯವಿವೆ

(ಪುರುಷರು ಮತ್ತು ಸ್ತ್ರೀಯರು ಉಭಯತರಿಗೂ)

ವಿಶ್ವಕಲ್ಯಾಣ ಮಿಷನ್ ಬಸವಣ್ಣನವರು ಹಾಕಿಕೊಟ್ಟ ಸತ್ಪಥದಲ್ಲಿ ನಡೆಯುತ್ತಿರುವ ಜಾತ್ಯತೀತ ಸಂಸ್ಥೆ. ತಮ್ಮ ಬದುಕನ್ನು ಸಾರ್ಥಕಗೊಳಿಸಿಕೊಳ್ಳಬೇಕೆಂಬ ಹಲವಾರು ಸಹೃದಯರಿಗೆ ಸೂಕ್ತ ಅವಕಾಶಗಳಿವೆ.

ಆಸಕ್ತಿಯಿರುವವರಿಗೆ ಅವಕಾಶಗಳು ಕೆಳಕಂಡಂತಿವೆ :

1 **ಕಾಯಕಜೀವಿ :-** ವ್ಯವಸಾಯ, ತೋಟಗಾರಿಕೆ, ಡೇರಿ, ಪ್ರಿಂಟಿಂಗ್ ಪ್ರೆಸ್ ಅಡಿಗೆ ಮತ್ತು ನೆಯ್ಗೆ (ಇವರಿಗೆ ಊಟ-ವಸತಿ ಕೊಟ್ಟು ಮೇಲೆ ಸಂಬಳ ಕೊಡಲಾಗುತ್ತದೆ.) ವಿ. ಸೂ. ಕೈಮುಗ್ಗದ ಒಂದು ಕಾಯಕ ಘಟಕ ಆರಂಭವಾಗಲಿದ್ದು ನೆಯ್ಗೆಯಲ್ಲಿ ಪರಿಣಿತರಾದ ೬ರ್ವವ್ಯಕ್ತಿ ಬೇಕಾಗಿದ್ದಾರೆ ಅನುಭವ ಇದ್ದವರು ಅರ್ಜಿ ಹಾಕಿಕೊಳ್ಳಿರಿ.


2 **ಸೇವಕ :-** ಯಾವುದೇ ಸಂಬಳವನ್ನು ನಿರೀಕ್ಷಿಸದೆ, ಸಂಸ್ಥೆಯಿಂದ ಊಟ ವಸತಿ, ಬಟ್ಟೆ ಆಶ್ರಯ ಪಡೆದು, ವಹಿಸಿಕೊಟ್ಟ ಕಾಯಕ ಮಾಡುತ್ತ ಪ್ರಶಾಂತ. ವಾದ ಪ್ರಾಮಾಣಿಕ ಜೀವನ ನಡೆಸಬೇಕೆನ್ನುವವರು.

3 **ಸಾಧಕ :-**ಅಭ್ಯಾಸ, ಅನುಷ್ಠಾನ ಮಾಡುತ್ತ ಗ್ರಂಥಾಧ್ಯಯನದಲ್ಲಿ ಆಸಕ್ತಿ ತಾಳಿ, ಸನ್ಯಾಸ ಜೀವನವನ್ನು ಸ್ವೀಕರಿಸಬೇಕೆಂಬ ಇಚ್ಛೆಯಿಂದ ಪಾಠಪ್ರವಚನಾದಿಗಳಲ್ಲಿ ಆಸಕ್ತರಾಗಿ, ಯೋಗಾಭ್ಯಾಸ ಮಾಡಬೇಕೆನ್ನುವವರು.

4 **ಬೋಧಕ :-** ಪ್ರವಚನ ಹೇಳುವದರಲ್ಲಿ ಆಸಕ್ತಿಯಿದ್ದು ಅದಕ್ಕಾಗಿ ಸೂಕ್ತ ತರಬೇತಿ, ಸಂಸ್ಕಾರ ಹೊಂದಿ ಸಮಾಜ ಸೇವೆಯಲ್ಲಿ ತೊಡಗಬೇಕೆನ್ನುವವರು. ಬೋಧಕ ವೃತ್ತಿ ಕೈಗೊಳ್ಳಬೇಕೆಂಬ ಸಾಧಕರಿಗೆ ಸೂಕ್ತ ತರಬೇತಿ ನೀಡಿ, ಅವರು ಸ್ವತಂತ್ರವಾಗಿ ಪ್ರಚಾರ ಕಾರ್ಯ ಮಾಡಬಲ್ಲರು ಎನಿಸಿದಾಗ ದೀಕ್ಷೆ ನೀಡಿ (ಅವರು ವಿಶ್ವಕಲ್ಯಾಣ ಮಿಷನ್ ಆಶ್ರಯದಲ್ಲೇ ದುಡಿಯುವ್ರದಾದರೆ ಸಾಮಾನು, ಸಲಕರಣೆ ಸಿಬ್ಬಂದಿಯೊಡನೆ ಕಳಿಸಲಾಗುವದು) ಪ್ರಚಾರ ಕಾರ್ಯಕ್ಕೆ ಕಳಿಸಲಾಗುವದು. ಈ ಅವಕಾಶಗಳು ಪುರುಷ, ಸ್ತ್ರೀಯರು, ಉಭಯತರಿಗೂ.

ವಿಶ್ವಕಲ್ಯಾಣ ಮಿಷನ್

ಬಸವ ಮಂಟಪ, ಕಾರ್ಡ್ ರೋಡ್, 2ನೇ ಬ್ಲಾಕ್
ರಾಜಾಜಿನಗರ ಬೆಂಗಳೂರು-560 010.



೧. ಸರ್ಟಿಫಿಕೇಟ್ – ನಿಜ ವಿದ್ಯೆ

ಒಂದು ದಿನ ಸುಪ್ರಭಾತದಲ್ಲಿ ಯೋಗಾಸನಗಳನ್ನು ಮಾಡುತ್ತಿದ್ದ ದಯಾನಂದ ಸ್ವಾಮಿ, ನಂದೀಶ್ವರಸ್ವಾಮಿ ಮತ್ತು, ಶರಣಬಸವಾನಂದಸ್ವಾಮಿಗಳು ಕಲ್ಯಾಣ ಕಿರಣದ ವ್ಯವಸ್ಥಾಪಕ ಕಾರ್ಯಕರ್ತರನ್ನೂ ಯೋಗಾಸನಮಾಡಲು ಕರೆದರು. ಅವರು ತುಂಬಾ ದುರ್ಬಲವಾಗಿ ಇರುವುದೇ ಅಲ್ಲದೆ ಸದಾ ಮೈಯಲ್ಲಿ ಸ್ವಾಸ್ಥ್ಯವಿರದು. "ಈ ಆಸನಗಳನ್ನು ಕಲಿತುಬಿಡಿರಿ. ನಿಮ್ಮ ಆರೋಗ್ಯ ಚೆನ್ನಾಗುವುದು ನರಳಾಟ ತಪ್ಪುವುದು" ಎಂದರು ನಂದೀಶ್ವರರು. ಆಗ ಅವರು "ನನಗೆ ಇವೆಲ್ಲ ಗೊತ್ತು. ನಾನು ಯೋಗಾಸನ ಡಿಪ್ಲೊಮಾ ಮಾಡಿ ಯೂನಿವರ್ಸಿಟಿ ಸರ್ಟಿಫಿಕೇಟ್ ಪಡೆದಿದ್ದೇನೆ." ಎಂದರು. ಆಗ ಅಲ್ಲಿದ್ದವರೆಲ್ಲ ಖೊಳ್ಳನೆ ನಕ್ಕು "ಸರಿ, ಸರ್ಟಿಫಿಕೇಟ್ ಇದ್ದರಾಯಿತು ಬಿಡಿ, ಯೋಗಾಸನ ಮಾಡುವುದೇನೂ ಬೇಡ." ಎಂದರು. ಇದನ್ನು ಆಲಿಸುತ್ತಿದ್ದ ನನಗೆ ಒಂದು ವಿಚಾರ ಸ್ಫುರಿಸಿತು.

ಒಬ್ಬ ಮನುಷ್ಯ ಸರ್ಟಿಫಿಕೇಟ್ ಪಡೆದಮಾತ್ರಕ್ಕೆ ಆ ಶಾಸ್ತ್ರದಲ್ಲಿ ಬಲ್ಲಿದನೆ? ನಮ್ಮಲ್ಲಿ ಸರ್ಟಿಫಿಕೇಟ್ಸ್ ಕೆಲವೊಮ್ಮೆ ಹಣಕೊಟ್ಟರೂ ದೊರೆಯುತ್ತೆ. ಒಮ್ಮೆ ಏತಕ್ಕೋ ಒಬ್ಬರಿಗೆ ಕಾಲರಾ ಮತ್ತು ಸಣ್ಣ ಸಿಡುಬಿನ ಲಸಿಕೆ ಸರ್ಟಿಫಿಕೇಟು ಬೇಕಿತ್ತು. ಅವನ್ನು ಹಾಕಿಸಿಕೊಳ್ಳದೆಯೇ ಕೇವಲ ಇಪ್ಪತ್ತು ರೂಪಾಯಿಗೆ ಅಧಿಕೃತ ಸರ್ಟಿಫಿಕೇಟು ತಂದರಂತೆ! ಮತ್ತು ಅಭ್ಯಾಸ ಮಾಡಿಯೇ ಯೋಗಾಸನಾ ಸರ್ಟಿಫಿಕೇಟು ತೆಗೆದುಕೊಂಡರೆಂದು ಭಾವಿಸೋಣ. ಆದರೀಗ ಅವುಗಳ ಅಭ್ಯಾಸವೇ ಇಲ್ಲದೆ ಇದ್ದರೆ ಆ ಸರ್ಟಿಫಿಕೇಟಿನ ಪ್ರಯೋಜನವೇನು? ಮತ್ತು ಕೇವಲ ಆ ಸರ್ಟಿಫಿಕೇಟ್ ಬಲದಿಂದಲೇ ಇನ್ನೊಬ್ಬರಿಗೆ ಕಲಿಸಲಾರರು. ಹಾಗೆಯೇ ಕೆಲವರು ಬಿ. ಎ. ಎಂ. ಎ. ಕನ್ನಡ ಸರ್ಟಿಫಿಕೇಟ್ ಸಂಪಾದಿಸುತ್ತಾರೆ. ನೆಟ್ಟಗೆ ಒಂದು ಪ್ರಬಂಧವಿರಲಿ, ಪತ್ರಸಹ ಬರೆಯಲಾರರು. ಆದರೆ ಇನ್ನು ಕೆಲವರು ಯಾವ ಸರ್ಟಿಫಿಕೇಟ್ ಇಲ್ಲದೆಯೂ

Digitalized by e-Sahithya Documentation Forum
Sponsored by Sarayu Foundation Trust

ಯೋಗಾಸನ ಪ್ರವೀಣರಾಗಿ ಯೋಗಾಸನ ಕಲಿಸಬಲ್ಲರು ; ಕನ್ನಡದಲ್ಲಿ ಪ್ರಭುತ್ವ ಸಾಧಿಸಿ ಸಾಹಿತ್ಯ ರಚಿಸಬಲ್ಲರು. ಈಗ ಯಾವುದು ಅಧಿಕೃತ ? ಮತ್ತು ಉಪಯುಕ್ತ ?

ಹಾಗೆಯೇ ನಮ್ಮಲ್ಲಿ ಕೆಲವರು, ಹಣವಿತ್ತು ಸರ್ಟಿಫಿಕೇಟ್ ಪಡೆದಂತೆ, ಜಾತಿಯ ಬಲದ ಮೇಲೆ ಕಾವಿಲಾಂಛನದ ಸರ್ಟಿಫಿಕೇಟ್ ಪಡೆಯುತ್ತಾರೆ. ಆದರೆ ಆ ಲಾಂಛನಕ್ಕೆ ತಕ್ಕ ಅರಿವು, ಅನುಭಾವ, ವ್ಯಕ್ತಿತ್ವ ಇರುವುದಿಲ್ಲ. ಸಾಮಾಜಿಕ ಘರ್ಷಣೆಗೆ ಸಿಕ್ಕ ಮತ್ತೆ ಕೆಲವರು ಸರಿಯಾದ ಗುರು, ಆಶ್ರಯ ಸಿಗದಿದ್ದರೂ ಜ್ಞಾನ ಸನ್ಯಾಸದ ಮುಖಾಂತರ ಅಸಾಮಾನ್ಯ ವಿದ್ವತ್‌ಪಡೆದು, ಲಾಂಛನ ಧರಿಸಿ ಸಂಚರಿಸುತ್ತಾರೆ. ಅವರು ಸಮಾಜಕ್ಕೆ ಸರಿಯಾದ ಧಾರ್ಮಿಕ ಜ್ಞಾನ ನೀಡಿ ಮುನ್ನಡೆಸುತ್ತಾರೆ. ಆದರೆ ಸಂಪ್ರದಾಯಬದ್ಧ ಮೂಢವರ್ಗವು, ಜ್ಞಾನ ಬಲ್ಲಿದರಿಂದ ಕಲಿಯದೆ, ಕಲಿಸಲಾರದ ಸರ್ಟಿಫಿಕೇಟ್ ಹೋಲ್ಡರ್ಸನ್ನು ನಂಬಿಕೊಂಡು ಅದೇ ದಡ್ಡ ಸ್ಥಿತಿಯಲ್ಲೇ ಉಳಿಯುತ್ತದೆ.

ಇಲ್ಲಿ ಇನ್ನೊಂದು ಅಂಶ. ನಮ್ಮ ದೃಷ್ಟಾಂತದಲ್ಲಿ ಬರುವ ಸರ್ಟಿಫಿಕೇಟ್ ಹೋಲ್ಡರ್ ಯೂನಿವರ್ಸಿಟಿ ಸರ್ಟಿಫಿಕೇಟ್ ಪಡೆದಿರುವುದರಿಂದ ಒಂದು ಕಾಲದಲ್ಲಿ, ಅಂದರೆ ಅಧ್ಯಯನ ಮಾಡುವಾಗ ಯೋಗಾಸನ ಮಾಡಿರಲೇಬೇಕು. ಮಾಡಿರದಿದ್ದರೆ ಸರ್ಟಿಫಿಕೇಟ್ ಹೇಗೆ ಸಿಗಲು ಸಾಧ್ಯ! ಆದರೆ ಈಗ ಮಾತ್ರ ಆ ಯಾವ ಆಸನಗಳ ಪರಿಣತಿ ಇಲ್ಲದ ಸ್ಥಿತಿ ಕಾಣುವುದು. ಆದರೂ ಸರ್ಟಿಫಿಕೇಟು ಇದ್ದಮಾತ್ರಕ್ಕೆ ಕಲಿಸುವರೆಂದು ನಾವು ನಂಬಲಾದೀತೆ ?

ಹಾಗೆಯೇ ಕೆಲವು ಸಾಧಕರು, ಸ್ವಾಮಿಗಳು ಒಂದು ಕಾಲಕ್ಕೆ ವಿಶಿಷ್ಟ ಆದರ್ಶ ಪಥದಲ್ಲಿ ನಡೆಯಲೋಸುಗ ಲಾಂಛನ ಹೊತ್ತಿರುತ್ತಾರೆ; ಮತ್ತು ಅದರಂತೆ ನಡೆದಿರುತ್ತಾರೆ. ಆದರೆ ಕಾಲಾನಂತರದಲ್ಲಿ ಯಾವುದೋ ಕಾರಣದಿಂದ ತಮ್ಮ ಆದರ್ಶದಿಂದ ದೂರಸರಿದಿರುತ್ತಾರೆ! ಹಿಂದೆ ಪಡೆದಿದ್ದ ಕಾವಿಲಾಂಛನದ ಸರ್ಟಿಫಿಕೇಟು ಅವರ ಬಳಿ ಉಂಟು ; ಆದರೆ ಅರಿವು-ಅನುಭಾವ-ಆದರ್ಶಗಳು ಕುಂಠಿತವಾಗಿರುತ್ತವೆ. ಇಂಥ ಪ್ರಸಂಗದಲ್ಲೂ ನಾವು ಅವರನ್ನು ಆಶ್ರಯಿಸಲಾದೀತೆ ? ಎಲ್ಲಾ ಸರ್ಟಿಫಿಕೇಟ್ ದಾಟಿದ್ದು ಅಳವಡಿಸಿಕೊಂಡ ವಿದ್ಯೆ. ಆ ವಿದ್ಯೆಯಿಂದಲೇ ಮನುಷ್ಯ ಮೇಲಕ್ಕೇರುವುದೇ ವಿನಾ, ಯಾವ ಸರ್ಟಿಫಿಕೇಟಿನಿಂದಲ್ಲ !

೨. ಮೋಡದ ಆಚೆ-ಅಜ್ಞಾನದಾಚೆ

ವಿಮಾನದಲ್ಲಿ ಕುಳಿತು ಮೇಲೇರುತ್ತಾ ಹೋದರೆ, ಮೋಡಗಳ ತೆರೆಯನ್ನು ಭೇದಿಸಿಕೊಂಡು ಮೇಲೆ ಹೋಗುವೆವು. ನೆಲದಿಂದ ನೋಡಿದರೆ ಮೋಡಕವಿದು ಮಂಕಾಗಿರುತ್ತದೆ. ಆದರೆ ಮೋಡದ ಮೇಲೆ ಹೋದರೆ ಅದ್ಭುತವಾಗಿರುತ್ತದೆ. ಸೂರ್ಯನ ಹೊಂಗಿರಣಗಳು ಬಿಳಿಯ ಹಂಸದಂತಹ ಮೋಡಗಳ ಮೇಲೆ ಬಿದ್ದು ಅವುಗಳಿಗೆ ಜೀವತುಂಬುತ್ತದೆ. ಬಾನಿನಂಗಳದಲ್ಲಿ ಬಗೆ ಬಗೆಯ ಬಣ್ಣಗಳನ್ನು ಚಿಮ್ಮುತ್ತದೆ. ನಾವು ಕೆಳಗೆ ನಿಂತು ಸೂರ್ಯದರ್ಶನವಿಲ್ಲ; ಸೂರ್ಯನೇ ಇಲ್ಲ ಎಂದು ಭಾವಿಸುತ್ತೇವೆ. ಮೋಡದ ತೆರೆಯನ್ನು ವಿಮಾನದ ಮೂಲಕ ಭೇದಿಸಿ ಮೇಲೆ ಹೋದರೆ ಸೂರ್ಯನ ಪ್ರಖರ ಬೆಳಕನ್ನು ಕಾಣುತ್ತೇವೆ. ಆ ಕಲಾವಿದ ಕೊರೆಯುವ ಚಿತ್ರ ವಿಚಿತ್ರ ರೇಖೆಗಳನ್ನು ಕಂಡು ಆನಂದ ತುಂದಿಲರಾಗುತ್ತೇವೆ.

(1) ಇದೇ ರೀತಿ ಅಜ್ಞಾನದ ಮೋಡದಾವರಣ ನಮ್ಮನ್ನು ಸುತ್ತುವರಿದಾಗ ದೇವರು, ದೈವೀಶಕ್ತಿ ಎಂಬ ರವಿದರ್ಶನವಾಗದೆ, ನಾವು ಅದನ್ನೇ ನಿರಾಕರಿಸುತ್ತೇವೆ. ಧ್ಯಾನ, ಆತ್ಮಚಿಂತನೆ ಎಂಬ ವಿಮಾನವನ್ನೇರಿ ನಾವು ಆಂತರಂಗಿಕವಾಗಿ ಮುಂದುವರಿದಾಗ ದೈವೀ ಅನುಭವಗಳ ವಿನ್ಯಾಸಕಂಡು, ದೇವನ ನಿಜಲೀಲೆಯನ್ನು ಅರಿಯುತ್ತೇವೆ.

(2) ಈ ವಿಚಾರವನ್ನು ಇನ್ನೊಂದು ರೀತಿಯಿಂದಲೂ ಅರ್ಥೈಸಬಹುದು. ಅನೇಕ ವ್ಯಕ್ತಿಗಳಿಗೆ ಮುಖ್ಯವಾಗಿ ಸಂತರಿಗೆ ಬರುವ ಕಷ್ಟ-ಕಾರ್ಪಣ್ಯ, ನೋವು ನಿಂದೆಗಳನ್ನು ಕಂಡು ಅವರ ವ್ಯಕ್ತಿತ್ವದ ಬಗ್ಗೆ ತಪ್ಪು ತಿಳಿಯುತ್ತೇವೆ. ಆದರೆ ಪ್ರಾಮಾಣಿಕ ಪ್ರಯತ್ನದಿಂದ ಅವರ ಬದುಕಿನ ಒಳಹೊಕ್ಕು ನೋಡಿದರೆ, ಒಂದು ಮಟ್ಟದವರೆಗೆ ನಿಂದೆ-ನೋವು-ಕಾರ್ಪಣ್ಯಗಳ ಮೋಡಗಳು ಮುಚ್ಚಿರುವುದನ್ನು, ಅದರಾಚೆ ಅವರ ಬಾಳಿನ ಸೂರ್ಯ ಯಥಾರೀತಿ ಇರುವುದನ್ನು ಕಾಣುತ್ತೇವೆ.

೩. ದಾರಿ ತಪ್ಪಿದವರು

ಒಂದು ದಿನ ವಿಶೇಷವಾಗಿ ಬಿಸಿಲು ಬಿದ್ದಿತ್ತು. ಈ ಬಾರಿ ಇಲ್ಲಿ ಅಪರೂಪವಾಗಿ ನವೆಂಬರ್ ತಿಂಗಳಲ್ಲಿ ಬಿಸಿಲು ಬೀಳುತ್ತಿದೆ. ಹೊಂಬಿಸಲು ಮೂಡುತ್ತಲೇ ಜನ ತುಂಬಾ ಹರ್ಷಿಸುವರು. ಅಂಥ ಹೊಂಬಿಸಲು ಬಿದ್ದಿತ್ತು ; ಮೂರು ನಾಲ್ಕು ದಿನ ಮೋಡಕವಿದ ವಾತಾವರಣವಿದ್ದು, ಇಂದು ಮೈಛಳಿ ಬಿಟ್ಟಂತಾಗಿತ್ತು. ನಾನೂ ಹೊರಗೆ ಹೋಗಿ ಸ್ವಲ್ಪ ಅಡ್ಡಾಡೋಣ ಎಂದು ಆಶಿಸಿದೆ. ನಮ್ಮ ಜೊತೆಗೆ ಕಳಿಸಲು ಯಾರೂ ಇಲ್ಲ ಎಂದು ಶ್ರೀಮತಿ ಕಾಂತಾ ಕೋರಿಯವರು ಪೇಚಾಡುತ್ತಿದ್ದರು. ನಾವೆಲ್ಲ ಹೋಗಿ ಬರಬಲ್ಲೆವು ಎಂದು ನಾವು ಹೊರಟೆವು. 'ದಯವಿಟ್ಟು ನಮ್ಮ ಮನೆ

Digitalized by e-Sahithya Documentation Forum
Sponsored by Sarayu Foundation Trust

ವಿಳಾಸ ಬರೆದು ಇಟ್ಟುಕೊಳ್ಳಿರಿ. ದಾರಿತಪ್ಪಿದರೆ ಫೋನ್ ಮಾಡಿರಿ' ಎಂದರು ಅವರ ಸೊಸೆ ಗಿರಿಜಾ. ನಾನು ನಕ್ಕೆ, 'ಅಡ್ರೆಸ್ ನನ್ನ ತಲೆಯಲ್ಲೇ ಇದೆ. ನಾವೇನೂ ತಪ್ಪಿಸಿಕೊಳ್ಳುವುದಿಲ್ಲ' ಎಂದು ನುಡಿದು ಮುಂದೆ ಹೊರಟೆವು. ಅಂಚೆ ಕಛೇರಿ ಹುಡುಕುತ್ತಾ ಬಿಸಿಲಲ್ಲಿ ಅಡ್ಡಾಡಿ, ಸ್ವಲ್ಪ ದೂರದವರೆಗೆ ಹೋಗಿ, ಮತ್ತೆ ಬಂದೆವು. ಆದರೆ ಅಷ್ಟರಲ್ಲಿ ನಾವು ಬರುವುದು ನಿಧಾನವಾಯಿತು ಎಂದು ಮನೆಗೆ ಬಂದಿದ್ದ ಮಗ ಸುಭಾಷರನ್ನು ಕಾಂತಾಕೋರಿಯವರು ಹುಡುಕಲು ಕಳಿಸಿದ್ದರು. ಅವರು ಕಾರು ತೆಗೆದುಕೊಂಡು ಬಂದಿದ್ದರು. ನಾವು ನಕ್ಕು ಪರವಾಗಿಲ್ಲ ಎಂದು ವಾಪಸ್ಸು ಕಳಿಸಿದೆವು. ನಂತರ ಮನೆಗೆ ಬಂದೆವು. ಆಗ ಗಿರಿಜಾಕೋರಿ ಮತ್ತು ಅವರ ಪತಿ ಸುರೇಶರಲ್ಲಿ ಮಾತು ನಡೆದಿತ್ತು. "ಅಯ್ಯೋ, ಎಲ್ಲೋ ತಪ್ಪಿಸಿಕೊಂಡರೆಂದು ತಿಳಿದಿದ್ದೆ. ನಾನು ಹೊಸದಾಗಿ ಬಂದಾಗ ಹೀಗೆ ಹೋಗಿ ತಪ್ಪಿಸಿಕೊಂಡಿದ್ದೆ" ಎಂದರು. ಆಗ ಸುರೇಶ್ ಹೇಳುತ್ತಿದ್ದರು, "ಮಾತಾಜಿಯವರು ಸಾಮಾನ್ಯರಲ್ಲ; ಅವರಿಗೆ ವಿಶೇಷ ಜ್ಞಾನವಿದೆ. ಅವರು ಈಗಾಗಲೇ ಸಾಕಷ್ಟು ಪ್ರವಾಸ ಮಾಡಿದ್ದಾರೆ. ತಪ್ಪಿಸಿಕೊಳ್ಳದೆ ಬರಬಲ್ಲರು" ಎಂದು.

ನಾನು ಅವರ ಸಂಭಾಷಣೆ ಆಲಿಸುತ್ತಲೇ, ಮನಸ್ಸಿನಲ್ಲಿ ಒಂದು ವಿಚಾರ ಸ್ಫುರಿಸಿತು. ಹೊಸ ಜಾಗಕ್ಕೆ ಹೋದಾಗ ಸಾಮಾನ್ಯರು ದಾರಿತಪ್ಪಿಸಿಕೊಳ್ಳುವ ಸಂಭವವಿರುತ್ತದೆ. ವಿಶೇಷ ಜ್ಞಾನವಿದ್ದವರು ಪ್ರವಾಸದ ಕಲೆ ಗೊತ್ತಿದ್ದವರು street guides ಮುಖಾಂತರ ಅಥವಾ ಯಾರನ್ನಾದರೂ ವಿಚಾರಿಸುವುದರ ಮೂಲಕ, ಕಡೆಗೆ ಮನೆಗೆ ಟೆಲಿಫೋನ್ ಮಾಡುವುದರ ಮುಖಾಂತರ ಮನೆಸೇರಬಲ್ಲರು. ಅದೇ ರೀತಿ ಜನಸಾಮಾನ್ಯರು ಜೀವನ ಪಥದಲ್ಲಿ ದಾರಿತಪ್ಪಬಲ್ಲರು; ಇಟ್ಟುಕೊಂಡು ಹೊರಟ ಗುರಿಯನ್ನು ತಲ್ಪಲಿಕ್ಕಿಲ್ಲ ಅಥವಾ ತಮ್ಮ ಮೂಲನೆಲೆಗೆ (Abode of God) ಮರಳಲಿಕ್ಕಿಲ್ಲ. ಆದರೆ ಆಧ್ಯಾತ್ಮ ಜೀವಿಗಳು ಸಾಧನಾ ಪಥದಲ್ಲಿ, ಆದರ್ಶ ಪಥದಲ್ಲಿ ಸಾಗುವಾಗ ಸಂದಿಗ್ಧ ಪರಿಸ್ಥಿತಿ ಬಂದಲ್ಲಿ ಅವರು ಸ್ವಾಧ್ಯಾಯದಿಂದ ಶಾಸ್ತ್ರಾಧ್ಯಯನದಿಂದ ತಮ್ಮ ದಾರಿ ಕಂಡುಕೊಳ್ಳುವರು ಅಥವಾ ಗುರುಗಳು, ಸಂತರನ್ನು ಸಂದರ್ಶಿಸಿ ತಮ್ಮ ದಾರಿಯನ್ನು ಕಂಡುಕೊಳ್ಳಬಲ್ಲರು ಅಥವಾ ದೇವರೊಡನೆ, ಧರ್ಮಗುರುವಿನೊಡನೆ ಧ್ಯಾನದ ಮುಖಾಂತರ ನೇರ ಸಂಪರ್ಕ ಕಲ್ಪಿಸಿಕೊಂಡು, ಸರಿದಾರಿಗೆ ಬಂದು ತಮ್ಮ ಗುರಿಯನ್ನು ಮುಟ್ಟಬಲ್ಲರು.

— ಮಾತಾಜಿ, ವಾಷಿಂಗ್‌ಟನ್ ಕ್ಯಾಂಪ್

೪. ಹವಾನಿಯಂತ್ರಿತ ವಾತಾವರಣ

ಪವನ ಪಾಲಿಕೆಯಲ್ಲಿ ಕುಳಿತು ಬೆಂಗಳೂರಿನಿಂದ ಹಾರಿದ್ದೆವು. ಸುಮಾರು ಮೂರುನಾಲ್ಕು ದಿನದಿಂದ ಹಿಡಿದಿದ್ದ ಜಿಟ ಜಿಟ ಮಳೆ, ಮೋಡಕವಿದ ವಾತಾವರಣ

ವಿರದೆ ಮುಂಜಾವು ಅತ್ಯಂತ ಆಹ್ಲಾದಕರವಾಗಿತ್ತು. ಹವಾನಿಯಂತ್ರಿತ ವಿಮಾನದಲ್ಲಿ ಕುಳಿತು, ಮುಂಬೈಯಲ್ಲಿ ಇಳಿದು ಹೊರಬಂದಾಗ ಸೆಕೆಯ ತೀವ್ರ ಅನುಭವ. ಬೆಂಗಳೂರಲ್ಲಿ ಒಂದು ಹವೆ, ಮಂಗಳೂರಲ್ಲಿ ಮತ್ತೊಂದು ತೆರ, ಮುಂಬೈಯಲ್ಲಿ ಮಗದೊಂದು ಬಗೆ; ಆದರೆ ಹವಾನಿಯಂತ್ರಿತ ಕೊಠಡಿಯಲ್ಲಿದ್ದರೆ ಶೀತ-ಉಷ್ಣ ಎರಡೂ ನಮ್ಮನ್ನು ಧೃತಿಗೆಡಿಸವು.

ಆಗ ಒಂದು ವಿಚಾರ ಸ್ಫುರಿಸಿತು. ವಿವಿಧ ಪ್ರದೇಶಗಳಲ್ಲಿ ನಿಂತು ನೋಡಿದಾಗ ಭಿನ್ನ ಭಿನ್ನ ಹವಾಮಾನವಿದ್ದು, ಅಲ್ಲೇ ಇದ್ದರೂ ಹವಾನಿಯಂತ್ರಿತಕೊಠಡಿಯಲ್ಲಿದ್ದಾಗ ಒಂದೇ ಹಿತವಾದ ಹವೆ ಇರುವಂತೆ; ಮನುಷ್ಯನು ಭಾಷೆ, ಜಾತಿ, ವೃತ್ತಿ, ಎಂಬ ಏನೆಲ್ಲ ಭಿನ್ನತೆ ಕಲ್ಪಿಸಿಕೊಂಡು ಹೋರಾಡುವನು. ಆದರೆ ಅವನೇ ದೈವೀ ಜಗತ್ತೆಂಬ ಹವಾನಿಯಂತ್ರಿತ (ಅರ್ಥಾತ್ ಭಾವ ನಿಯಂತ್ರಿತ) ಕೊಠಡಿ ಪ್ರವೇಶಿಸಿದರೆ ನೆಲದ ಗುಣಗಳಾವೂ ಅವನ ಮೇಲೆ ಪ್ರಭಾವಬೀರದೆ ಶಿವಗುಣಗಳಷ್ಟೇ ಪ್ರಭಾವ ಬೀರುವವು. ಆಗ ಅವನು ವಿಶ್ವಕುಟುಂಬಿಯಾಗಿ ಎಲ್ಲರನ್ನೂ ಸಮಭಾವದಿಂದ ಕಾಣುವನು. ಅದನ್ನೇ ಸುಭಾಷಿತವೊಂದು ಹೇಳುವುದಿಲ್ಲವೆ? "ಇವನು ನನ್ನವನು, ಇವನು ಬೇರೆಯವನು ಎಂದು ಕ್ಷುಲ್ಲಕರು ಗಣಿಸುವರು. ಉದಾರ ಚರಿತರಿಗೆ ವಸುಧೆಯೇ ಕುಟುಂಬವು."

— ಸೋದರಿ ಕುಮುದಾ, ವಾಷಿಂಗ್‌ಟನ್ ಕ್ಯಾಂಪ್.

★

(೧೬ ನೇ ಪುಟದಿಂದ ಮುಂದುವರಿಸಿದೆ)

ನಾನು ಆಲೋಚಿಸುವುದುಂಟು. ಧನದಾಶೆ ಒಂದು ರೀತಿ ಅರ್ಬುದ ರೋಗ (ಕ್ಯಾನ್ಸರ್) ಇದ್ದಂತೆ. ಇದು ವರ್ಧಿಸುತ್ತಾ ಹೋಗುವುದೇ ವಿನಾ ಕಮ್ಮಿಯಾಗುವುದು ಕಷ್ಟ.

ಇನ್ನು ಇಲ್ಲಿಯವರ ಬದುಕನ್ನು ನೋಡಿದರಂತೂ ವಿಲಕ್ಷಣವೆನಿಸುವುದು. ಯಂತ್ರಗಳನ್ನು ಆರಂಭಿಸಿದರೆ ಅವು ಒಂದೇ ಸಮ ನಡೆಯುವಂತೆ ಯಾಂತ್ರಿಕ ಓಟದ ಜೀವನ. ಕ್ರೈಸ್ತರು, ಮುಸ್ಲಿಮರು, ಅದರಲ್ಲಿಯೂ ಕಡ್ಡಾಯವಾದ ಬಿಡುವು ಪಡೆದು ಭಾನುವಾರದ ಪ್ರಾರ್ಥನೆ ತಪ್ಪದೆ ಮಾಡುತ್ತಾರೆ. ಆದರೆ ಹಿಂದುಗಳು ಮತ್ತು ಲಿಂಗಾಯತರು ಆ ಸಂಪ್ರದಾಯವನ್ನು ಉಳಿಸಿಕೊಂಡಿಲ್ಲ. (ಅಲ್ಲೇ ಉಳಿಸಿಕೊಳ್ಳದ ಅವರು ಇಲ್ಲಿ ಏನು ಉಳಿಸಿಕೊಳ್ಳಬಲ್ಲರು) ಸಿಖ್ ಜನ ಮಾತ್ರ ತಮ್ಮ ಧರ್ಮ-ಸಂಪ್ರದಾಯಗಳನ್ನು ಗುರುದ್ವಾರಗಳನ್ನು ಕಟ್ಟಿಕೊಂಡು ಪಾಲಿಸುತ್ತಿದ್ದಾರೆ. ಆಗ ಇಂಥ ಓಟದ ಬದುಕನ್ನು ನೋಡಿದಾಗ ಅನ್ನಿಸದಿರದು; 'ಎಲ್ಲಾ ಮಾಡುವುದು ಕೇವಲ ಹೊಟ್ಟೆ-ಬಟ್ಟೆ, ನೋಟ-ಕೂಟಗಳ ತೃಪ್ತಿಗೇ ವಿನಾ ಅದಕ್ಕಿಂತ ಹೆಚ್ಚಿಗೆ ಏನೂ ಇಲ್ಲ. 'ಹಣ' ಎಂಬುದು ಕೇವಲ ಒಂದು ಸಾಧನವಾಗಬೇಕಾದ್ದು, ಅದೇ ಸರ್ವ ಸಿದ್ಧಿಯಾಗಿದೆಯಲ್ಲಾ ಇಲ್ಲಿ ಎಂದು ವಿಸ್ಮಯವೆನಿಸುವುದು. ಆ ದೃಷ್ಟಿಯಿಂದ ಭಾರತೀಯರು ಬಡವರಿದ್ದರೂ ಯಾವುದೋ ಒಂದು ವಿಲಕ್ಷಣ ನೆಮ್ಮದಿಯನ್ನು ಅನುಭವಿಸುತ್ತಾರೆ ಎನ್ನಿಸುತ್ತದೆ. ★

Digitalized by e-Sahithya Documentation Forum
Sponsored by Sarayu Foundation Trust

ಜಗತ್ಪ್ರಸಿದ್ಧ ನಯಾಗರ ಜಲಪಾತ : ಒಂದು ಸಂದರ್ಶನ

— ಮಾತಾಜಿ ಕೆನಡಾ ಕ್ಯಾಂಪ್

ಆಮಂತ್ರಣ ಸ್ವೀಕರಿಸಿ, ಅನಿವಾರ್ಯವಾಗಿ ಬಂದುದು ನಿಜವಾದರೂ, ದೇಶ ಸಂದರ್ಶನಕ್ಕೆ ಈ ಛಳಿಗಾಲ ಅತ್ಯಂತ ಕೆಟ್ಟದು. ಪಾಶ್ಚಿಮಾತ್ಯ ರಾಷ್ಟ್ರಗಳ ಸಂದರ್ಶನ ಏನಿದ್ದರೂ ಬೇಸಿಗೆಗೇ ಸರಿ. ಅದರಲ್ಲೂ ಕೆನಡಾ ಇನ್ನೂ ತಂಪುದೇಶ. ಕ್ರಿಸ್‌ಮಸ್‌ದಿನ ತೀವ್ರವಾದ ಹಿಮಪಾತ ಪ್ರಾರಂಭವಾಯಿತು ಎಲ್ಲೆಡೆ. ಜನವರಿ ಎರಡನೆ ತಾರೀಖಿಗೆ ಟೊರೊಂಟೋಕ್ಕೆ ನಾವು ಬಂದೆವು. ಮೂರನೆಯ ತಾರೀಖಂತೂ ಹೇಳಲಾರದ ಕೆಟ್ಟದಿನ. ವಿಪರೀತ ಹಿಮಪಾತ; ಹೊರಗೆ ಅಡ್ಡಾಡುವುದು ಅತ್ಯಂತ ಕಷ್ಟಕರ. ಮೈಕೊರೆಯುವ ಛಳಿಯಲ್ಲಿ ತೀವ್ರವಾಗಿ ಗಾಳಿ ಬೀಸಿದರಂತೂ ಮುಗಿಯಿತು 40 ಡಿಗ್ರಿ ಸೆಂಟಿಗ್ರೇಡಿಗೆ ಟೆಂಪರೇಚರ್ ಹೋಯಿತು. ಅಂದು ಪೂಜೆಗೆ ಬರಬೇಕು ಎಂದು ಹೊರಟ ಅನೇಕ ಜನ ಹೊರಗೆ ಬರಲು ಅಂಜಿ ಫೋನ್ ಮಾಡಿದರು. ಅಂತಹುದರಲ್ಲಿ ನಯಾಗರ ನೋಡಬೇಕೆಂಬ ಆಕಾಂಕ್ಷೆ ನಮ್ಮದು. ಲೋಕಪ್ರಸಿದ್ಧ ನಯಾಗರಾವನ್ನು ನೋಡದೆ ಹೋದರೆಂತು ? ಕೆನಡಾ ಎಂದರೆ ನಯಾಗರಾದ ನೆನಪು ಅತ್ಯಂತ ಸಹಜ. ಮರುದಿನ ಕರೆದೊಯ್ಯುವುದಾಗಿ ವಿಜಯಶಂಕರರು ಹೇಳಿದರು. ನಾವು ಅತ್ಯಂತ ಬೇಗನೆ ಎದ್ದು ಸ್ನಾನ ಪೂಜೆ ಮುಗಿಸಿ ತಯಾರಾದೆವು. ಬೆಳಿಗ್ಗೆ 6 ಗಂಟೆಗೆ ಟೆಲಿವಿಷನ್ ನ್ಯೂಸ್ ಕೇಳಿದರೆ ಆ ದಿನ ಇನ್ನೂ ತಂಪಾಗುವುದೆಂದು ನುಡಿದರು. ವಿಜಯಶಂಕರ್ ಹೇಳಿದರು, "ಈ ದಿನ ಹೋಗುವುದು ಬೇಡ. ಎಲ್ಲರಿಗೂ ಜೀವಭಯ. ಕಾರುಗಳು ತುಂಬಾ ಜಾರುತ್ತವೆ. ಹವಾಮಾನ — 40 ಡಿಗ್ರಿ ಸೆಂಟಿಗ್ರೇಡಿಗೆ ಏರಿಬಿಟ್ಟರೆ ಬಹುಪಾಲು ಕಾರುಗಳು ದಾರಿಯಲ್ಲಿ ನಿಂತುಬಿಡುತ್ತವೆ. ದಾರಿಯಲ್ಲಿ ಹೋಗುವ ವಾಹನಗಳವರು ಯಾರೂ ನಿಂತು ಸಹಾಯ ಸಹ ಮಾಡರು. ಹತ್ತು ನಿಮಿಷದಲ್ಲಿ ಕಾರಿನಲ್ಲಿದ್ದವರು ಅಥವಾ ಹೊರಗೆ ನಿಂತವರು ಹೆಪ್ಪುಗಟ್ಟುವರು. ಇಷ್ಟು ತಂಪು ಹವೆ ಇದ್ದಾಗ ಪ್ರಯಾಣ ಮಾಡುವುದು ತುಂಬಾ ರಿಸ್ಕ್." ಆ ಹೊತ್ತಿನ ಹೆಪ್ಪುಗಟ್ಟಿಸುವ ಛಳಿಯಲ್ಲಿ ಪ್ರಯಣಿಸುವುವೇ ಬೇಡವೆಂದು ನಿರ್ಧರಿಸಿ ಸುಮ್ಮನಾದೆವು. ಆದರೆ ನಯಾಗರಾದ ಮೋಹ ನನ್ನನ್ನು ಬಿಡಲಿಲ್ಲ. ಹವಾಮಾನವನ್ನು ನಿರೀಕ್ಷಿಸುತ್ತಾ ಕುಳಿತರೆ ಇನ್ನು ಏಪ್ರಿಲ್‌ವರೆಗೂ ಕಾಯಬೇಕಾಗುವುದು ಎಂದು ನಾನು ಆಲೋಚಿಸುವಾಗಲೇ ಒಂದು ಉಪಾಯ ಹೊಳೆಯಿತು.

ಸಾರ್ವಜನಿಕ ಬಸ್ಸಿನಲ್ಲಿ ಹೋಗಿಬಂದರೆ ಹೇಗೆ ? ಮರುದಿನದ ಆತಿಥ್ಯ ಪೂರ್ಣಿಮಾ ಡಾ|| ಜಯಾ ಇಸಲೂರ್‌ರವರ ಮನೆಯಲ್ಲಿ. ಈ ಸಲಹೆ ಅವರಿಗೂ ಮಾನ್ಯವಾಯಿತು. ಏಕೆಂದರೆ ಬಸ್‌ಗಳು ತುಂಬಾ ಭಾರವಾಗಿರುವುದರಿಂದ ಜಾರುವ ಸಂಭವ ಕಡಿಮೆ. ಮತ್ತು ಬಸ್‌ಗಳು ಕೆಟ್ಟುನಿಂತರೆ ಬಲು ತೀವ್ರವಾಗಿ ಇನ್ನೊಂದು ಬಸ್ಸನ್ನು ಸಂಬಂಧಿಸಿದವರು ಕಳಿಸಿಬಿಡುತ್ತಾರೆ. ವೈಯಕ್ತಿಕ ವಾಹನಗಳು ಕೆಟ್ಟು ನಿಂತರೆ ಪೋಲೀಸರ ಸಹಾಯ ಬರುವ ತನಕ ಏನೂ ಮಾಡಲು ಸಾಧ್ಯವಿಲ್ಲ. ಕೆಟ್ಟ ಜಾಗದಿಂದ ರಿಪೇರಿ ಮಾಡುವ ತಾಣಕ್ಕೆ ಸಾಗಿಸಲು ತುಂಬಾ ಹಣವನ್ನು ಗ್ಯಾರೇಜಿನವರು ವಸೂಲು ಮಾಡುತ್ತಾರೆ.

ದಾರಿಯಲ್ಲಿ ಕಾರು ಕೆಟ್ಟು ಅಥವಾ ಚಳಿಯಿಂದ ಸ್ಟಾರ್ಟ್ ಆಗದೆ ನಿಂತರೆ, ಹೆದ್ದಾರಿಯಲ್ಲಿ ಸಾಗುವ ವಾಹನಗಳವರು ಏಕೆ ನಿಲ್ಲಿಸಿ ಸಹಾಯಮಾಡರು ? ಎಂದು ಆಲೋಚಿಸುತ್ತಿದ್ದೆ. ಒಂದು ದಿನ ಗೊತ್ತಾಯಿತು, ಕೆಲವರು ಬೇಕಂತಲೇ ಕಾರು ಕೆಟ್ಟಂತೆ ಮಾಡಿ, ಬೇರೆಯವರ ವಾಹನಗಳಲ್ಲಿ ಸಾಗಿ, ಕಾರಿನಲ್ಲಿ ಒಬ್ಬೊಬ್ಬರೇ ಹೋಗುತ್ತಿದ್ದರೆ ಕೊಲೆ ಮಾಡಿರುವ ಅಥವಾ ಬಂದೂಕು ತೋರಿಸಿ ಬೆದರಿಸಿ ಹಣ, ಮತ್ತು ಬೆಲೆಬಾಳುವ ವಸ್ತುಗಳನ್ನು ಸುಲಿಗೆಮಾಡಿರುವ ಪ್ರಸಂಗಗಳು ಹೇರಳವಾಗಿವೆಯಂತೆ. ಇನ್ನು ಕೆಲವೊಮ್ಮೆ ಕಾರಿನಲ್ಲಿ ಹೋಗುವ ಕಳ್ಳಕಾಕರೇ ಗಾಡಿನಿಲ್ಲಿಸಿ, ಸಹಾಯ ನೀಡಿ ನಿಸ್ಸಹಾಯಕರಾಗಿ ಹತ್ತಿದವರನ್ನು ದೋಚುವ ಸಾಧ್ಯತೆಯುಂಟಂತೆ. ಕಾರು ತಂಪಾಗಿ ನಿಂತಾಗ, ಒಳಗಿನ ಹೀಟರ್ ಸಹ ನಿಂತುಬಿಡುವುದಷ್ಟೆ. ಮೈ ಹೆಪ್ಪುಗಟ್ಟಿಸುವ ಚಳಿಯಲ್ಲಿ ಕುಳ್ಳಿರಲಾರದೆ ಹೊರಗೆ ಬಂದು ನಿಂತರೂ ಚಳಿಯ ಕಷ್ಟ ಮತ್ತು ಜೀವಭಯ. ಒಂದು ಸಮಾಧಾನಕರ ಸಂಗತಿಯೆಂದರೆ ಹೆದ್ದಾರಿಗಳಲ್ಲಿ ಸಾಮಾನ್ಯವಾಗಿ ಪೋಲೀಸರು ಸತತವಾಗಿ ಗಸ್ತು ತಿರುಗುತ್ತಾರೆ. ಸಹಾಯ ಬೇಕಾಗುವ ಪ್ರಯಾಣಿಕರಿಗೆ ಇದು ಉಪಯುಕ್ತ ಮಾತ್ರವಲ್ಲ ವೇಗಮಿತಿ ದಾಟಿ ವಾಹನ ನಡೆಸುವವರಿಗೆ ದಂಡ ಹಾಕುತ್ತಿರುತ್ತಾರೆ. ಅಲ್ಲಲ್ಲಿಗೇ ವೇಗಮಿತಿ ಸೂಚಿಸುವ ಫಲಕಗಳು ಇರುತ್ತವಲ್ಲದೆ, ವಾಹನ ವೇಗವನ್ನು ತಿಳಿಸುವ ರಡಾರ್ ವ್ಯವಸ್ಥೆ ಇರುತ್ತದೆ. ಹೀಗಾಗಿ ಮೈಮರೆತು ವಾಹನ ನಡೆಸಲು ಇಲ್ಲಿ ಆಸ್ಪದವೇ ಇಲ್ಲ.

ಹಿಂದಿನ ದಿನವೇ ಗ್ರೇಕೋಚ್ ಲೈನ್‌ನ ಟಿಕೆಟ್ಟುಗಳನ್ನು ಡಾ. ಜಯಾರವರು ರಿಸರ್ವ್ ಮಾಡಿಸಿಕೊಂಡು ಬಂದರು ಮತ್ತು ಮರುದಿನ ಸುಪ್ರಭಾತದಲ್ಲಿ ಆಸ್ಪತ್ರೆಗೆ ಹೋಗುವ ಮುನ್ನ ನಿಲ್ದಾಣಕ್ಕೆ ಕರೆದೊಯ್ದರು. ಬಸ್‌ಗಳು ಸರಿಯಾದ ವೇಳೆಗೆ ಹೊರಟುಬಿಡುತ್ತವೆ ಮತ್ತು ಒಳಗಿನ ವ್ಯವಸ್ಥೆಯೂ ಬಹಳ ಚೆನ್ನಾಗಿರುತ್ತದೆ. ಗಗನವಾಹನದ ಆಸನಗಳಂತೆ ಆಸನಗಳು ತುಂಬಾ ಅನುಕೂಲಕರವಾಗಿರುತ್ತವೆ.

Digitalized by e-Sahithya Documentation Forum
Sponsored by Sarayu Foundation Trust

ನಗರದ ವಿವಿಧ ಭಾಗಗಳಲ್ಲಿ ಸಂಚರಿಸುವ ವಾಹನಬಿಟ್ಟರೆ ದೂರಹೋಗುವ ಬಸ್ಸುಗಳಲ್ಲಿ ಒಬ್ಬರನ್ನೂ ಹೆಚ್ಚಾಗಿ ತೆಗೆದುಕೊಳ್ಳುವುದಿಲ್ಲ. ನಾವು ಹತ್ತಿದ್ದ ಬಸ್ಸಿನಲ್ಲಿ ಜನರು ಪೂರ್ತಿತುಂಬಿ ಇನ್ನೆರಡು ಆಸನಗಳಿದ್ದವು. ನಾಲ್ಕು ಜನರ ಸಂಸಾರವೊಂದು ಬಂದಿತು. ಚಾಲಕ ತೆಗೆದುಕೊಳ್ಳಲಿಲ್ಲ. ಅವರೂ ಒತ್ತಾಯಿಸದೆ ಇಳಿದರು. ಕಾರಣವೆಂದರೆ ಒಂದೊಂದು ಗಂಟೆಗೊಂದು ಬಸ್ ಓಡುತ್ತವೆ. ಇಲ್ಲಿ ಜನ ಕೇಳುತ್ತಾರೆ, "ನಿಮ್ಮಲ್ಲಿ ವಿಪರೀತ ಜನ ಸಂಚರಿಸುತ್ತಾರೆ ಮತ್ತು ವಿಮಾನ, ರೈಲ್ವೆ, ಬಸ್ ಎಲ್ಲಕ್ಕೂ ಸಾಕಷ್ಟು ಜನರಿಂದ ಬೇಡಿಕೆ ಇದೆ. ಆದರೆ ಏಕೆ ಹೆಚ್ಚು ವಾಹನ ಓಡಿಸುವುದಿಲ್ಲ." ಇಂಥ ಅನೇಕ ಪ್ರಶ್ನೆಗಳಿಗೆ ಉತ್ತರವನ್ನು ಕೊಡಲು ನಮಗೆ ಸಾಧ್ಯವೇ ಆಗದು.

ಜನವರಿ 6ರಂದು ಟೊರೊಂಟೋದಿಂದ ಹೊರಟ ಬಸ್ ಸೇಂಟ್ ಕೆಥರೀನ್, ಬಫಲೋ ಎಂಬ ಎರಡು ನಿಲ್ದಾಣದಲ್ಲಿ ನಿಂತು ನಯಾಗರಾವನ್ನು ತಲುಪಿತು. ರಸ್ತೆಗಳು ಚೆನ್ನಾಗಿದ್ದವು, ಜಾರುತ್ತಿರಲಿಲ್ಲ. ಆದರೆ ಸೂರ್ಯನು ದಟ್ಟವಾದ ಮೋಡಗಳ ಹಿಂದೆ ಮರೆಯಾಗಿದ್ದ. ಆಗಾಗ ಹೂವಿನಂತೆ ಹಿಮದ ಧಾರೆ ಬೀಳುತ್ತಿತ್ತು. ಹಿಮ ಬೀಳುತ್ತಿದ್ದರೆ ಅಷ್ಟೊಂದು ಚಳಿ ಇರದು. ಚಳಿಗಾಲದಲ್ಲಿ ಸೂರ್ಯನಿದ್ದ ದಿನವೇ ಚಳಿ ಜಾಸ್ತಿ ಕಾಣುತ್ತದೆ. ಬಸ್ ಇಳಿಯುತ್ತಲೇ ಬೆಚ್ಚಗಿರುವ ನಿರೀಕ್ಷಣಾಲಯಕ್ಕೆ ಹೋಗಿ, ಹಾಗೇ ಟಿಕೆಟ್ಟುಗಳನ್ನು ಕೊಂಡು ಹನ್ನೆರಡುವರೆಗೆ ಇನ್ನೂ ಹತ್ತು ನಿಮಿಷ ಇದ್ದುದರಿಂದ ಕಾಯುತ್ತ ಕುಳಿತೆವು. ಕರಾರುವಾಕ್ಕಾಗಿ ಹನ್ನೆರಡುವರೆಗೆ ಸಂದರ್ಶನಕ್ಕೆ ಕರೆದೊಯ್ಯುವ ಬಸ್ಸು ನಮ್ಮನ್ನು ಕರೆದೊಯ್ದಿತು. ಬಸ್‌ಗಳು ಹೊರಡುವ ಸಮಯ ಮಾತ್ರ ಅತ್ಯಂತ ನಿಖರ. ನಯಾಗರಾ ನಗರದ ವಿವಿಧ ಅಂಗಗಳನ್ನು ತೋರಿಸುತ್ತಾ ಬಸ್ ಹೊರಟಿತು.

"ನಯಾಗರಾ" ಎಂದರೆ ನೀರಿನ ಗುಡುಗು. ಇದು ಈ ನೆಲದ ಮಕ್ಕಳಾದ ರೆಡ್ ಇಂಡಿಯನ್ಸ್‌ರ ಭಾಷೆಯ ಅರ್ಥ. ಅದರ ಅದ್ಭುತ ಮತ್ತು ಬೃಹತ್‌ರೂಪ ಭಯಂಕರ ಸೌಂದರ್ಯದಿಂದ ಕೂಡಿರುವುದಲ್ಲದೆ ಸಂದರ್ಶಕರ ಮನದಲ್ಲಿ ಆಶ್ಚರ್ಯ, ಭಯ, ಮೆಚ್ಚುಗೆ ಮೂರನ್ನೂ ಹುಟ್ಟಿಸುತ್ತದೆ. ವಿಸ್ತಾರವಾದ ಪ್ರದೇಶದಲ್ಲಿ ಹರಿದು ಬಂದು ಆಳವಾದ ಕೊಳ್ಳಕ್ಕೆ ಧುಮ್ಮಿಕ್ಕುವ ಜಲರಾಶಿ ಗುಡುಗಿನ ಶಬ್ದವನ್ನು ಹೋಲುತ್ತದೆ. ಆಳದಲ್ಲಿ ನಮ್ಮ ಜೋಗ್ ಜಲಪಾತ ದೊಡ್ಡದಿದ್ದರೂ ಅಗಲದಲ್ಲಿ ನಯಾಗರಾಕ್ಕೆ ಸರಿಸಾಟಿಯಾಗುವ ಜಲಪಾತ ಜಗತ್ತಿನಲ್ಲಿ ಮತ್ತೊಂದಿಲ್ಲ. ನಿಸರ್ಗವು ಸ್ವಾಭಾವಿಕವಾಗಿ ಇತ್ತಿರುವ ಐಸಿರಿಯೊಡನೆ ವೈಜ್ಞಾನಿಕ ಮಾನವನ ಕೈವಾಡವೂ ಸೇರಿ ಅಮೆರಿಕಾ-ಕೆನಡಾಗಳ ಪ್ರೇಕ್ಷಣೀಯ ಸ್ಥಳಗಳು ಪ್ರವಾಸಿಗರಿಗೆ ಸ್ವರ್ಗಗಳಂತೆ. ಜಲಪಾತವನ್ನು ವಿವಿಧ ದಿಕ್ಕುಗಳಲ್ಲಿ, ವಿವಿಧ ಎತ್ತರಗಳಲ್ಲಿ ನಿಂತು ಸವಿಯುವಂತೆ ಇಲ್ಲಿ

ಮಾಡಿರುವುದರಿಂದ ಜಲಪಾತವು ತುಂಬಾ ರಮಣೀಯವಾಗಿ ತೋರುವುದು. ಹೋಟೆಲ್, ಉಪಹಾರ ಗೃಹಗಳ ಅನುಕೂಲತೆ ಪ್ರವಾಸಿಗರಿಗೆ ಇನ್ನಷ್ಟು ಆರಾಮ ಕೊಡುತ್ತವೆ. ನಮ್ಮಲ್ಲಿ ಅನೇಕ ರಮಣೀಯ ತಾಣಗಳನ್ನು ಸಂದರ್ಶಿಸಿ ಮನಸ್ಸು ಮುದಗೊಂಡಿದ್ದರೂ ನಂತರ ಪಡುವ ಯಾತನೆಗಳಿಂದ–ಅಂದರೆ ಸರಿಯಾದ ಪ್ರವಾಸಿ ಮಂದಿರ ಇಲ್ಲದ್ದರಿಂದ, ಇದ್ದರೂ ಸಂದರ್ಶಕರ ಸಂಖ್ಯೆಗಿಂತ ಕಡಿಮೆ ಸಂಖ್ಯೆಯಲ್ಲಿರುವುದರಿಂದ, ಅಲ್ಲಿ ಹೋಗಿ ತಿಗಣೆಗಳಿಂದ ಕಡಿಸಿಕೊಂಡು, ಸೊಳ್ಳೆಗಳ ಸಂಗೀತವನ್ನು ರಕ್ತಕೊಟ್ಟು ಕೇಳಿ, ನಿದ್ರೆ ಕೆಡಿಸಿಕೊಂಡು ಬರುವುದರಲ್ಲಿ ಪ್ರವಾಸದ ಸ್ವಾದ ಎಲ್ಲಿಯೋ ಪಲಾಯನ ಮಾಡಿರುತ್ತದೆ.

ನಯಾಗರಾ ಜಲಪಾತದ ವಿವರಗಳು ಐತಿಹಾಸಿಕವಾಗಿ 1678ರಿಂದ ದೊರೆಯುತ್ತವೆ. ಓರ್ವ ಪಾದ್ರಿ ಫಾದರ್ ಲೂಯಿಸ್ ಹೆನ್ನಿಪೆನ್‌ರವರು 1678ರ ಡಿಸೆಂಬರ್‌ನಲ್ಲಿ ಸಂದರ್ಶಿಸಿದ ಉಲ್ಲೇಖ ದೊರೆಯುತ್ತದೆ. ಮುಂದೆ ಆಗಸ್ಟಸ್ ಪೋರ್ಟರ್ ಎಂಬುವವರು ಇದರ ಅದ್ಭುತ ಸುಪ್ತಶಕ್ತಿ ವ್ಯಯವಾಗುತ್ತಿರುವುದನ್ನು ಗಮನಿಸಿದರಲ್ಲದೆ, ಅದರ ಸದುಪಯೋಗ ಮಾಡಿಕೊಂಡು ಶಕ್ತಿಯ ಉತ್ಪಾದನೆಗೆ ಸಂಕಲ್ಪಿಸಿದರು. ನಯಾಗರಾ ಬಹುಮುಖ್ಯವಾಗಿ ರಣಾಂಗಣವಾಗಿ ಬಹಳಷ್ಟು ಯುದ್ಧಗಳನ್ನು ಕಂಡಿತು. ಅದರ ಪಳೆಯುಳಿಕೆಗಳಾಗಿ ಹಳೆಯ ಕೋಟೆಗಳು ಇನ್ನೂ ಇವೆ. 1869ರಲ್ಲಿ ಫೆಡ್ರಿಕ್ ಲಾ ಆಲ್ಮ್‌ಸ್ಟೆಡ್‌ರು ಈ ಸಂದರ್ಶನ ತಾಣ ಸಾರ್ವಜನಿಕ ಸ್ವತ್ತಾಗಬೇಕೆಂದು; ಅವು ಜಾಗತಿಕ ಆಸ್ತಿಗಳು, ನಿಸರ್ಗದ ಕೊಡುಗೆಗಳಾದ್ದರಿಂದ ಸಾರ್ವಜನಿಕ ನಿಯಂತ್ರಣದಲ್ಲಿರಬೇಕೆಂದು ಸೂಚಿಸಿದರು.

1879ರಲ್ಲಿ ಕೆನಡಾ ಸರ್ಕಾರದ ಸಹಕಾರದಿಂದ ಸಾರ್ವಜನಿಕ ಮಾಲಿಕತ್ವಕ್ಕೆ ಈ ಭಾಗ ಬಂದಿತು. ನಯಾಗರಾ ನದಿಯು ಈರಿ ಸರೋವರದಿಂದ (ಇದು ಅಮೆರಿಕಾ ಸಂಯುಕ್ತ ಸಂಸ್ಥಾನದಲ್ಲಿದೆ) ಹರಿದು, ಆಂಟಾರಿಯೋ ಸರೋವರಕ್ಕೆ ಬೆರೆಯುತ್ತದೆ. (ಅದು ಕೆನಡಾದಲ್ಲಿದೆ.) ನಯಾಗರಾ ನದಿಯೇ ಯು. ಎಸ್. ಎ. ಮತ್ತು ಕೆನಡಾಗಳ ಮಧ್ಯೆ ಗಡಿಯಾಗಿ ಹರಿದಿದೆ. ನಯಾಗರಾವು ಜಲಪಾತವಾಗಿ ಧುಮ್ಮಿಕ್ಕುವ ಮುನ್ನ ಸೀಳುತ್ತದೆ. ಸೀಳಿನ ಮಧ್ಯೆ ಗೋಟ್ ಐಲ್ಯಾಂಡ್ (ಮೇಕೆ ದ್ವೀಪ) ಇದ್ದು, ಅದನ್ನು ಬಳಸಿ ಹರಿದ ನದಿಯ ಎರಡು ಟಿಸಿಲು ಎರಡು ಜಲಪಾತಗಳಾಗಿವೆ. ಒಂದು ಯು. ಎಸ್. ಎ. ಗೆ ಉಳಿದಿದೆ; ಇನ್ನೊಂದು ಕೆನಡಾಕ್ಕೆ ಸೇರಿದೆ. ಅಮೆರಿಕನ್ ಜಲಪಾತವು 165 ಅಡಿ ಎತ್ತರದಿಂದ ಧುಮುಕುತ್ತದೆ. ಕೆನಡಾದ ಜಲಪಾತವು ಕುದುರೆ ಪಾದ (Horse shoe) ಜಲಪಾತವೆಂಬ ಹೆಸರು

Digitalized by e-Sahithya Documentation Forum
Sponsored by Sarayu Foundation Trust

ತಾಳಿ, ಆ ಆಕಾರದಲ್ಲೇ ಧುಮುಕುತ್ತದೆ. ಇದು ಅಮೆರಿಕಾದ ದಬೆದಬೆಯಷ್ಟು ಎತ್ತರವಿಲ್ಲ. ಆದರೆ ಅಗಲದಲ್ಲಿ 2500 ಅಡಿ ಇದ್ದು ಅತ್ಯದ್ಭುತವಾದ ಆಕಾರ ತಾಳಿದೆ.

ಭಯಂಕರ ಶಬ್ದ, ವೈಯ್ಯಾರಗಳಿಂದ ಧುಮುಕುವ ಎರಡೂ ಟಿಸಿಲುಗಳೂ ಧುಮುಕಿದಾನಂತರ ಮತ್ತೆ ಕೊಳ್ಳದಲ್ಲಿ ಸ್ನೇಹದಿಂದ ಆಲಂಗಿಸಿಕೊಂಡು, ಕೈ ಕೈ ಹಿಡಿದು, ಮೈ ಬೆಸೆದುಕೊಂಡು ಸಾಗುತ್ತವೆ. ಈ ಪ್ರಸಂಗ ನನಗೆ ಕೆನಡಾ-ಅಮೆರಿಕಾಗಳ ಇತಿಹಾಸ ಹೇಳುತ್ತದೆ. ವಿಸ್ತಾರವಾದ ಅಮೆರಿಕಾ ದೇಶದಲ್ಲಿ ನೆಲದ ಮಕ್ಕಳಾದ ರೆಡ್ ಇಂಡಿಯನ್ಸ್ ಇದ್ದರು. ಯೂರೋಪ್ ದೇಶದಿಂದ ಬಂದ ಆಂಗ್ಲರು, ಫ್ರೆಂಚರು ಬಂದು ಈ ನೆಲದಲ್ಲಿ ನೆಲೆಸಿ, ನೆಲದ ಮಕ್ಕಳನ್ನು ಮೂಲೆಗುಂಪು ಮಾಡಿದರು ಮತ್ತು ಸಾಕಷ್ಟು ಜನರನ್ನು ಮತಾಂತರ ಮಾಡಿದರು. ಆ ನಂತರ ತಮ್ಮ ತಮ್ಮಲ್ಲೇ ಹೊಡೆದಾಡಿಕೊಂಡು ಎರಡು ಭೂಪ್ರದೇಶ ಮಾಡಿಕೊಂಡರು. ಕದನಗಳ ನಂತರ ಒಪ್ಪಂದ ಮಾಡಿಕೊಂಡು, ಈಗ ಎರಡು ಸ್ವತಂತ್ರ ದೇಶಗಳಾಗಿ, ಪರಸ್ಪರ ಸ್ನೇಹ, ಸೌಹಾರ್ದತೆಗಳಿಂದ ಬಾಳುತ್ತಿದ್ದಾರೆ. ಇಬ್ಬರೂ ಒಂದೇ ಮೂಲದವರೆಂದು, ಮತ್ತು ಒಂದೇ ಧರ್ಮ - ಸಂಸ್ಕೃತಿಗಳವರೆಂದು ತಿಳಿದು, ತುಂಬಾ ಹೊಂದಾಣಿಕೆಯಿಂದ ಕೂಡಿದ್ದಾರೆ. ಆದ್ದರಿಂದ ಈರಿ ಸರೋವರದಿಂದ ಒಂದೆಯಾಗಿ ಹರಿದುಬಂದು, ಮೇಕೆ ದ್ವೀಪದ ಬಳಿ ಒಡೆದು, ಎರಡು ಜಲಪಾತಗಳಾಗಿ ಧುಮುಕಿ, ಮತ್ತೆ ಕೊಳ್ಳದಲ್ಲಿ ಒಂದಾಗಿ ಹರಿವ ನಯಾಗರಾಳ ಚಟುವಟಿಕೆಗೆ ಕೆನಡಾ-ಅಮೆರಿಕಾದವರ ಯುದ್ಧ ಪ್ರೇಮಗಳನ್ನು ಹೋಲಿಸಬಹುದಷ್ಟೇ.

ಆಳವಾದ ಕಿರಿದಾದ ಕೊಳ್ಳಕ್ಕೆ ಆವೇಶದಿಂದ ಧುಮುಕುವ ಜಲಪಾತದ ಟಿಸಿಲುಗಳು ರಭಸದಿಂದ ತಗ್ಗಿನಲ್ಲಿ ಹರಿಯುತ್ತವೆ. ಒಂದು ಮೈಲಿಯ ನಂತರ ಬಲಕ್ಕೆ ತಿರುಗುತ್ತದೆ ನದಿಯ ಪ್ರವಾಹ. ಇಂಥ ತಿರುವಿನಲ್ಲಿ ದಡವನ್ನು ಕೊರೆದು ನದಿಯು ಒಂದು ಕೊಲ್ಲಿಯನ್ನು ನಿರ್ಮಾಣಮಾಡಿದೆ. ಇಲ್ಲಿ ಭಯಂಕರ ಸುಳಿಗಳ ನಿರ್ಮಾಣವಾಗಿದೆ. ನೀರು ಇಲ್ಲಿ ಆವೇಶದಿಂದ ಸುಳಿಯ ರೂಪದಲ್ಲಿ ತಿರುಗುತ್ತಿರುತ್ತದೆ. ಅದರ ಮೇಲೆ ಸ್ಪಾನಿಷ್ ಏರೋಕಾರ್‌ಗಳು ಸ್ಟೀಲ್‌ಕಂಬಿಗಳ ಆಶ್ರಯದಲ್ಲಿ ಸಂಚರಿಸುತ್ತ ಸಂದರ್ಶಕರನ್ನು ಕರೆದೊಯ್ಯುತ್ತವೆ. ನಾವು ಹೋದಾಗ ವಿಪರೀತ ಚಳಿಗಾಲವಿದ್ದುದರಿಂದ ಈ ಸೌಲಭ್ಯವಿರಲಿಲ್ಲ. ಆದರೆ ನೀರು ರಭಸದಿಂದ ಅಲ್ಲಿ ಮಥಿಸುವ ಕಾರಣ, ಹೆಪ್ಪುಗಟ್ಟದೆ ಅಲೆಗಳು ಚೆನ್ನಾಗಿ ಕಾಣುತ್ತಿದ್ದವು. ಸುಳಿಗಳು 1754 ಅಡಿಯ ಸುಳಿಗಳಾಗಿವೆ. 126 ಅಡಿ ಆಳವಿದೆ.

ನಾವು ಸಂದರ್ಶನಕ್ಕೆ ಹೊರಟ ಬಸ್ ಕೆಲವು ಮುಖ್ಯ ತಾಣಗಳನ್ನು ತೋರಿಸುತ್ತ, ಜಲಪಾತದ ಬಳಿ ನಿಂತಿತು. ಇಳಿದು ಜಲಪಾತದ ಎದುರಿನ ಕಟಕಟೆಗೆ ಒರಗಿ ನಿಂತು

ನೋಡಿದೆವು. ಸೂರ್ಯನ ಬೆಳಕು ಕೊಂಚವೂ ಇರಲಿಲ್ಲ. ಮೋಡಗಳು ದಟ್ಟವಾಗಿದ್ದವು. ಹಿಮವು ಮಲ್ಲಿಗೆ ಹೂವು ಉದುರಿಸಿದಂತೆ ತಪ ತಪ ಉದುರುತ್ತಿತ್ತು. ತಲೆಯ ಮೇಲೆ, ಕೋಟಿನ ಮೇಲೆಲ್ಲ ಕುಳಿತುಕೊಳ್ಳುತ್ತಿತ್ತು. ತಂಪಾದಗಾಳಿ ಯಥೇಚ್ಛವಾಗಿ ಬೀಸುತ್ತಿತ್ತು. ಅಮೇರಿಕನ್ ಫಾಲ್ಸ್ ಹಿಮವಾಗಿದ್ದು ಬಿಳಿಯ ತೆರೆಯಾಗಿ ನಿಂತಿತ್ತು. ಕೆನಡಾದ ಫಾಲ್ಸ್ (ಕುದುರೆಪಾದ ಜಲಪಾತ) ಆವೇಶದಿಂದ ಧುಮುಕುತ್ತಿತ್ತು. ಧುಮುಕಿ ತುಸು ಹರಿದ ನಂತರ ಅದು ಗಡ್ಡೆಗಟ್ಟಿ ನಿಲ್ಲುತ್ತಿತ್ತು. ಆದರೆ ನದಿಯ ಮಧ್ಯಭಾಗ ಗಡ್ಡೆಗಟ್ಟಿ ನಿಲ್ಲದೆ, ನಿರಂತರವಾಗಿ ಹರಿಯುತ್ತಲೇ ಇತ್ತು. ಹಾಲಿನ ಧಾರೆಯಂತೆ ಜಲಪಾತ ತೋರುವುದು ಒಂದಾದರೆ, ಯಾರೋ ಮೊಸರನ್ನು ಮಥಿಸಿದಂತೆ ಮಜ್ಜಿಗೆಯ ಕಣಗಳು ಎತ್ತಿ ಎತ್ತಿ ಚಿಮ್ಮಿದಂತೆ ನೀರಿನ ತುಂತುರು ತೂರಲ್ಪಡುವುವು. ಹಾಲಿನ ದಟ್ಟ ತೆರೆಯಂತೆ ತೋರುವ ನಯಾಗರಾ ಕನಸಿನ ಕನ್ಯೆಯಂತೆ ತೋರುವಳು. ಎಳೆ ಬಿಸಿಲಿನ ಹೊನ್ನಿನ ಕಿರಣಗಳಲ್ಲಿ ನವಯೌವ್ವನದಿಂದ ಮಿರುಗುವ ನಯಾಗರಾಳನ್ನು ನೋಡಲು ಸೂಕ್ತ ಸಮಯ ಬೇಸಿಗೆಕಾಲ. ಭಾರತದಲ್ಲಿ ಲಗ್ನಕಾಲದಲ್ಲಿ ಕಟ್ಟುವ ಹಸಿರು ಹಂದರದಂತೆ ನಿಸರ್ಗವೆಲ್ಲ ಹಂದರವ ಕಟ್ಟಿ, ಎಲ್ಲಿ ನೋಡಿದಡಲ್ಲಿ ಹೂವಿನ ತೋರಣಗಳನ್ನು ತೂಗುಹಾಕಿ, ತಲೆ ಎತ್ತಿ ನಿಂತ ವೃಕ್ಷಗಳು ನಯಾಗರಾಳಿಗೆ ಚಾಮರ ಬೀಸುವ ದೃಶ್ಯವನ್ನು ಚಿತ್ರದ ಪರದೆಯ ಮೇಲೆ ನೆನಪಿಸಿಕೊಂಡೆ

ಈಗ ಆಕೆ ನರೆಗೂದಲ ಅಜ್ಜಿ. ಸುತ್ತಮುತ್ತಲೆಲ್ಲ ಕೇವಲ ಬಿಳಿಯ ಆಚ್ಛಾದನ. ಮನೆ-ಹೋಟೆಲ್‌ಗಳ ಮೇಲೆ, ನೆಲ-ಹುಲ್ಲಿನ ಹಾಸುಗಳ ಮೇಲೆ ಹಿಮವೇ ಹಿಮ. ಕೊಳ್ಳದಲ್ಲಿ ಇದ್ದ ಬಂಡೆಗಳ ಮೇಲೆ ಹಿಮಕೂತು, ಬಿಳಿಯ ಮುದ್ದೆ ಮುದ್ದೆ ತೋರುತ್ತಿತ್ತು. ಗಿಡಮರಗಳು ಹೂವು-ಎಲೆಗಳಿಲ್ಲದೆ ಬರಡಾಗಿ, ವಿರೂಪವಾಗಿ ತೋರುತ್ತ ನಿಂತಿದ್ದವು. ಇಂಥ ಕಾಲದಲ್ಲೂ ನಯಾಗರಾಳ ಸೌಂದರ್ಯ ಕಡಿಮೆ ದರ್ಜೆಯದಲ್ಲ. ಅಂಥದರಲ್ಲೂ ಪ್ರವಾಸಿಗರ ಕಣ್ಣು ತೃಪ್ತಿಗಾಗಿ ನಯಾಗರಾಳಿಗೆ ಅಷ್ಟಿಷ್ಟು "ಮೇಕಪ್" ಮಾಡಿ ತೋರಿಸುವರು.

ಎತ್ತರದಲ್ಲಿ ನಿಂತು ನೋಡಿದಾಗ ನನಗೆ ಮೂರುಭಾಗ ಕಂಡಿತು. ಜಲಪಾತದ ಹಿಂದಿನ ನೀಲಿಯ ಬಣ್ಣದ ನೀರಿನ ಜುಳು ಜುಳು ನಡಿಗೆ. (ಏಕೋ ಅದು ಹಿಮಗಟ್ಟಿರಲಿಲ್ಲ. ಅದು ಧುಮುಕುವಾಗ ಬಿಳಿಯ ರಭಸದ ತೆರೆ. ಧುಮುಕಿ ಹರಿಯುತ್ತ ತುಸು ದೂರ ಹೋಗುವದರಲ್ಲೇ ಆ ನೀರು ಹೆಪ್ಪುಗಟ್ಟುವ ಭಾಗ. ಇದು ನನಗೆ ಬಾಲ್ಯ, ಯೌವ್ವನ, ಮುಪ್ಪುಗಳ ಕಲ್ಪನೆ ಕೊಟ್ಟಿತು. ಬಾಲ್ಯದಲ್ಲಿ ಎಳೆತನ, ಚಟುವಟಿಕೆ; ಮುಗ್ಧತೆ; ಯೌವ್ವನದಲ್ಲಿ ಮದದ, ಪ್ರೌಢಿಮೆಯ, ಹಮ್ಮಿನ ಸಾಹಸದ ಧುಮುಕುವಿಕೆ.

Digitalized by e-Sahithya Documentation Forum
Sponsored by Sarayu Foundation Trust

ಮುಪ್ಪಿನ ಕೊಳ್ಳದಲ್ಲಿ ಜೀವನದಿ ಧುಮುಕುತ್ತಲೇ ನಿರುತ್ಸಾಹದಿಂದ ಜಡವಾಗುವಿಕೆ ಎಂಥ ಆವೇಶ, ಉತ್ಸಾಹಗಳ ವ್ಯಕ್ತಿಯಾದರೂ ಮುಪ್ಪಿನಲ್ಲಿ ನಿರಾಶೆಯಿಂದ ಅಥವಾ ಚಟುವಟಿಕೆಗಳಿಲ್ಲದೆ ಜಡ್ಡುಗಟ್ಟುವ ಪ್ರವೃತ್ತಿ.

ಎಲಿವೇಟರ್ ಸಹಾಯದಿಂದ ಕೆಳಗಿಳಿದು, ಭೂಗರ್ಭದ ಸುರಂಗದಲ್ಲಿ ನಡೆಯುತ್ತ ಜಲಪಾತದ ತಳಕ್ಕೆ ಹೋಗಿ ನಿಲ್ಲಬಹುದು. ಮೇಲಿನಿಂದ ರಭಸದಿಂದ ಧುಮ್ಮಿಕ್ಕುವ ನೀರು ತುಂಬಾ ಎತ್ತರಕ್ಕೆ ನೀರನ್ನು ಚಿಮ್ಮಿ, ತಾನು ಚಿಮ್ಮಿದ ತುಂತುರು ತೆರೆಗಳಲ್ಲಿ ತಾನೇ ಕಾಣದಾಗುವುದುಂಟು. ವಿವಿಧ ಭಂಗಿಗಳಲ್ಲಿ ನಯಾಗರಾದ ಭಾವಚಿತ್ರ ತೆಗೆದು ಮುಂದೆ ಸಾಗಿದೆವು.

ನಯಾಗರಾನಗರದಲ್ಲಿ 4 ಗೋಪುರಗಳಿವೆ. ಒಂದು ಯು. ಎಸ್. ಎ ಕಡೆಗಿದೆ. ಇನ್ನು ಮೂರು ಕೆನಡಾದ ಕಡೆಗಿವೆ. ಅದರ ಮೇಲೆ ನಿಂತು ನೋಡಿದರೆ ನಗರದ ಸುಂದರ ದೃಶ್ಯ ಕಾಣಬರುವುದಲ್ಲದೆ ಜಲಪಾತವನ್ನೂ ಅಂಗೈಯಲ್ಲಿಟ್ಟಂತೆ ನೋಡಬಹುದು. 1) ಪಾನೋಸಾನಿಕ್ ಟವರ್ 2) ನಯಾಗರಾ ಅಬ್‌ಸರ್‌ವೇಶನ್ ಟವರ್ 3) ಸ್ಕೈಲಾನ್ ಟವರ್ ಮತ್ತು 4) ಗಾರ್ಗ್ ಟವರ್. ಎತ್ತರವಾದ ಕಟ್ಟಡ ಕಟ್ಟುವುದರಲ್ಲಿ ಈ ದೇಶಗಳವರಲ್ಲಿ ತುಂಬಾ ಸ್ಪರ್ಧೆ–ಸ್ಕೈಲಾನ್ ಟವರ್‌ನಲ್ಲಿ ತಿರುಗುವ ಡೈನಿಂಗ್ ಕೋಣೆಯಿದ್ದು, ಅದು ಒಂದು ತಾಸಿಗೆ ಒಂದು ಸುತ್ತು ಸುತ್ತುತ್ತದೆ. ನಯಾಗರಾ ಸಿಟಿಯಲ್ಲಿ ಸಂದರ್ಶಿಸಬಹುದಾದ ಇನ್ನಿತರ ತಾಣಗಳೆಂದರೆ ಕಾಮನ ಬಿಲ್ಲು ಸೇತುವೆ, ಕ್ವೀನ್ ವಿಕ್ಟೋರಿಯಾ ಪಾರ್ಕ್, ನಯಾಗರಾ ಮ್ಯೂಸಿಯಮ್, ಹಳೆಯ ಈರಿ ಕೋಟೆ, ತೋಟಗಾರಿಕೆ ಇಲಾಖೆಯ ತೋಟ, ವಿದ್ಯುತ್ ಉತ್ಪಾದಕ ಕೇಂದ್ರ. ರಾತ್ರಿಯ ವೇಳೆಯಲ್ಲಿ ಅಸಂಖ್ಯಾತ ದೀಪಗಳಿಂದ ಕಂಗೊಳಿಸುವ ನಗರ. ಬಹುವಿಧ ವರ್ಣಗಳ ಕಿರಣಗಳಲ್ಲಿ ಶೋಭಿಸುವ ಜಲಪಾತ, ಮತ್ತು ಅಂಟಾರಿಯೋ ಹೈಡ್ರೋ ಫ್ಲಾರಲ್ ಕ್ಲಾಕು. ನಯಾಗರಾ ಜಲಪಾತವು ಇಲ್ಯುಮಿನೇಷನ್ ಕಾಲಕ್ಕೆ ಅತ್ಯದ್ಭುತ ದೃಶ್ಯವನ್ನು ಕಣ್ಣಿಗೆ ಔತಣವಾಗಿ ನೀಡುವುದಂತೆ. ಕನಸಿನಲೋಕದ ಅನುಭವ ಆಗ ಆಗುವುದಂತೆ. (ನಾನು ಅದನ್ನು ವರ್ಣಿಸಲಾರೆ. ಏಕೆಂದರೆ ಚಳಿಗಾಲದಲ್ಲಿ ಈ ಸೌಲಭ್ಯ ನಿಲ್ಲಿಸಿರುತ್ತಾರೆ.) ಇಪ್ಪತ್ತು ವಿಶೇಷ ದೀಪಗಳನ್ನು–36 ಅಂಗುಲ ಗಾತ್ರದ ಸರ್ಚ್‌ಲೈಟ್‌ಗಳನ್ನು ಉರಿಸುತ್ತಾರೆ. ಅಂದರೆ 210 ಮಿಲಿಯ ಕ್ಯಾಂಡಲ್ ಪವರ್ ಬೆಳಕನ್ನು ಒಂದೊಂದು ದೀಪವು ಜಲಪಾತದ ಮೇಲೆ ಚೆಲ್ಲುತ್ತದೆ, ನೀರಿನ ತುಂತುರುಗಳಲ್ಲಿ ಹಾಯ್ದು ಸಾಗುವ ಬೆಳಕು ಅಪೂರ್ವ ಕಾಮನ ಬಿಲ್ಲುಗಳನ್ನು ಸೃಷ್ಟಿಸುವುದಂತೆ. ಮುದ್ರಿತವಾದ ಫೋಟೋ ನೋಡಿ ನಾನು ಸಂತೋಷಿಸಿದೆನು. ಆಗ ಹಗಲು ನೋಡುವುದಕ್ಕಿಂತ ರಾತ್ರಿಯ ವೇಳೆ

ಯಲ್ಲಿ ನೋಡುವುದೇ ಚೆನ್ನಾಗಿರುವುದಂತೆ. ನಯಾಗರ ಮಂಜಿನ ಕನ್ಯೆ ಬಹುವಿಧ ವರ್ಣದ ಬಟ್ಟೆ ಧರಿಸಿ ನೃತ್ಯ ಮಾಡಿದಂತಾಗಬಹುದು.

ಚಳಿಗಾಲದಿಂದಾಗಿ ಹೆಚ್ಚಿನ ಸಂದರ್ಶನ ಸಾಧ್ಯವಾಗಲಿಲ್ಲ. ಫ್ಲಾರಲ್ ಕ್ಲಾಕು ಯಾವ ಎಲೆ–ಹೂವುಗಳಿಲ್ಲದೆ ಹಿಮದಿಂದ ಕೂಡಿದ್ದು, ಗಡಿಯಾರದ ಮುಳ್ಳು ಹಿಮದಲ್ಲಿ ಸಿಕ್ಕಿಕೊಂಡಿದ್ದವು. ರಾತ್ರಿಯ ದೀಪಗಳ ಉರಿಯುವಿಕೆ ನಿಂತಿತ್ತು. ನಾಲ್ಕುವರೆಗೆ ಅತ್ಯಂತ ಕತ್ತಲಾಗುವುದರೊಡನೆ ಶೀತಲ ಗಾಳಿ ಆರಂಭವಾಗುವುದರಿಂದ ಇಲ್ಯೂಮಿನೇಷ‌ನ್ ಸಾಧ್ಯವಿರಲಿಲ್ಲ. ಜಲಪಾತ ಮತ್ತು ಗ್ರೀನ್ ಹೌಸ್ ನೋಡಿದೆವು. ವಿಶಾಲವಾದ ಗಾಜಿನ ಛಾವಣಿಯಿಂದ ಬೆಳಕನ್ನು ಸಂಗ್ರಹಿಸಿ ಬೆಳೆದ ಅತ್ಯಂತ ಸುಂದರ ಹೂವುಗಳು ವರ್ಷವಿಡೀ ಇದ್ದು, ಸಂದರ್ಶಕರನ್ನು ನಿರಾಶೆಗೊಳಿಸದೆ ತಣಿಸುತ್ತವೆ. ಈ ಗ್ರೀನ್ ಹೌಸ್ ನೋಡುತ್ತಿದ್ದಂತೆಯೇ ನಮ್ಮ ಲಾಲ್‌ಬಾಗ್ ನೆನಪಾಯಿತು. ಜಗತ್ತಿನ ಬಹುವಿಧ ಹೂವುಗಳ ಪ್ರದರ್ಶನ ಇಲ್ಲಿದೆ.

ಸೂರ್ಯನ ಹೊಂಬಿಸಿಲಲ್ಲಿ, ರಾತ್ರಿಯ ಸುಂದರವಾದ ವಿದ್ಯುತ್ ದೀಪಗಳ ಕಿರಣಗಳಲ್ಲಿ ನಯಾಗರಾಳ ಸೌಂದರ್ಯವನ್ನು ಕಾಣಬೇಕೆಂಬ ಅದಮ್ಯ ಆಕಾಂಕ್ಷೆ ಹೊತ್ತು, ಸಂದರ್ಶನ ಮುಗಿಸಿ ಟೊರೊಂಟೋಕ್ಕೆ ವಾಪಸ್ಸಾದೆವು. ★

ಕಲ್ಯಾಣ ಕಿರಣದ ಓದುಗರಲ್ಲಿ ಅರಿಕೆ

ಆತ್ಮೀಯ ಓದುಗರೇ,

ಕಲ್ಯಾಣ ಕಿರಣ ಫೆಬ್ರವರಿ ಪತ್ರಿಕೆ ಈ ಸಲ ನಿಮಗೆ ಈಗಾಗಲೇ ವಿಳಂಬವಾಗಿ ಬರುತ್ತಿದೆ. ಅಮೇರಿಕಾ ಪ್ರವಾಸದಲ್ಲಿರುವ ಪೂಜ್ಯ ಮಾತಾಜಿಯವರಿಂದ 'ಬಸವ ಬೀಡಿನಿಂದ ಸಿರಿಯ ನಾಡಿಗೆ' ಪ್ರವಾಸ ಕಥನ ಧಾರಾವಾಹಿಯಾಗಿ ಬರುತ್ತಿದ್ದು, ಈ ಬಾರಿ ಆ ಲೇಖನ ಬರುವುದು ವಿಳಂಬವಾಗಿರುವ ಕಾರಣ ಪ್ರಕಟಿಸಲಾಗಿಲ್ಲ. ಮುಂದಿನ ಸಂಚಿಕೆಯಲ್ಲಿ ಅದನ್ನು ಮುಂದುವರಿಸುವ ಭರವಸೆ ನೀಡಿ ನಿಮ್ಮ ಸಹಕಾರವನ್ನು ಬಯಸುತ್ತೇವೆ.

—ಉಪ ಸಂಪಾದಕರು

ಕಲ್ಯಾಣ ಕಿರಣ.

Digitalized by e-Sahithya Documentation Forum
Sponsored by Sarayu Foundation Trust

ಶ್ರೀ ಬಸವ ಭಾರತಿ ವಿದ್ಯಾಲಯ

(ವಸತಿ ಸಹಿತ ವಿದ್ಯಾಲಯ)

(Residential School For Boys)

೧೯೮೧-೮೨ ಸಾಲಿನಲ್ಲಿ 5, 6, 7, 8, ಮತ್ತು 9ನೇ ತರಗತಿಗಳು ಮಾತ್ರ

ಸ್ಥಾಪನೆ : ಶೀಷೆಗಳಲ್ಲಿರುವ ಔಷಧಿ ಮೈಯಲ್ಲಿ ಇಳಿಯಬೇಕಾದರೆ ಸಿರಿಂಜ್ ಬೇಕು, ವೈದ್ಯ ಬೇಕು. ಧರ್ಮ ಶಾಸ್ತ್ರಗಳಲ್ಲಿರುವ ಅಮೃತವು ಬದುಕಿಗೆ ಪುಷ್ಟಿ ಕೊಡಬೇಕಾದರೆ ಧರ್ಮ ಪ್ರಸಾರ ಬೇಕು—ಧರ್ಮಪ್ರಸಾರಕರು ಬೇಕು. ಈ ಉದ್ದೇಶವನ್ನು ಹೊತ್ತು ರೂಪಗೊಂಡಿದೆ ವಿಶ್ವಕಲ್ಯಾಣ ಮಿಶನ್ ಎಂಬ ಧಾರ್ಮಿಕ ಸಂಸ್ಥೆ. ಇಲ್ಲಿ ಜಾತಿ, ಮತ, ಪಂಥಗಳ ಸಂಕುಚಿತ ಮನೋಭಾವನೆಗಾಗಲಿ, ಮೂಢ ಪರಂಪರೆಗಾಗಲೀ ಅವಕಾಶವಿಲ್ಲ. ವ್ಯಕ್ತಿ-ಸಮಾಜ-ರಾಷ್ಟ್ರಗಳ ಒಳ್ಳಿತಿಗಾಗಿ ಧಾರ್ಮಿಕ ಸಾಂಸ್ಕೃತಿಕ, ಶೈಕ್ಷಣಿಕ ಮತ್ತು ಸಾಮಾಜಿಕ ಕ್ಷೇತ್ರದಲ್ಲಿ ಶ್ರಮಿಸುವ ಉತ್ತುಂಗ ಗುರಿಯಿದೆ.

ಶ್ರೀ ಬಸವ ಭಾರತಿ ವಿದ್ಯಾಲಯ ಆರಂಭ : ಉತ್ತಮ ಮೌಲ್ಯಗಳ ಪ್ರಸಾರಕ್ಕೆ ಶಿಕ್ಷಣ ಮಾಧ್ಯಮವು ಶ್ರೇಷ್ಠ ಮಾಧ್ಯಮವೆಂಬುದನ್ನು ಮನಗಂಡ ವಿಶ್ವ ಕಲ್ಯಾಣ ಮಿಶನ್ ಶಿಕ್ಷಣ ಸಂಸ್ಥೆಯು ಶ್ರೀಬಸವ ಭಾರತಿ ವಿದ್ಯಾಲಯವೆಂಬ ವಸತಿ ಸಹಿತ ಶಿಕ್ಷಣ ಕೇಂದ್ರವನ್ನು ೧೯೭೯ನೆಯ ವರ್ಷದ ಮೇ ೨೨ರಂದು ಆರಂಭಿಸಿತು. ಬೆಂಗಳೂರು ನಗರದ ಹೊರವಲಯದಲ್ಲಿ ಬೆಂಗಳೂರು—ಮೈಸೂರು ಹೆದ್ದಾರಿಯ ಮೇಲೆ ಕುಂಬಳಗೋಡು ಗ್ರಾಮದ ಸನಿಹದಲ್ಲಿರುವ ಸುಂದರ, ಪ್ರಶಾಂತ "ಬಸವ ಗಂಗೋತ್ರಿ"ಯಲ್ಲಿ ಆರಂಭವಾಗಿದೆ.

ಬಸವ ಗಂಗೋತ್ರಿ ಆವರಣದ ವೈಶಿಷ್ಟ್ಯ : "ಮಕ್ಕಳು ಮೆದುಳಿನಿಂದ ಕಲಿಯುವುದಕ್ಕಿಂತಲೂ ಹೆಚ್ಚು ಸಂವೇದನಾಶೀಲ ಮನದಿಂದ, ಇಂದ್ರಿಯಗಳಿಂದ ಜ್ಞಾನವನ್ನು ಗ್ರಹಿಸುತ್ತಾರೆ" ಎಂಬ ರವೀಂದ್ರನಾಥ ಟಾಗೋರರ ಉಕ್ತಿಯಂತೆ ಶಿಕ್ಷಣಕ್ಕೆ ಆದರ್ಶ ತಾಣ ಬಸವ ಗಂಗೋತ್ರಿ ಆವರಣ. ೩೩ ಎಕರೆ ಕ್ಷೇತ್ರದಲ್ಲಿ ಜುಳು ಜುಳು ನಾದದ ವಾಹಿನಿ "ಬಸವ ಗಂಗಾ" ನಗರದ ಗದ್ದಲವಿಲ್ಲದ ನಿಶ್ಶಬ್ದ ವಾತಾವರಣ,

Digitalized by e-Sahithya Documentation Forum
Sponsored by Sarayu Foundation Trust

ಬೆಂಗಳೂರು ನಗರಕ್ಕೆ ದೂರವೆನಿಸದ ಸಾರಿಗೆ ಸಂಪರ್ಕ ವ್ಯವಸ್ಥೆ, ಮಕ್ಕಳನ್ನು ಕಳಿಸ ಬಯಸುವ ಪಾಲಕರಿಗೆ ಬಂದು ಹೋಗಲು ಸಮಸ್ಯೆಯೇ ಇಲ್ಲದಂತಹ ಸಂಪರ್ಕ ಸೌಲಭ್ಯ, ಸ್ವಚ್ಛಂದವಾಗಿ ಸುಳಿದಾಡುತ್ತ ಗಿಡಗಳ ಅಡಿಯಲ್ಲಿ ಕುಳಿತು ಮಕ್ಕಳು ಓದ ಬಹುದಾದ ಮುಕ್ತ ವಾತಾವರಣ.

ಧ್ಯೇಯ : ಶ್ರೀಮಂತ, ಬುದ್ಧಿವಂತ, ಗುಣವಂತ, ನೀತಿವಂತ ಎಲ್ಲವೂ ಆಗಿ ಬಾಳಬೇಕಾದರೆ ಭೌತಿಕ, ಬೌದ್ಧಿಕ, ನೈತಿಕ ಮತ್ತು ಆಧ್ಯಾತ್ಮಿಕ ಮುಂತಾದ ಎಲ್ಲ ಬಗೆಯ ಮೌಲ್ಯಗಳು ಬೇಕು. ಇಂಥ ಮೌಲ್ಯಗಳನ್ನು ಎಳೆಯವರಿಂದಲೇ ಬೇರೂರಿಸಬೇಕು. ಸಿಮೆಂಟು ಹಸಿಯಿದ್ದಾಗ ಬಲವಾದ ಕಬ್ಬಿಣದ ಸಳಿಯೂ ತೂರಬಲ್ಲುದು, ಒಣಗಿದ ಬಳಿಕ ಸಣ್ಣ ಮೊಳೆಯೂ ತೂರಲಾರದು. ಆದ್ದರಿಂದ ಎಳೆಯ ಮಕ್ಕಳಿಗೆ ನೈತಿಕ, ಸಾಂಸ್ಕೃತಿಕ ಶಿಕ್ಷಣ ಕೊಡುವುದು ಹಿರಿಯರ ಆದ್ಯ ಕರ್ತವ್ಯ.

ಭಾರತೀಯ ಸಂಸ್ಕೃತಿಯ ಆದರ್ಶ-ಸತ್ಯ-ಮೌಲ್ಯಗಳ ಆಧಾರಿತ ಗುರುಕುಲ ಪದ್ಧತಿಯ ಶಿಕ್ಷಣದ ಜೊತೆಗೆ ಆಧುನಿಕ ಪದ್ಧತಿಯ ಶಿಕ್ಷಣ ಅವಶ್ಯ. ಇಂದಿನ ವಿದ್ಯಾರ್ಥಿಗಳೇ ಮುಂದಿನ ಭವ್ಯ ಭಾರತದ ಶಿಲ್ಪಿಗಳಾಗಬಲ್ಲವರಾದ ಕಾರಣ ಅವರಲ್ಲಿ ಪರಮಾತ್ಮನಲ್ಲಿ ಭಕ್ತಿ-ವಿಶ್ವಾಸ, ದೇಶಪ್ರೇಮ, ಸಮಾಜಸೇವಾ ಮನೋಭಾವನೆ, ಜ್ಞಾನ ಪಿಪಾಸೆ, ಸದುವಿನಯ, ಸತ್‌ಶೀಲ, ಸದಾಚಾರ ಮುಂತಾದ ಸದ್ಗುಣಗಳ ಜೊತೆಗೆ ಸ್ವಾವಲಂಬನೆ, ಸ್ವಾರ್ಥತ್ಯಾಗ, ಆತ್ಮವಿಶ್ವಾಸ, ವಿನಯ-ವೀರತ್ವಗಳು, ಕುಟುಂಬ ಸಮಾಜ ರಾಷ್ಟ್ರಗಳ ಕುರಿತು ಚಿಂತನಶೀಲತೆ ಹಾಗೂ ಆಧುನಿಕ ಯುಗದ ವೈಜ್ಞಾನಿಕ ಮನೋಧರ್ಮಗಳು ಒಡಮೂಡುವಂತೆ ಮಾಡುವುದು. ಇಂತಹ ಮಹೋನ್ನತ ಧ್ಯೇಯ ಸಾಧನೆಗಾಗಿ ಸುಶಿಕ್ಷಿತ, ಸುಸಂಸ್ಕೃತ ಅಧ್ಯಾಪಕರಿಂದ ಯೋಗ್ಯ ಮಾರ್ಗದರ್ಶನ, ಜೊತೆಗೆ ಸಂಸ್ಥೆಯ ನಿಷ್ಠಾವಂತ ಕಾರ್ಯಕರ್ತರು, ಸಾಧಕರು-ಸಂತರಿಂದ ಸ್ಫೂರ್ತಿದಾಯಕ ನೆರವು, ಸಹಕಾರವಿದೆ.

ವಿದ್ಯಾಭ್ಯಾಸ : ಕರ್ನಾಟಕ ರಾಜ್ಯ ವಿದ್ಯಾ ಇಲಾಖೆಯ ನಿಯಮಾವಳಿಯಂತೆ ಸುವ್ಯವಸ್ಥಿತ, ಶ್ರೇಷ್ಠದರ್ಜೆಯ ಶಿಕ್ಷಣವನ್ನು ಇಂಗ್ಲಿಷ್ ಮತ್ತು ಕನ್ನಡ ಮಾಧ್ಯಮಗಳ ಮೂಲಕ ಬೋಧಿಸಲಾಗುವುದು. ೧೯೭೯-೧೯೮೦ ರ ಸಾಲಿಗೆ ಐದನೆಯ ತರಗತಿಯಿಂದ ಆರಂಭವಾಗಿರುವ ಈ ಶಾಲೆಯಲ್ಲಿ ಈ ವರ್ಷ ೫,೬ ಮತ್ತು ೭ನೆಯ ತರಗತಿಗೆ ಪ್ರವೇಶ ಉಂಟು ಮತ್ತು ಪ್ರೌಢಶಾಲೆ ಆರಂಭವಾಗಿರುವುದರಿಂದ ೮ ಮತ್ತು ೯ನೆಯ ತರಗತಿಗೂ ಪ್ರವೇಶವಿದೆ. ಆದರೆ ಮುಂಬರುವ ವರ್ಷಗಳಲ್ಲಿ ಒಂದೊಂದೇ ತರಗತಿ ಬೆಳೆಸುತ್ತಾ ಸಾಗಿ, ಪಿ. ಯು. ಸಿ. ವರೆಗೆ ಶಿಕ್ಷಣ ಸಂಸ್ಥೆ ತರಗತಿಗಳನ್ನು ನಡೆಸುವ ಉದ್ದೇಶ ಹೊತ್ತಿದೆ.

ಶ್ರೀ ಬಸವ ಭಾರತಿ ವಿದ್ಯಾಲಯದ ಕಾರ್ಯಕ್ರಮಗಳು

೧. **ಧಾರ್ಮಿಕ ಶಿಕ್ಷಣ :** ಧಾರ್ಮಿಕ, ಆಧ್ಯಾತ್ಮಿಕ, ನೈತಿಕ, ಸಾಂಸ್ಕೃತಿಕ ಮೌಲ್ಯಗಳು ವಿದ್ಯಾರ್ಥಿಗಳಲ್ಲಿ ಅಳವಡುವಂತೆ ಶಿಕ್ಷಣ ನೀಡಲಾಗುವುದು.

೨. **ಶಾರೀರಿಕ ಶಿಕ್ಷಣ :** ವಿದ್ಯಾರ್ಥಿಗಳಿಗೆ ಯೋಗಾಸನ, ಪ್ರಾಣಾಯಾಮ ಹಾಗೂ ವ್ಯಾಯಾಮಗಳನ್ನು ಕಲಿಸಲಾಗುತ್ತದೆ.

೩. **ಪರೀಕ್ಷೆಗಳು :** ವಿದ್ಯಾರ್ಥಿಗಳು ಪಡೆದುಕೊಳ್ಳುವ ಜ್ಞಾನ ಕೇವಲ ಗ್ರಂಥಗಳಿಗೆ ಸೀಮಿತವಾಗದೇ, ಜೀವನದಲ್ಲಿಯೇ ಅಳವಡುವಂತೆ, ಮನನವಾಗುವಂತೆ ಮಾಡಲು ಪಾಕ್ಷಿಕವಾಗಿ ಪರೀಕ್ಷೆಗಳನ್ನು ಏರ್ಪಡಿಸಲಾಗುವುದು.

೪. **ಉಪನ್ಯಾಸಗಳು :** ಪ್ರತಿ ಭಾನುವಾರ ಸಾಯಂಕಾಲ ನಾಡಿನ ಸುಪ್ರಸಿದ್ಧ ವಿದ್ವಾಂಸರು, ಸಾಹಿತಿಗಳು, ತತ್ತ್ವವೇತ್ತರು, ಸಮಾಜ ಸುಧಾರಕರುಗಳಿಂದ ಉಪನ್ಯಾಸಗಳು.

೫. **ಭಾಷಣ-ಲೇಖನ ಸ್ಪರ್ಧೆಗಳು :** ವಿದ್ಯಾರ್ಥಿಗಳಲ್ಲಿ ಸಾಹಿತ್ಯಕ ಅಭಿರುಚಿ ಬೆಳೆಸುವುದಕ್ಕಾಗಿ, ಭಾಷಣ ಕಲೆಯನ್ನು ಅಳವಡಿಸುವ ದೃಷ್ಟಿಯಿಂದ ಶರಣರ ಸಂತರ, ನಾಡಿನ ಸಮಸ್ಯೆಗಳ ಕುರಿತು ಭಾಷಣ-ಲೇಖನ ಸ್ಪರ್ಧೆಗಳನ್ನೇರ್ಪಡಿಸಲಾಗುವುದು.

೬. **ಪ್ರವಾಸ :** ದೇಶದ ಪ್ರಮುಖ ಐತಿಹಾಸಿಕ, ಧಾರ್ಮಿಕ, ಸಾಂಸ್ಕೃತಿಕ, ಔದ್ಯಮಿಕ ಕ್ಷೇತ್ರಗಳ ಸಂದರ್ಶನಾವಕಾಶ ಮಾಡಿಕೊಡುವ ದೃಷ್ಟಿಯಿಂದ ಕಡ್ಡಾಯ ಪ್ರವಾಸವನ್ನು ಏರ್ಪಡಿಸಲಾಗುತ್ತದೆ.

೭. **ಅಧ್ಯಯನ :** ಒಳ್ಳೆಯ ವ್ಯವಸ್ಥಾಪಕರ ಮೇಲ್ವಿಚಾರಣೆಯಲ್ಲಿ, ಅಧ್ಯಯನದಲ್ಲಿ ಹಿಂದುಳಿಯುವ ವಿದ್ಯಾರ್ಥಿಗಳಿಗೆ ತರಬೇತಿ ನೀಡಿ, ಪ್ರೋತ್ಸಾಹಿಸಲಾಗುವುದು.

೮. **ಜ್ಞಾನಾರ್ಜನೆ :** ಜ್ಞಾನಾರ್ಜನೆಗಾಗಿ ಗ್ರಂಥಗಳ ಅಧ್ಯಯನ, ಪತ್ರಿಕೆಗಳನ್ನು ಓದುವುದು, ಈ ಎಲ್ಲ ಉದ್ದೇಶಕ್ಕಾಗಿ ವಾಚನಾಲಯ-ಗ್ರಂಥ ಭಂಡಾರಗಳ ವ್ಯವಸ್ಥೆ ಇದೆ.

೯. **ವಸತಿ :** ನಿರ್ಮಲವಾದ ಸ್ವಚ್ಛ-ಶುದ್ಧ ಗಾಳಿಯಾಡುವ, ಬೆಳಕು ತುಂಬಿದ ಕೋಣೆಗಳಲ್ಲಿ ಏರ್ಪಡಿಸಲಾಗಿದೆ.

೧೦. **ಆಹಾರ :** ವಿದ್ಯಾರ್ಥಿಗಳಿಗೆ ಪೌಷ್ಟಿಕವಾದ, ಆರೋಗ್ಯಕರವಾದ ಒಳ್ಳೆಯ ಶಾಖಾಹಾರಿ ಊಟ-ಉಪಹಾರಗಳ ವ್ಯವಸ್ಥೆ ಇದೆ.

೧೧. **ವೈದ್ಯಕೀಯ ಸೌಲಭ್ಯ :** ವಿದ್ಯಾರ್ಥಿಗಳ ಆರೋಗ್ಯವನ್ನು ಸದಾಕಾಲ ಗಮನಿಸಲಾಗುತ್ತದೆ. ಅವಶ್ಯಕತೆ ಬಿದ್ದಾಗ ಸೂಕ್ತ ಚಿಕಿತ್ಸೆಗೆ ತಜ್ಞ ವೈದ್ಯರುಗಳಿದ್ದಾರೆ. ವಿಶೇಷ ಚಿಕಿತ್ಸೆಗಳ ವೆಚ್ಚವನ್ನು ಪ್ರತ್ಯೇಕ ಕೊಡಬೇಕಾಗುತ್ತದೆ. ★

PARABLE

Mataji

Dear children,

I am going to narrate a beautiful as well as a simple and a thoughtful story to you from now onwards in our Kalyana Kirana.

There was a thick forest in the hills of Himalaya. Amidst this jungle was situated a beautiful lake. This was looking like a mirror-the mother nature had to look for herself. Many ducks were living there on the bank of the lake. They used to swim and eat and play during day time. One day a female duck happened to lay many eggs. By the way she did not count them as she knew not mathematics.

One day eggs hatched and many ducklings came out. Unfortunately one egg did not hatch. Hence the mother was very much worried. Any how she tried sincerely to get that hatched by incubating it.

At last the egg hatched. To her surprise the mother duck saw an ugly female duckling coming out. She was thoroughly disappointed to see her own ugly creation. Still with patience she looked after her kid. But the other neighbour ducks and ducklings were making fun of this ugly being.

One day the mother duck called on all her ducklings to teach them swimming. Slowly they learnt to swim except this ugly duckling. All her brothers and sisters teased her. But still she refused to swim in that dirty water. Tortured by them,

Digitalized by e-Sahithya Documentation Forum
Sponsored by Sarayu Foundation Trust

on one fine day she escaped and started her journey to some unknown place. On her way she was about to be caught by hunters. Fortunately escaping from their hands, she continued her journey. One day she was crying sitting alone in a forest. At once she saw a few beautiful birds flying in the air. She exclaimed, 'How beautiful they are! if I were so beautiful, they could have loved me'. But the next moment her enthusiasm went down. She had forgotten that she was not even as beautiful as the ducklings were.

She flew and flew and flew and on one day she entered into a lake where those beautiful birds which she saw flying in the sky were swimming. She got frieghtened thinking that they may torture her and tried to fly away. Observing this new comer those birds welcomed. 'Come sister, why are you afraid of us. Come and join us.' Hesitatingly she said, "No, I am afraid of you. You are most beautiful birds. But I am the ugliest one. So, better not to join you."

"No, no. You are wrong. We are swans. And you too are a swan. We are of same kind. Come and join us". This duckling replied, 'No, certainly not. I was brought up amidst ducklings. They all teased and tortured me saying that I am ugly."

"No, you are not ugly. You are more beautiful than ducklings. Because there number was more and you were caught up in the kingdom of ducklings, you were ill-treated. To make yourself sure, look down into your reflection; You will realise that you are in fact a swan and not a duckling.'

Duckling looked into her reflection and realising that she was a swan, she joined the company of swans and became happy.

Moral: This whole fable can be stretched to get a philosophical thought-bit. The soul is a swan. God-the

mother swan lays this soul in the womb of a mortal being comparable to the nest of a duck. Parents, give birth to many children and expect that their behaviour, taste and ideals should be same and apt to the world. But a few souls, awakened in themselves do not like to swim in the unclean water of sensual pleasures. Seeing this unusual behaviour other wordly people tease and torture them. On one fine day, the awakened souls escape from this quagmire of sensual pleasures and start their journey to an unknown end. On their way, they have to face many ordeals and cross many hurdles. when they see swans or realised souls they gasp in desperation thinking that they cannot become so. Still they continue their spiritual sadhana and at last find a resting place where they meet their Guru. It is this divine guide who welcomes the novice or an aspirant and says, 'You too are divine in nature. Look into yourself; realise your nature.' Then he would give the novice the mirror of spiritual technique. The latter than realises that he too is an abode of divinity, a spark of Almighty and enjoys his own Self.

ಓದುಗರಿಗೆ ಸೂಚನೆ

ಪರಮಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರ ಜನ್ಮದಿನೋತ್ಸವವು 13-3-1981 ರಂದು ಅಮೇರಿಕದಲ್ಲಿಯೇ ನಡೆಯಲಿದ್ದು ಕಲ್ಯಾಣ ಕಿರಣ ಮಾರ್ಚ್ ತಿಂಗಳ ಸಂಚಿಕೆಗಾಗಿ ಕವನ, ಲೇಖನಗಳನ್ನು ಸ್ವಾಗತಿಸಲಾಗುವುದು. ಪೂಜ್ಯರನ್ನು ಕುರಿತು ಬರೆಯಲಾಗುವ ಲೇಖನಗಳು, ಪ್ರಸಂಗಗಳು, ಪ್ರೇರಣೆಗಳು, ಕವನಗಳು, ಅಭಿಪ್ರಾಯಗಳು ಮುಂತಾದುವುಗಳನ್ನು ಫೆಬ್ರುವರಿ 20 ರೊಳಗೆ ತಲುಪುವಂತೆ ಕಾರ್ಯಾಲಯಕ್ಕೆ ಕಳಿಸಬೇಕೆಂದು ಕೋರುವೆವು.

ವ್ಯವಸ್ಥಾಪಕರು.

Digitalized by e-Sahithya Documentation Forum
Sponsored by Sarayu Foundation Trust

ಮಾತು ಜ್ಯೋತಿರ್ಲಿಂಗ

ಸಂಗ್ರಹ: ಜಿ. ಮಹಾದೇವಸ್ವಾಮಿ

ಸರ್ಕಾರದ ಆಡಳಿತ ಸಡಲಿದಷ್ಟು ಕಾನೂನುಗಳ ಸಂಖ್ಯೆಯೂ ಹೆಚ್ಚುತ್ತಾ ಹೋಗುತ್ತದೆ.

—ಟ್ಯಾಸಿಟಸ್

ಕಾಮಿನೀ-ಕಾಂಚನಗಳ ಬಾಧೆಯಿಂದ ನಿನ್ನನ್ನು ಯಾವಾಗಲೂ ಕಾಪಾಡಿಕೋ.

ಸುಭಾಷಿತ

ಸಮಯ ಬಂದಾಗಲೇ ಮಾತನಾಡಬೇಕು, ಇಲ್ಲದಿದ್ದರೆ ನೀವು ಮಾತನಾಡಿ ಅಪ್ರಿಯರಾಗುತ್ತೀರಿ.

—ಶ್ರೀರಂಗ

ತುಳಿದ ಹಾದಿಯನ್ನು ತುಳಿಯದಿರುವುದೇ ಕ್ರಾಂತಿಯ ಲಕ್ಷಣ.

—ಜೆ. ಪಿ.

ಗುರಿಯಿಲ್ಲದ ಜೀವನ ಒರೆಯಿಲ್ಲದ ಕತ್ತಿಯಂತೆ.

ಜನಪದ ಗಾದೆ.

ಬಳಸಿ ಬಾಯ್ಬಿಡುವುದಕ್ಕಿಂತ, ಉಳಿಸಿ ಗಳಿಸುವುದೇ ಲೇಸು.

—ಫ್ರಾಂಕ್ಲಿನ್

ಜನರು ಎಷ್ಟು ಗಳಿಸಿದರು ಎಂಬ ವಿಚಾರ ದೊಡ್ಡದಲ್ಲ, ಎಷ್ಟು ಕೊಟ್ಟರು ಎಂಬುದು ಮಹತ್ವದ್ದು.

—ಶ್ರೀರಾಮಕೃಷ್ಣ ಪರಮಹಂಸರು.

ಮಾಡುವ ಕೆಲಸವನ್ನು ನೋಡಿ ನಾವು ಒಬ್ಬನನ್ನು ಅಳೆಯಬಾರದು, ಅವನು ಯಾವ ದೃಷ್ಟಿಯಿಂದ ಆ ಕಾರ್ಯವನ್ನು ಮಾಡುತ್ತಾನೆಂಬುದನ್ನು ನೋಡಬೇಕು.

—ವಿವೇಕಾನಂದ

ನೀನು ಯಾರೆಂಬುದು ಜನರಿಗೆ ಗೊತ್ತಿಲ್ಲವೆಂದು ಚಿಂತೆ ಮಾಡಬೇಡ, ಜನರು ನಿನ್ನನ್ನು ಗೊತ್ತುಮಾಡಿಕೊಳ್ಳುವಂತೆ ನಿನ್ನ ವ್ಯಕ್ತಿತ್ವವನ್ನು ರೂಪಿಸಿಕೊ.

—ಬುದ್ಧ

ವ್ಯಕ್ತಿಯ ವ್ಯಕ್ತಿತ್ವವು ಹಿರಿದಾಗುತ್ತ ಹೋದಂತೆ ಆತನ ಸಾಮಾಜಿಕ ಹೊಣೆಯೂ ಹೆಚ್ಚುತ್ತದೆ.

—ಚೀನಾ ಗಾದೆ

ನೂರು ನಿಂದೆಗಳು ಮಾನವನಿಂದ ಘಾತಿಸಲಾರವು. ಆದರೆ ಅಂತರಾತ್ಮನಿಗೆ ಮಾಡುವ ವಂಚನೆ ಅವನ ವ್ಯಕ್ತಿತ್ವವನ್ನೇ ಛಿದ್ರಗೊಳಿಸುವುದು.

— ಜಗದ್ಗುರು ಮಾತಾಜಿ

ಧೈರ್ಯದ ವಿನಃ ಧನವು, ಶೌರ್ಯವಿಲ್ಲದೆ ಸಫಲತೆ, ಜ್ಞಾನಿಯಾಗಿರದೆ ಮುಕ್ತಿ ಮತ್ತು ದಾನದ ವಿನಃ ಯಶಸ್ಸು ಸಿಕ್ಕದು.

— ಸುಭಾಷಿತ

ಚಂದಾದಾರರಿಗೆ ಸೂಚನೆ

1. ಈಗ ನಮ್ಮಲ್ಲಿ ಕಲ್ಯಾಣ ಕಿರಣಕ್ಕೆ ಆಜೀವ ಸದಸ್ಯರಾಗಿರುವವರ ಚಂದಾನಂಬರುಗಳು ಬದಲಾವಣೆಯಾಗಿವೆ. ಕಲ್ಯಾಣ ಕಿರಣ ಬರುವ ಲಕೋಟೆಯ ಮೇಲೆ ಚಂದಾ ನಂಬರಿದ್ದು ಚಂದಾದಾರರು ಅದನ್ನು ಗುರುತಿಟ್ಟುಕೊಂಡು, ತಮ್ಮ ಯಾವುದೇ ಪತ್ರ ವ್ಯವಹಾರಗಳಲ್ಲಿ ಈ ಹೊಸ ನಂಬರನ್ನು ನಮೂದಿಸಬೇಕಾಗಿ ಕೋರಿಕೆ.

2. ಚಂದಾದಾರರಾಗ ಬಯಸುವವರು ವಾರ್ಷಿಕಕ್ಕೆ ಚಂದಾ ಹಣ ರೂ. ೧೬-೦೦ ನ್ನು ಆಜೀವ ಸದಸ್ಯತ್ವಕ್ಕೆ ರೂ, ೧೫೧-೦೦ ನ್ನು ಮನಿಯಾರ್ಡರ್, ಚೆಕ್, ಡ್ರಾಫ್ಟ್, ಮುಖಾಂತರ ಕಳಿಸಿ. ನಿಮ್ಮ ಸರಿಯಾದ ವಿಳಾಸವನ್ನು ಸ್ಪಷ್ಟವಾಗಿ ಬರೆದು ತಿಳಿಸಬೇಕು.

೩. ಚಂದಾದಾರರು ವಿಳಾಸದಲ್ಲಿ ಬದಲಾವಣೆಯಾದ ತಕ್ಷಣ ಚಂದಾ ನಂಬರನ್ನು ನಮೂದಿಸಿ ಪತ್ರ ಬರೆದು ತಿಳಿಸಬೇಕು. ಚಂದಾ ನಂಬರ್ ಬರೆಯದ ಪತ್ರಗಳನ್ನು ಪರಿಶೀಲಿಸಲಾಗುವುದಿಲ್ಲ. ಚಂದಾ ನಂಬರ್ ನಿಮಗೆ ಕಲ್ಯಾಣ ಕಿರಣ ಪುಸ್ತಕದ ಅಂಚೆ ಲಕೋಟೆಯ ಮೇಲಿರುತ್ತದೆ. ಅದನ್ನು ಗುರುತಿಟ್ಟುಕೊಂಡು ಇಲ್ಲಿಗೆ ಬರೆಯುವ ಪತ್ರವ್ಯವಹಾರಗಳಲ್ಲಿ ನಮೂದಿಸಿರಿ.

೪. ಕಲ್ಯಾಣ ಕಿರಣ ಮಾಸ ಪತ್ರಿಕೆಗೆ ಆಜೀವ ಸದಸ್ಯರಾಗಬೇಕೆಂದು ಬಯಸಿದ್ದು ಒಮ್ಮೆಲೇ ೧೫೧-೦೦ ರೂ ಕಟ್ಟಲಾಗದವರು ೫-೬ ಬಾರಿ ಕಂತಿನ ಪ್ರಕಾರ ೨೫ ರೂ, ೩೦ ರೂ, ಗಳಂತೆ ಕಟ್ಟಿ ವರ್ಷದೊಳಗೆ ಆಜೀವ ಸದಸ್ಯರಾಗಲು ಅವಕಾಶ ಕಲ್ಪಿಸಲಾಗಿದೆ.

ಎಲ್ಲದಕ್ಕೂ ಚಂದಾದಾರರ ಸಹಕಾರವನ್ನು ಕೋರುತ್ತೇವೆ.

-ಸಂಪಾದಕರು

Digitalized by e-Sahithya Documentation Forum
Sponsored by Sarayu Foundation Trust

ಮಕ್ಕಳ ಮೌಕ್ತಿಕದ ಮಾತುಗಳು

ಸೋದರಿ ಉಮಾದೇವಿ ಎಂ.ಎ, ಎಂ.ಎ.ಎಡ್

ಅಂದು ಭಾನುವಾರ ಬೆಳಗಿನ ಸಮಯ. ಐದನೆಯ ತರಗತಿಯ ಕೆಲವು ಮಕ್ಕಳು ನಮ್ಮ ಕೋಣೆಯಲ್ಲಿ ಸಮಾವೇಶಗೊಂಡಿದ್ದರು. 'ಪಿಲ್‌ಗ್ರಿಮ್ಸ್ ಪ್ರೋಗ್ರೆಸ್' ಎಂಬ ಆಧ್ಯಾತ್ಮಿಕ ಆಂಗ್ಲ ಕಾದಂಬರಿಯನ್ನು ಓದುತ್ತಾ ಕುಳಿತೆವು. ಕಥಾ ನಾಯಕ 'ಕ್ರಿಶ್ಚಿಯನ್'ನ ಜೊತೆ ಮಕ್ಕಳೂ ಸಹ ಕಾಲ್ಪನಿಕತೆಯ ಕಡಲಲ್ಲಿ ತೇಲಿ ಹೋಗಿದ್ದರು. ಅವನ ಹೆಂಡತಿ ಕ್ರಿಶ್ಚಿಯಾನಾಳೂ ಸಹ ಜ್ಞಾನೋದಯವಾದ ನಂತರ ಗಂಡನ ಹಾದಿಯನ್ನೇ ತುಳಿದು, ಆಧ್ಯಾತ್ಮಿಕ ಯಾತ್ರೆಯನ್ನು ಕೈಗೊಂಡಿದ್ದಳು. ಕಥೆಯಲ್ಲಿ ಬರುವಂತೆ 'ವಿಕೆಟ್ ಗೇಟ್' ನ್ನು ದಾಟಿ ದೇವದೂತರ ಮನೆಗೆ ಹೋಗುವಳು. ಅಲ್ಲಿ ಒಬ್ಬ ಮಾರ್ಗದರ್ಶಿ (ಗುರು) ಅವಳಿಗೆ ಸಂಕೇತಗಳ ಮೂಲಕ ಮಾರ್ಗದರ್ಶನ ಮತ್ತು ಉಪದೇಶ ಮಾಡತೊಡಗುವನು. ಕ್ರಿಶ್ಚಿಯಾನಾಗೆ ಒಂದು ಕೋಣೆಯನ್ನು ತೋರಿಸುತ್ತಾ 'ಇಲ್ಲಿಯ ವಸ್ತುಗಳು, ಸಾಧಕ ಜೀವನದಲ್ಲಿ ಮುಂದುವರೆಯಲು ನಿನಗೆ ಯಾವ ರೀತಿ ಮಾರ್ಗದರ್ಶನ ಮಾಡುತ್ತವೆ ? ಸರಿಯಾಗಿ ನೋಡಿ ಉತ್ತರ ಕೊಡು' ಎನ್ನುವನು. ಕ್ರಿಶ್ಚಿಯಾನಾ ಕೊಡುವ ಉತ್ತರವನ್ನು ನಾವು ಓದಬೇಕಾಗಿತ್ತು. ಆದರೆ ಅದಕ್ಕಿಂತ ಮೊದಲು ನಮ್ಮ ಶಾಲೆಯ ಈ ಮಕ್ಕಳು ಆ ರೀತಿಯ ಸನ್ನಿವೇಶದಲ್ಲಿ ಹೇಗೆ ಉತ್ತರ ಕೊಡುವರೋ ಎಂದು ತಿಳಿಯುವ ಕುತೂಹಲವುಂಟಾಯಿತು. ಆದ್ದರಿಂದ "ನಾವು ಕುಳಿತ ಕೋಣೆಯನ್ನು ಸರಿಯಾಗಿ ವೀಕ್ಷಿಸಿರಿ, ಇಲ್ಲಿರುವ ವಸ್ತುಗಳಲ್ಲಿ ಹಲವಾರು ಸಂಕೇತಗಳಿವೆ. ಅವುಗಳು ನಿಮಗೆ ಯಾವ ರೀತಿಯ ಬುದ್ಧಿವಾದವನ್ನು ಕೊಡುತ್ತವೆ ಎಂಬುದನ್ನು ಹೇಳಿ ನೋಡೋಣ" ಎಂದು ಕೇಳಿದೆ. ಆಗ ನೋಡಬೇಕಿತ್ತು ಅವರ ಉತ್ಸಾಹ. ಪೂಜ್ಯ ಮಾತಾಜಿಯವರ ಮತ್ತು ಗುರೂಜಿಯವರ ಪ್ರವಚನಗಳನ್ನು ಕೇಳಿದ ಅವರಿಗೆ ಒಳ್ಳೆಯ ಸಂಸ್ಕಾರವಾಗಿತ್ತು. ಪ್ರವಚನದ ಸೂಕ್ಷ್ಮತತ್ತ್ವಗಳನ್ನು ಗ್ರಹಿಸಿಕೊಂಡ ಕೆಲವು ಮಕ್ಕಳು ಕೊಟ್ಟ ಉತ್ತರದಿಂದ ನಮಗೆಲ್ಲಾ ಅತ್ಯಾಶ್ಚರ್ಯವಾಯಿತು. ಸಂಕೇತಗಳ ವಿವರಣೆ ಬಾಲಕ ಗೌರಿಶಂಕರನಿಂದ ಪ್ರಾರಂಭವಾಯಿತು. ಅವನ ಕಣ್ಣಿಗೆ ಮೊದಲು ಬಿದ್ದುದು ಬಸವಣ್ಣನವರ ಭಾವಚಿತ್ರ. "ಬೆಳಗಿನ ಜಾವ ಎದ್ದ ತಕ್ಷಣ ನಾವು ಗುರುಗಳ, ಸಂತರ ಭಾವ ಚಿತ್ರಕ್ಕೆ ವಂದಿಸಬೇಕು ಮತ್ತು ಅವರು

ನಡೆದ ಹಾದಿಯಲ್ಲಿಯೇ ನಾವೂ ನಡೆಯಬೇಕು ಎಂಬುದನ್ನು ಮನನ ಮಾಡಿಕೊಳ್ಳುತ್ತ ಮುಂದಿನ ಚಟುವಟಿಕೆಗಳನ್ನು ಪ್ರಾರಂಭಿಸಬೇಕು ಎನ್ನುವುದನ್ನು ಆ ಫೋಟೋ ತಿಳಿಸುತ್ತೆ" ಎಂದ. ನಂತರ ಬಾಲಕಿ ವಾಣಿಯ ಸರದಿ. "ನೋಡಿ ಅಕ್ಕಾವ್ರೆ ಆ ಮೂಲೆಯಲ್ಲಿ ಒಂದು ಪೊರಕೆ ಇದೆ. ಕಸ ಗುಡಿಸಿ ಕೋಣೆಯನ್ನು ಸ್ವಚ್ಛವಾಗಿಡಲಿಕ್ಕೆ ಅದನ್ನು ಉಪಯೋಗಿಸುವೆವು. ಹಾಗೆಯೇ, ನಾವೆಲ್ಲ ಚಿಕ್ಕವಯಸ್ಸಿನಿಂದಲೇ, ದುಶ್ಚಟ ದುರ್ಗುಣಗಳನ್ನೆಲ್ಲ ನಮ್ಮ ಮನಸ್ಸಿನಿಂದ ಗುಡಿಸಿ ಹಾಕಬೇಕು ಎಂದು ಸೂಚಿಸುತ್ತೆ" ಎಂದಳು ವಾಣಿ.

"ಈಗ ನಾನ್ಹೇಳ್ತಿನಿ ಅಕ್ಕಾವರೆ, ಕಿಟಕಿ ಈ ರೂಮಿಗೆ ಬೆಳಕನ್ನು, ಗಾಳಿಯನ್ನು ಹೇಗೆ ಒಳಗೆ ಬರಲು ಬಿಡುವುದೋ, ಹಾಗೆಯೇ ನಾವು ಗುರುಗಳ ಪ್ರವಚನ ಮತ್ತು ಶಾಲೆಯ ಗುರುಗಳು ಹೇಳುವ ನೀತಿ ಮಾತು ಮತ್ತು ಬುದ್ಧಿವಾದಗಳನ್ನು ನಮ್ಮ ಕಿವಿಗಳ ಮೂಲಕ ಒಳಗೆ ಬಿಡಬೇಕು. ನಾನ್ಹೇಳಿದ್ದು ಸರಿಯಾ' ಮಧುಮೋಹನನ ವಿವರಣೆ. 'very good' ನ್ನು ಮಂಜುಳಕ್ಕನಿಂದ ಪಡೆದೂ ಆಯಿತು.

ಅಷ್ಟರಲ್ಲಿ ಗೌರೀಶಂಕರ, "ಅಲ್ಲಿ ಟ್ಯೂಬ್‌ಲೈಟ್ ಇದೆ. ಅದು ತಾನಾಗಿಯೆ ಹತ್ತೋಲ್ಲ. ನಾವು ಇಲ್ಲಿರುವ ಸ್ವಿಚ್‌ನ್ನು ಒತ್ತಿದಾಗ ಟ್ಯೂಬ್‌ಲೈಟ್ ಹತ್ತುತ್ತೆ' ಎಂದು ಹೇಳಿ ಸುಮ್ಮನಾದ. 'ಸರಿ, ಇದರಿಂದ ನೀನೇನು ಪಾಠಕಲೀತಿಯಾ ಯೋಚಿಸಿ ಹೇಳು' ಎಂದು ಮಂಜುಳಕ್ಕ ಕೇಳಿದಾಗ, ಅವನು, "ನಾವು ಪುಸ್ತಕಗಳನ್ನು ಎದುರಿಗಿಟ್ಟುಕೊಂಡು, ಅದರಲ್ಲಿರುವ ಜ್ಞಾನ ನಮ್ಮ ತಲೆಗೆ ಬರಲಿ, ಬರಲಿ ಅಂತ ಹೇಳುತ್ತಿದ್ದರೆ ಬರೋಲ್ಲ. ಪುಸ್ತಕ ತೆರೆದು, ಓದಿ ಅರ್ಥಮಾಡಿಕೊಂಡಾಗಲೇ ನಮಗೆ ಜ್ಞಾನ ಉಂಟಾಗುವುದು. ಪುಸ್ತಕ ತೆರೆದು ಓದೋದು ಅಂದ್ರೆ ನಮ್ಮ ತಲೆಗೆ ಸ್ವಿಚ್ ಹಾಕಿದ ಹಾಗೆ" ಎಂದ. ಅವನ ಉತ್ತರದಿಂದ ಅವನ ಸಂಸ್ಕಾರದ ಮಟ್ಟವನ್ನು ತಿಳಿದು ಎಲ್ಲರೂ ಬೆರಗಾದೆವು. ಅದುವರೆಗೂ ಸುತ್ತ ಮುತ್ತ ನೋಡುತ್ತಿದ್ದ ಮಧುಮೋಹನನ ಕೂಗಾಟ. "ಹಾ! ಅಲ್ಲಿ, ಆ ಕ್ಯಾಲೆಂಡರ್ ಇದೆಯಲ್ಲಾ ಅದು ದಿನಾಂಕ, ದಿನಗಳನ್ನು ತಿಳಿಸುತ್ತೆ. ಆಗಲೇ ಜನವರೀನೂ ಮುಗೀತಾ ಬಂತು. ಪರೀಕ್ಷೆ ಹತ್ತಿರ ಬಂತು ಅಂತ ನಮ್ಮನ್ನೆಲ್ಲಾ ಎಚ್ಚರಿಸುತ್ತೆ" ಎಂದ. ಅದನ್ನೇ ಮುಂದುವರೆಸುತ್ತಾ ವಾಣಿ, "ಅಷ್ಟೇ ಅಲ್ಲಪ್ಪಾ, ನಾಡಹಬ್ಬಗಳನ್ನು, ರಾಷ್ಟ್ರೀಯ ರಜಾದಿನಗಳನ್ನು ಕೆಲವರು ದೊಡ್ಡವರ, ಸಂತರ ಜಯಂತಿಗಳನ್ನು ನೆನಪು ಮಾಡಿಕೊಡುತ್ತೆ. ಅಷ್ಟೇ ಅಲ್ಲದೆ ನಾವು ಅವುಗಳನ್ನು ತಪ್ಪದೆ ಆಚರಿಸಬೇಕು. ಶರಣರ, ಮಹಾತ್ಮರ ಜೀವನ ಚರಿತ್ರೆ, ಅವರು ಜಗತ್ತಿಗೆ ಕೊಟ್ಟ ಸಂದೇಶ-ಇವುಗಳನ್ನು ತಿಳಿದುಕೊಳ್ಳಬೇಕು. ಮೊನ್ನೆ ನಾವು ಶ್ರೀ

Digitalized by e-Sahithya Documentation Forum
Sponsored by Sarayu Foundation Trust

ಸಿದ್ಧರಾಮೇಶ್ವರರ ಜಯಂತಿಯನ್ನು ಸಂಕ್ರಾಂತಿ ದಿನ ಆಚರಿಸಲಿಲ್ಲವಾ ಹಾಗೆ" ಎಂದಳು.

ನಂತರ ರೇಣುಕಾರಾಧ್ಯನು, "ಅಕ್ಕಾವ್ರೆ, ನಾನು ಒಂದು ವಿಷಯ ಹೇಳ್ತೀನ್ರಿ, ಆ ಗಡಿಯಾರಾನೂ ನಮಗೆ ಒಳ್ಳೆ ಪಾಠ ಕಲಿಸುತ್ತೆ. quotations ಬೋರ್ಡ್ ಮೇಲೆ ಒಂದಿನ ವೇಳೆಯ ಬಗ್ಗೆಯೇ ಬರೆಯಲಾಗಿತ್ತು. ತಾಳ್ರಿ ನೆನಪು ಮಾಡಿ ಕೊಳ್ತೀನಿ. ನೀವ್ಯಾರೂ ಹೇಳಬೇಡ್ರಿ ಮತ್ತೆ ಅದೇನದೂ......" ತಲೆಸವರಿ ಕೊಳ್ಳುತ್ತಾ .... "ಹಾ... ನೆನಪಾಯಿತು. time and...... ಛೇ... ಪುನಃ ಮರೆತು ಹೊಯ್ತಲ್ಲ......" ಪಕ್ಕದಲ್ಲೇ ಕುಳಿತಿದ್ದ ರಘು, 'time and tide wait for none' ಕೂಗಿದಾಗ ರೇಣುಕನಿಗೆ ಅಸಾಧ್ಯಕೋಪ. "ನಾನು ಹೇಳುವಷ್ಟರಲ್ಲಿ ನೀನ್ಯಾಕೋ ಹೇಳ್ದೆ!" ಎಂದು ಹುಸಿ ಮುನಿಸಿನಿಂದ ಬೈದು ನಂತರ, "ಅದಕ್ಕೇ ..... ನಾವು ವೇಳೆಗೆ ಸರಿಯಾಗಿ ಓದಬೇಕು, ಹೋಂವರ್ಕ್ ಮಾಡಬೇಕು. ವೇಳೆ ನಮಗಾಗಿ ಕಾಯೋಲ್ಲ ಎನ್ನುವ ಪಾಠ ಕಲೀತೀವಿ" ಎಂದ. ಮಧ್ಯೆ ಮಧ್ಯೆ ಚಪ್ಪಾಳೆಗಳ ಸದ್ದು.

'ಹೂಂ. ಇನ್ನೇನು ತೋಚುತ್ತೆ ಹೇಳ್ರಿ' ಎಂದಾಗ, ಮೃತ್ಯುಂಜಯ ಮೆಲ್ಲನೆ ಹೇಳಿದ, 'ಈ ರೂಮಿಗೆ ಒಂದು ಬಾಗಿಲು ಇದೆ. ಕಳ್ಳರು ಬರಬಾರದೆಂದು ರಾತ್ರಿವೇಳೆ ನಾವು ಬಾಗಿಲನ್ನು ಮುಚ್ಚಿಕೊಂಡು ಮಲಗುವೆವು. ಇದನ್ನು ಯಾವುದಕ್ಕೆ ಹೋಲಿಸ ಬಹುದು ಎಂದರೆ ಕೆಟ್ಟ ಮಾತುಗಳು, ಚಾಡಿ ಮಾತುಗಳು ಮುಂತಾದ ಕಳ್ಳರನ್ನು ಒಳಗೆ ಬಿಡದಂತೆ ಕಿವಿ ಮುಚ್ಚಿಕೊಳ್ಳಬೇಕು.' ಎಂದು ನಿಲ್ಲಿಸಿದ. ಆಗ ವಾಣಿ, 'ಅಷ್ಟೇ ಅಲ್ಲ ಅಕ್ಕೋರೆ. ಒಳ್ಳೆಯವರು, ಸ್ನೇಹಿತರು ಬಂದಾಗ ಬಾಗಿಲು ತೆರೆದು ಒಳಗೆ ಬನ್ನಿ ಎಂದು ಕರೀತಿವಿ. ನಂತರ ಮೂಲೆಯಲ್ಲಿ ಚಾಪೆ ಇದೆಯಲ್ಲ ಅದನ್ನು ಹಾಸಿ ಬಂದವ ರನ್ನು ಉಪಚರಿಸುವೆವು.'

ಇದನ್ನು ಯಾವುದಕ್ಕೆ ಹೋಲಿಸಬಹುದಮ್ಮಾ' ಎಂದು ಕೇಳಿದಾಗ ಕುಶಾಗ್ರ ಮತಿ ವಾಣಿ ಯೋಚಿಸಿ ನುಡಿದಳು, 'ಪ್ರವಚನ, ನೀವು ಹೇಳುವ ನೀತಿ ಕಥೆಗಳು ಮತ್ತು ನಾವು ಓದುವ ಪುಸ್ತಕಗಳು ಇವೆಲ್ಲ ಒಳ್ಳೆ ಸ್ನೆಹಿತರಿದ್ದಂತೆ. ಅವುಗಳಿಂದ ಪಡೆದ ಜ್ಞಾನವನ್ನು ನಾವು ಉಪಚಾರ ಮಾಡ್ತೀವಿ ಅಂದರೆ ಯಾವಾಗಲೂ ನೆನಪು ಮಾಡಿಕೊಂಡು ಮತ್ತೆ........ಅದೇನದು ಅಪ್ಪಾಜಿಯವರು ಪ್ರವಚನದಲ್ಲಿ ಹೇಳಿದ್ರಲ್ಲಾ ....ತಾಳ್ರಿ ಹೇಳ್ತೀನಿ. ಗ್ರಹಣ, ಮನನ,....ಹ್ಞಾ ನಿದಿಧ್ಯಾಸ. ಹಾಗೆ ಅದಕ್ಕೆ ಉಪಚಾರ ಮಾಡಿ ನಮ್ಮಲ್ಲೇ ಉಳಿಸಿಕೊಂಡು ಬಿಡ್ತೀವಿ. ಕೆಟ್ಟ ವಿಷಯಗಳನ್ನು ಮಾತ್ರ ನಾವು ಒಳಗೆ ಬಿಡೋದೆ ಇಲ್ಲಪ್ಪಾ' ಎಂದು ಹೇಳಿ ವಾಣಿ ನಿಲ್ಲಿಸಿದಾಗ ಆಶ್ರಮ ವಾಸಿಗಳೆಲ್ಲ ಬೆರಗುವೊಡೆದಿದ್ದರು. ಪಾರ್ವತಮ್ಮನವರು, 'ಸೈ ಬಿಡವ್ವಾ ವಾಣಿ,

ಎಂಥಾ ಚಂದಾಗಿ ಹೇಳ್ತಾಳಲ್ಲ. ಇನ್ನೇನು ಆಕೀನ ಪ್ರವಚನ ಹೇಳಾಕೆ ಹೆಚ್ಚಾಣ ಬಿಡ್ರಿ' ಎಂದರು.

ಮಕ್ಕಳ ವಿವರಣೆ ಅಷ್ಟಕ್ಕೆ ನಿಲ್ಲಲಿಲ್ಲ. ರೇಣುಕಾ ರಾಗ ಎಳೆದ, 'ಅಕ್ಕೋರೆ, ಆ ಶೆಲ್ಫಿನ ಬಗ್ಗೆ ನಾನ್ಹೇಳ್ತೀನ್ರಿ. ಶೆಲ್ಫ್‌ಗಳಲ್ಲಿ ವಿವಿಧವಸ್ತುಗಳನ್ನು, ಬಟ್ಟೆ, ಪುಸ್ತಕ ಎಲ್ಲಾ ಜೋಡಿಸಿಟ್ಟಿದ್ದೀರಿ. ನಮ್ಮ ರೂಮಲ್ಲಿ ಶೆಲ್ಫ್‌ಗಳಿದ್ದರೂ ನಮ್ಮ ವಸ್ತುಗಳನ್ನು, ಆ ಕಡೆ, ಈ ಕಡೆ ಚೆಲ್ಲಾಪಿಲ್ಲಿಯಾಗಿ ಎಸೆದಿರುತ್ತೇವೆ. ಇದನ್ನು ನೋಡಿ ನಾವು ಶಿಸ್ತಿನ 'ಪಾಠವನ್ನು ಕಲೀತೀವಿ'.

'ಅಕ್ಕೋರೆ, ಅಕ್ಕೋರೆ ನಾನೂ ಹೇಳ್ತೀನ್ರಿ! ಕೂಗಿಕೊಂಡ ರಘು. ಅವನು ಅತೀ ಉತ್ಸಾಹೀ ಬಾಲಕ. ತನಗೇನಾದ್ರೂ ಹೊಳೆಯಿತೆಂದರೆ ಕೂಗಿಕೊಂಡೇ ಹೇಳುವುದು ....ಅವನ ಸ್ವಭಾವ. 'ಈ ರೂಮಿನ ಒಂದು ಮೂಲೆಯಲ್ಲಿ ಪೂಜೆಗೆ ಜೋಡಿಸಲಾಗಿದೆ. ಅದನ್ನು ನೋಡಿದಾಗ-ದಿನಾಬೆಳಿಗ್ಗೆ ಮತ್ತು ಸಾಯಂಕಾಲ ಪೂಜೆ, ಪ್ರಾರ್ಥನೆ, ಜಪ ಮಾಡಬೇಕೂಂತ ಅದು ನಮಗೆ ನೆನಪು ಮಾಡಿಕೊಡುವುದು. ಹಾಗೆ ಮಾಡಿದ್ರೆ ದೇವರು ನಮಗೆಲ್ಲಾ ಒಳ್ಳೆ ಬುದ್ಧಿ ಕೊಡ್ತಾನೆ. ಅಂತ ಮಾತಾಜಿಯವರು ಹೇಳಿ ದ್ದಾರೆ.'

ಆ ದಿನ ಭಾನುವಾರವಾದ್ದರಿಂದ ತಮ್ಮ ಮಗನನ್ನು ನೋಡಿಕೊಂಡು ಹೋಗಲು ಬಂದಿದ್ದ ಓರ್ವ ತಾಯಿಯವರು, 'ಇವತ್ತು ನಮ್ಮ ಕಿವಿಗೆ ಒಳ್ಳೆ ಹಬ್ಬದ ಔತಣ ಆಯಿತಪ್ಪ. ಮಕ್ಕಳಿಗೆಲ್ಲಾ ಎಷ್ಟು ಒಳ್ಳೆ ತರಬೇತಿ ಆಗಿಬಿಟ್ಟಿದೆ. ನಮಗೆ ಈ ರೀತಿ ಉತ್ತರಾನೇ ಹೇಳ್ಲಿಕ್ಕೆ ಗೊತ್ತಾಗೋಲ್ಲ.' ಎಂದರು. ರಘು ಸುಮ್ಮನಿರಲಿಲ್ಲ, 'ರೀ, ನೀವು ನಮ್ಮ ಹಾಗೆ ಪ್ರವಚನ ಕೇಳ್ರಿ. ಉತ್ತರ ಕೊಡಲಿಕ್ಕೆ ನಿಮಗೂ ಬರುತ್ತೆ' ಎಂದ.

ತಾನೇನೂ ವಿವರಣೆ ಕೊಡಲಾಗಲಿಲ್ಲವಲ್ಲ ಎಂದುಕೊಂಡು ಸಪ್ಪೆ ಮೋರೆಯಿಂದ ಕುಳಿತಿದ್ದ ಸುಧೀರ್ ನಾಯರ್ ಮೇಲೆದ್ದು ಆಚೀಚೆ ಓಡಾಡುತ್ತ, ಮೇಲೆ ಕೆಳಗೆ, ಸುತ್ತಲೂ ನೋಡತೊಡಗಿದ. ಏನು ಹೊಳೆಯಿತೋ ಏನೋ ಅತ್ಯುತ್ಸಾಹದಿಂದ ಓಡಿಬಂದು ಇಂಗ್ಲಿಷ್‌ನಲ್ಲಿ ಹೇಳತೊಡಗಿದ. (ಕೇರಳದವನಾದ್ದರಿಂದ ಅವನಿಗೆ ಕನ್ನಡ ಸರಿಯಾಗಿ ಬರುವುದಿಲ್ಲ)

'Sister, I will also try to explain something, Look at that spider. It weaves beautiful webs suppose it is destroyed, it weaves another web. If that one also gets damaged. it weaves

Digitalized by e-Sahithya Documentation Forum
Sponsored by Sarayu Foundation Trust

a new one again. Like that it busies itself in weaving many a web in its life-span. It teaches us a lesson too, sister. To illustrate, I am very weak in Kannada. I have never scored good marks in it. In some tests, I could not secure even passing marks. But I was never and would never be disappointed. I always prepare earnestly for the next test. Thus spider teaches us that one should not be disheartened if he fails in his attempts and one must try again and again. Am I right, sister ?' ಎಂದು ಹೇಳಿ ಸುಧೀರ್ ನಿಲ್ಲಿಸಿದಾಗ, ವಾಣಿ, 'ನನಗೆ ನಮ್ಮ ತಂದೆಯವರು ಯಾವಾಗಲೂ ಹೇಳುತ್ತಿದ್ದ ಮಾತು ನೆನಪಿಗೆ ಬರುತ್ತದೆ-'ಮರಳಿ ಯತ್ನವ ಮಾಡು, ಮರಳಿ ಯತ್ನವ ಮಾಡು ? ಎಂದಳು. ಆಗ ಸುಧೀರ್ 'ಕರೆಕ್ಟ್', ಕರೆಕ್ಟ್ ವಾಣಿಯಕ್ಕೋರೆ, ನೀವು ಸರಿ ಹೇಳಿದ್ರಿ ಎಂದ. ಮಾನವ ಜೀವನದಲ್ಲಿ ಪ್ರಗತಿಸಾಧಿಸಲು ಬೇಕಾದ ತಾತ್ವಿಕ ಕಿವಿಮಾತನ್ನೇ ಹೇಳಿದಂತಾಯಿತು. ಅವನು ಹೇಳಿದ್ದನ್ನು ಬಿಡಿಸಿ ಹೇಳಿದಾಗ ನಮ್ಮ ಆಶ್ರಮದವರು ಮೂಗಿನ ಮೇಲೆ ಬೆರಳನ್ನಿಟ್ಟುಕೊಂಡರು. ಅತ್ಯಂತ ಸಂತಸದಿಂದ ಮಂತ್ರಮುಗ್ಧರಾಗಿ ಕುಳಿತಿದ್ದರು. ಹಾಸ್ಯ ಸ್ವಭಾವದ ಸುಶೀಲಮ್ಮನವರು, "ಸೈ ಬಿಡ್ರಿ. ನಿಮ್ಮ ಸಾಲಿ ಮಕ್ಕಳು ಭಾರೀ ಶಾಣೇ ಆದಾರ. ನಾವೆಲ್ಲಾ ಮುದುಕರಾಗಾಕ ಹತ್ತೇವಿ. ನಮಗೆ ಇಂಥಾ ಒಂದು ಮುತ್ತಿನಂಥ ಮಾತು ಗೊತ್ತೇ ಇರಲಿಲ್ಲ. ನಮಗೆಲ್ಲಾ ಭೋ ಖುಷಿಯಾತಪ್ಪ ಅಂತೂ ಮಾತಾಜಿಯೋರು ಇಂಥ ಗುರೀನೆ ಇಟ್ಟಕಂಡು ಸಾಲಿ ತೆರದದ್ದು ಖರೇನೆ ಆಯ್ತು."

ಅಂದು ಎಲ್ಲರ ಹೃದಯ ಆನಂದದಿಂದ ಭಾರವಾಗಿತ್ತು. ನಮ್ಮ ಶಾಲೆಯ ಮಕ್ಕಳು ಬರೀ ವಿದ್ಯಾವಂತರಾಗುವುದಲ್ಲದೆ, ಈ ರೀತಿ ಸದ್ಗುಣಿಗಳೂ, ಬುದ್ಧಿವಂತರೂ ಆಗಿ, ಭಾರತದ ಒಳ್ಳೆಯ ಪ್ರಜೆಗಳಾದರೆ ಸಾಕು—ಎಂಬ ಉದ್ಗಾರ ಕೇಳಿಬರುತ್ತಿತ್ತು.

ನಗೆ-ಹನಿ

ಬರುಡೆ ಬಲದೇವ – ಕ್ಷೌರಕ್ಕೆ ಎಷ್ಟು ದುಡ್ಡು ?
ಕ್ಷೌರಿಕ – ಹನ್ನೆರಡಾಣೆ.
ಬರುಡೆ ಬಲದೇವ – ಷೇವಿಗೆ ಎಷ್ಟು ದುಡ್ಡು ?
ಕ್ಷೌರಿಕ – ನಾಲ್ಕಾಣೆ,
ಬರುಡೆ ಬಲದೇವ – ಹಾಗಾದರೆ ನನ್ನ ತಲೇನೆ ಷೇವ್ ಮಾಡು.

ಮಹಾಶಿವರಾತ್ರಿ–ಅರ್ಥ ಮತ್ತು ಆಚರಣೆ

— ಜಗದ್ಗುರು ಮಾತೆ ಮಹಾದೇವಿ

ಭರತಭೂಮಿಯು ಪ್ರಾಗೈತಿಹಾಸಿಕ ಕಾಲದಿಂದಲೂ ಧರ್ಮಭೂಮಿ ಎಂದು ಕೀರ್ತಿವೆತ್ತ ನಾಡಾಗಿದೆ. ಯಾವುದೇ ಜಾತಿಮತ ಪಂಥ ಭಾಷೆಗಳ ಸೀಮೆಗೊಳಪಡದೆ ಸಮಸ್ತ ಹಿಂದೂಗಳು ಅಖಂಡ ಭಾರತದಲ್ಲಿ ಆಚರಿಸುವ ಏಕಮೇವಾದ್ವಿತೀಯ ಹಬ್ಬವೆಂದರೆ ಮಹಾಶಿವರಾತ್ರಿ. ಆಯಾ ಜನಾಂಗಗಳವರು ತಮ್ಮ ಕುಲದೇವರುಗಳೆಂದು ಕೆಲವು ವಿಭೂತಿ ಪುರುಷರನ್ನು ಆರಾಧಿಸಿದರೆ, ವಿಭಿನ್ನ ಎಲ್ಲ ಪರಂಪರೆಗಳ ಸಮಾನ ಗೌರವಕ್ಕೆ ಪಾತ್ರನಾಗಿದ್ದಾನೆ, ಮಹಾಯೋಗಿ ಮಹಾದೇವ.

ಉಳಿದೆಲ್ಲ ಹಬ್ಬಗಳು ವೈಭವ, ಸಡಗರ, ವಿಶೇಷ ಊಟ-ಉಡುಗೆಗಳಿಂದ ವಿಶೇಷಿತವಾಗಿದ್ದರೆ ಶಿವರಾತ್ರಿಯು ಸರಳತೆ, ಸಂಯಮ, ಅಂತರ್ಮುಖತೆ, ಸಾತ್ವಿಕತೆಗಳ ಪ್ರತೀಕ. ಶ್ರದ್ಧೆ-ನಿಷ್ಠೆಗಳಿಂದ ಪ್ರತಿವರ್ಷವೂ ಆಚರಿಸಲ್ಪಡುವ ಮಹಾಶಿವರಾತ್ರಿ ಬರುವುದು ಮಾಘ ಕೃಷ್ಣ ಚತುರ್ದಶಿಯಂದು. (ಈ ವರ್ಷ ಮಾರ್ಚ್ ೪ರಂದು ಬರಲಿದೆ) ಈ ಹಬ್ಬದ ವಿಶೇಷ ಆಚರಣೆ ಉಪವಾಸ, ಜಾಗರಣೆ ಮತ್ತು ಅರ್ಚನೆ. ಉಪವಾಸವೆಂದರೆ ನಿರಾಹಾರವೆಂಬುದು ಒಂದು ಅರ್ಥ. ಎರಡನೆಯದು 'ಸಮೀಪದಲ್ಲಿ ವಾಸ' ಎಂಬರ್ಥ. ದಿನ ನಿತ್ಯ ತುಂಬುವ, ಎಷ್ಟು ತುಂಬಿದರೂ ಖಾಲಿಯಾಗುತ್ತಲೇ ಇರುವ ತುತ್ತಿನ ಚೀಲದ ಜಂಜಡದಿಂದ ವಿಮುಖನಾಗಿ, ತನ್ನ ಶಕ್ತಿಯನ್ನು ದೇವನತ್ತ ಕೇಂದ್ರೀಕರಿಸುವುದು ಈ ಉಪವಾಸದ ಉದ್ದೇಶ. ಕೇವಲ ನಾಲಿಗೆಯೊಂದನ್ನೇ ನಿರಾಹಾರದಿಂದಿಟ್ಟರಲ್ಲ, ಉಳಿದ ಇಂದ್ರಿಯಗಳನ್ನೂ ತಂತಮ್ಮ ಆಹಾರಗಳಿಂದ ವಿಮುಖಗೊಳಿಸಬೇಕು.

(ಆದರೆ ನಮ್ಮಲ್ಲಿ ಬಹುಪಾಲು ಜನ ಉಪ್ಪಿಟ್ಟು, ಬಾಳೆಹಣ್ಣು ಇತ್ಯಾದಿ ಭುಂಜಿಸಿ ಉಪವಾಸ ಎಂಬುದು, ಎಂದಿಗಿಂತಲೂ ಹೆಚ್ಚಿನ ವೈವಿಧ್ಯಮಯ ತಿಂಡಿಗಳನ್ನು ಅಂದು ಮಾಡಿ ಉಣ್ಣುವುದು ಉಪವಾಸದ ವಿಪರ್ಯಾಸ. ಅಲ್ಲದೇ ಎಂದೂ ಅಷ್ಟೊಂದು ಕಾಡದಿರುವ ಹೊಟ್ಟೆ ಅಂದೇ ಹೆಚ್ಚು ರಚ್ಚೆ ಹಿಡಿಯುವುದು ಮತ್ತೊಂದು ವಿಶೇಷ) "ಜಾಗರಣೆ" ಎಂದರೆ ನಿದ್ರಿಸದೆ ಎಚ್ಚರವಿರುವುದು. ಅದರ ಹಿನ್ನೆಲೆಯೂ ಸಹ, ಇಡೀ

Digitalized by e-Sahithya Documentation Forum
Sponsored by Sarayu Foundation Trust

ರಾತ್ರಿ ಧ್ಯಾನ-ಜಪ-ತಪಗಳಲ್ಲಿ ಕಳೆಯಬೇಕೆಂಬುದು ! ಇದರ ಲಕ್ಷ್ಯಾರ್ಥ ಆತ್ಮಜಾಗೃತಿ. ತನು, ಮನ, ವಾಕ್ಕು, ಬುದ್ಧಿ, ಆತ್ಮಗಳೆಲ್ಲವನ್ನೂ ಜಾಗೃತವಾಗಿರಿಸಿಕೊಂಡು ದೇವನ ಧ್ಯಾನದಲ್ಲಿ ತೊಡಗಬೇಕೆಂಬುದು. ಬರಿ ಎಚ್ಚರವಿದ್ದರಲ್ಲ, ಜಾಗೃತವಿದ್ದು ಅರ್ಚನೆಯಲ್ಲಿ ನಿರತನಾಗಬೇಕೆಂಬುದು ಮತ್ತೊಂದು ಉದ್ದೇಶ. ಹೀಗೆ ಒಟ್ಟಾರೆ ಶಿವರಾತ್ರಿಯ ಆಚರಣೆ ಕೇವಲ ರೂಢಿಗತ ಹಬ್ಬವಷ್ಟೇ ಅಲ್ಲ, ಮಾನವನನ್ನು ನೈತಿಕ ಮತ್ತು ಆತ್ಮಿಕವಾಗಿ ಮೇಲೆತ್ತುವ 'ಆತ್ಮ ಶುದ್ಧಿಯ ದಿನ'; ಸೃಷ್ಟಿಯು ಹಳತನ್ನು ಕಳಚಿ ಹೊಸತನ್ನು ಹೊರುವಂತೆ, ತನ್ನನ್ನು ತಾನು ಪುನರ್ಜಾತನನ್ನಾಗಿ ಮಾಡಿಕೊಂಬ ಆತ್ಮ ದೈಸಿರಿಯ ಹಬ್ಬ, ಉಳಿದವುಗಳಂತೆ ಕಾಯದೈಸಿರಿಯ ಹಬ್ಬವಲ್ಲ.

'ಶಿವ' ಶಬ್ದದ ಬಳಕೆ

'ಶಿವ' ಎಂಬ ಈ ಶಬ್ದವು ಎರಡು ಅರ್ಥದಲ್ಲಿ ಬಳಕೆಯಾಗುತ್ತಿದೆ. 1. ಯೋಗಿವರೇಣ್ಯ ಶಿವ. 2. ಪರಾತ್ಪರ ಪರವಸ್ತು ಪರಬ್ರಹ್ಮ. ಪರವಸ್ತುವನ್ನು ಅರ್ಚಿಸಿ, ಸ್ತುತಿಸಿ, ಚಿಂತಿಸಿ, ಧ್ಯಾನಿಸಿ, ಅನುಭವಿಸಿ ಅಂದಿನ ಹಗಲು-ರಾತ್ರಿಗಳನ್ನು ದಿವ್ಯವಾಗಿ ಕಳೆಯಬೇಕೆಂಬುದು ಶಿವರಾತ್ರಿ (Divine Night)ಯ ತಾತ್ತ್ವಿಕ ಸಂಕೇತವಾದರೆ, ಅದಕ್ಕೆ ಐತಿಹಾಸಿಕ ಅರ್ಥ ಮತ್ತು ಆಚರಣೆ ಬಂದುದು ಯೋಗಿರಾಜ ಶಿವನ ಸಂಬಂಧದಲ್ಲಿ. ಹೇಗೆ ಗಾಂಧೀಜಿಯ ಪುಣ್ಯ ತಿಥಿಯನ್ನು ಹುತಾತ್ಮರ ಆಚರಣೆಯನ್ನಾಗಿ, ರಾಧಾಕೃಷ್ಣನ್ನರ ಜಯಂತಿಯನ್ನು ಶಿಕ್ಷಕರ ದಿನಾಚರಣೆಯನ್ನಾಗಿ ಆಚರಿಸುತ್ತೇವೋ ಹಾಗೆ ಮಹಾಯೋಗಿ ಶಿವನ ತಪಸ್ಸಾಧನೆಯ ದಿನವನ್ನು ಶಿವರಾತ್ರಿಯನ್ನಾಗಿ ಆಚರಿಸುತ್ತೇವೆ.

ಹಲವಾರು ಪುರಾಣಗಳನ್ನು ಓದಿದಾಗ ನಾನು ಸಂಗ್ರಹಿಸಿದ ಕೆಲವು ವಿಚಾರಗಳಿವು. ಶಿವನು ಕಾಲ್ಪನಿಕ ಪೌರಾಣಿಕ ದೇವತೆಯಲ್ಲ. ಅವನೊಬ್ಬ ಐತಿಹಾಸಿಕ ಯುಗ ಪುರುಷ. ಇತಿಹಾಸ, ಬರವಣಿಗೆಯ ಆರಂಭಕ್ಕೂ ಮೊದಲಿಗೆ ಕೀರ್ತಿವೆತ್ತ ಈ ಮಹಾವಿಭುವು ಭಾರತೀಯ ಸಂಸ್ಕೃತಿಯಲ್ಲೇ ಅವಿನಾಶಿಯಾದಂತಹ ತನ್ನ ಸಾರ್ವಭೌಮತ್ವ ಸ್ಥಾಪಿಸಿರುವ, ಹರಪ್ಪಾ-ಮೊಹೆಂಜೋದಾರೊ ಕಾಲದಲ್ಲೇ ಏಕಮೇವಾದ್ವಿತೀಯ ಆರಾಧ್ಯ ವಸ್ತುವಾಗಿದ್ದ. ಗೌರಿಶಂಕರ ಶಿಖರವನ್ನೇ ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡು ರಾಜಕೀಯ ಸಾರ್ವಭೌಮತ್ವದೊಡನೆ ಧಾರ್ಮಿಕ ಪರಮೋಚ್ಚಸ್ಥಾನ ಗಳಿಸಿದ್ದ. ಈ ಮಹಾದೇವನು ಜಗತ್ತಿನ ಇತಿಹಾಸದಲ್ಲಿ ನಮಗೆ ಕಾಣಸಿಗುವ ಮೊಟ್ಟ ಮೊದಲ ಯೋಗಿ. ತನ್ನ ಯೋಗ ಸಾಮರ್ಥ್ಯದಿಂದಲೇ ಈ ಯೋಗಿರಾಜನು ಹಿಮಮಯ ಪರ್ವತಗಳಲ್ಲಿ ದಿಗಂಬರನಾಗಿಯೇ ಇರಬಲ್ಲವನಾಗಿದ್ದ. (ನಿಸರ್ಗದ ಬದಲಾವಣೆ ದೃಷ್ಟಿಯಿಂದ ಅಂದು ಅದು ಶೀತಲ ಪ್ರದೇಶವಾಗಿಲ್ಲದಿರ

ಬಹುದು) ಇನ್ನು ಪ್ರತಿಭೆಯ ದೃಷ್ಟಿಯಿಂದ ನೋಡಿದಾಗ ಅವನು ನಾದಯೋಗಿ, ನಾದಲೋಲ. ನೃತ್ಯ ಕಲೆಯಲ್ಲಿ ಅದ್ಭುತ ಸಾಮರ್ಥ್ಯ ಹೊಂದಿದವನಷ್ಟೇ ಅಲ್ಲದೇ, ಆದಿ ನಾಟ್ಯಾಚಾರ್ಯ. ಇವನ ಮನೋಹರ, ಲೀಲಾವಿನೋದ ನರ್ತನದಿಂದ ಸೃಷ್ಟಿಯ ಪ್ರಣಯಕ್ಕೆ ಸ್ಫೂರ್ತಿ, ರುದ್ರಭೈರವ ಉಗ್ರ ನೃತ್ಯದಿಂದ ಸೃಷ್ಟಿನಾಟಕಕ್ಕೆ ಪ್ರಳಯದ ತೆರೆ ಎಂಬ ಭಾವ ಮೂಡಿದ್ದರೆ ತಪ್ಪೇನು ! ಇಂತಹ ಮಹಾದೇವನು 'ಭೋಳಾ ಶಂಕರ' ಅಂದರೆ ಸಾತ್ವಿಕನು. ವಂಚನೆ, ಕ್ರೋಧ ಸೋಂಕದ ನಿರಂಜನನು. ತನ್ನಾಶ್ರಯಿಸಿದ ಸದ್ಭಕ್ತರಿಗೆ ತನ್ನನ್ನೇ ಅರ್ಪಿಸುವ ಮಾತೃ ಹೃದಯಿ, ನೆಪ ತೆಗೆದು ಯಾರನ್ನೇ ವಧಿಸಲು ಹಾತೊರೆವವನಲ್ಲ. ಮೂಢ-ಮೂರ್ಖ-ಕುಂಟ-ಕುಂಟ ಮಕ್ಕಳನ್ನು ಪ್ರೇಮಿಸುವ ತಾಯಿಯಂತೆ ವಾತ್ಸಲ್ಯಮಯಿ. ಅಂತೆಯೇ ಕೆಲವೊಮ್ಮೆ ತಾನಿತ್ತ ವರಗಳಿಂದ ತನಗೆ ತೊಂದರೆ. ಪರಿಸ್ಥಿತಿ ಮಿತಿಮೀರಿದಾಗ ಮಾತ್ರವೇ ದುಷ್ಟರ ವಧೆ. ಹೀಗೆ ಆದರ್ಶ ಯೋಗಿರಾಜನಾಗಿ, ಧರ್ಮ ಸಾಮ್ರಾಟನಾಗಿ, ಸಂಯಮ-ಸರಳತೆಯ ಪ್ರತಿಮೂರ್ತಿಯಾಗಿ ರಾರಾಜಿಸಿದ ಈ ಮಹಾಯೋಗಿ. ಅಖಂಡ ಭಾರತದ ತುಂಬೆಲ್ಲ ಇವನ ಆರಾಧಕರು.

ಇನ್ನಿವನ ಧಾರ್ಮಿಕ ವಿಚಾರಗಳೋ, ಅತ್ಯಂತ ವಿಶಾಲ. "ವಿವಿಧ ನದಿಗಳು ಸಮುದ್ರ ಸೇರಿ ತಮ್ಮ ರೂಪ ರುಚಿ ಗುಣ ಕಳೆದುಕೊಂಬಂತೆ, ಯಾರೇ ಇರಲಿ ನನ್ನನ್ನು ಆಶ್ರಯಿಸಿ, ಪೂರ್ವಗುಣ ನಿವೃತ್ತಿ ಮಾಡಿಕೊಂಡು ಶಿವಭಕ್ತರಾಗುತ್ತಾರೆ' ಎಂಬ ಜಾತ್ಯತೀತ ಮನೋಭಾವ. ಯಜ್ಞ-ಯಾಗಾದಿಗಳು ಬಲಿ-ಹಿಂಸೆಗಳಿಂದ ಲಕ್ಷಿತವಾಗಿರುವ ಕಾರಣ, ಅಹಿಂಸಾವಾದಿಯಾದ ಶಿವನು ಅವುಗಳ ತೀಕ್ಷ್ಣ ವಿರೋಧಿ. 'ದೇವನನ್ನೊಲಿಸಲು ಕುರಿ, ಆಡು ಬೇಡ; ಅಭಿಷೇಕ, ಬಿಲ್ವಗಳು ಸಾಕೇ ಸಾಕು.' ಎಂಬ ವಿಚಾರವಾದಿ. ಇನ್ನವನಿಗೆ ಮಲ್ಲಿಗೆ, ಸಂಪಿಗೆ ಇಂತಹ ನಗರ ಕುಸುಮಗಳೇ ಬೇಕೆಂದೇನೂ ಇಲ್ಲ. ಕಾರೆಯ ಸೊಪ್ಪಾದರೂ ಮನಂಗೂಡಿ ಬಂದುದು ಅರ್ಪಿತ. ಅಲ್ಲದೆ ದತ್ತೂರ, ಕಣಿಗಲೆ, ಎಕ್ಕೆ, ತುಂಬೆ ಎಲ್ಲವೂ ಪ್ರಿಯವೇ. ಇನ್ನು ವೇಷ ಭೂಷಣಗಳೋ ಅತ್ಯಂತ ಸರಳ. ಕಿರೀಟ, ಕಡಗ, ಪೀತಾಂಬರ ಬಲುದೂರ. ಸರಳವಾದೊಂದು ಜಟೆ. ರುದ್ರಾಕ್ಷಿಯ ಕಡಗ. ಚಂದನ-ಕಸ್ತೂರಿ ಲೇಪನವಲ್ಲ ವಿಭೂತಿ ಲೇಪನ; ಓಡಾಡುವ ವಾಹನವಾದರೂ ಅಷ್ಟೇ ಸರಳ-ರೈತನ ಜೀವಾಳವಾದ ಎತ್ತು ! ತನ್ನನ್ನು ತನ್ನ ಭಕ್ತರು ನೇರವಾಗಿ ಪೂಜಿಸಲೆಂಬ ಬಯಕೆ. ಅಂತೆಯೇ ಇಂದಿಗೂ ೧೨ ಜ್ಯೋತಿರ್ಲಿಂಗ ಮತ್ತು ಶಿವಲಿಂಗಗಳನ್ನು ಎಲ್ಲ ಜಾತಿ ಮತ ಪಂಥಗಳವರು ನೇರವಾಗಿ ಪೂಜಿಸಬಹುದಾದ ಅವಕಾಶ. ಸ್ತ್ರೀಯರೂ ಮುಕ್ತಿ ಸಾಧನೆಗೆ ಹೊರತಾಗಬೇಕಿಲ್ಲ ಎಂಬುದರ ದ್ಯೋತಕ ಉಮೆಯ ತಪಸ್ಸು. ಪಾರ್ವತಿಗೆ ಆಗಮಗಳ ಬೋಧೆಗೈವುದು ಮಹಿಳೆಯರು ಧರ್ಮಶಾಸ್ತ್ರ ಪಾರಾಯಣಕ್ಕೆ ಸಮಾನವಾಗಿ ಅರ್ಹರು

Digitalized by e Sahithya Documentation Forum
Sponsored by Sarayu Foundation Trust

ಎಂಬ ತತ್ತ್ವದ ಪ್ರತೀಕ. ಹೀಗೆ ತತ್ತ್ವ, ವ್ಯಕ್ತಿತ್ವ, ಜನ ಪ್ರಿಯತೆ ಎಲ್ಲ ದೃಷ್ಟಿಯಿಂದ ಮಹಾದೇವನ ಸಮಾನ ಸ್ಪರ್ಧಿಗಳಿರಲಿಲ್ಲ. ವಿದೇಶಗಳಿಂದ ಆರ್ಯರ ಆಗಮನವಾದಾಗ ಶಿವನ ಕೀರ್ತಿ ಏಕಮೇವಾದ್ವಿತೀಯವಾಗಿತ್ತು. ಅನಿವಾರ್ಯವಾಗಿ ಅವರು ಅವನನ್ನು ತಮ್ಮ ಶಾಸ್ತ್ರಗಳಲ್ಲಿ ಇಂಬಿಟ್ಟುಕೊಳ್ಳಬೇಕಾಯಿತು, ಅರ್ಚಿಸಬೇಕಾಯಿತು. ಪ್ರಕೃತಿ ಪೂಜಕರಾದ ಆರ್ಯರು, ಶಿವಪೂಜಕರಾದ ದ್ರಾವಿಡರು-ಪೂಜಾರಿ ಪದ್ಧತಿಯ ಆರ್ಯಧರ್ಮ, ದೇವಾಲಯ ಪದ್ಧತಿಯ ದ್ರಾವಿಡಧರ್ಮ-ಎರಡೂ ಸಂಗಮವಾದಾಗ ಹುಟ್ಟಿದುದೇ ಹಿಂದೂ ಸಂಸ್ಕೃತಿ. ಹೀಗೆ ಸ್ವಾಗತಿಸಲ್ಪಟ್ಟ ಶಿವನ ಸ್ಥಾನ ವೇದಗಳಲ್ಲಿ ಪರಮೋಚ್ಚ ಮಟ್ಟವನ್ನೇರಿತು. ಇದನ್ನು ಸಹಿಸಲಾರದ ಮತಾಂಧ ದುರಭಿಮಾನಿಗಳು ಅವನ ಬಗ್ಗೆ ಕುಕಲ್ಪನೆಯ ಕಥೆಯನ್ನು ಕಟ್ಟಿ, ಅಸಹ್ಯ ಪೌರಾಣಿಕ ಚಿತ್ರಣ ನೀಡಿರುವುದೂ ಅಷ್ಟೇ ಸ್ವಾಭಾವಿಕ.

ಐತಿಹಾಸಿಕ ಪುರುಷನಾದ ಯೋಗಿರಾಜ ಮಹಾದೇವನು ಕೈಹಿಡಿದುದು ದಕ್ಷ ಬ್ರಹ್ಮನ ಪುತ್ರಿ ದಾಕ್ಷಾಯಿಣಿಯನ್ನು. ಆಹ್ವಾನವಿಲ್ಲದೆ ತಂದೆಯ ಮನೆಗೆ ಹೋದ ಸುತೆ ಅಪಮಾನಿತಳಾಗಿ, ಕೀರ್ತಿವೆತ್ತ ಪತಿಯ ಅವಹೇಳನ ಕ್ಷುದ್ರ ತಂದೆಯಿಂದ ಬಂದಾಗ ಸಹಿಸಿಕೊಳ್ಳಲಾರದ ಆಕೆ ಅಗ್ನಿಗೆ ಆಹುತಿಯಾಗಿ ಹುತಾತ್ಮಳಾದುದು ಸರ್ವವಿದಿತ. ಇಲ್ಲಿಯ ತನಕ ಶಾಂತಮೂರ್ತಿ ಶಿವನು ಸಹಿಸಿದ್ದ ಸಹನೆ ಕಟ್ಟೆಯೊಡೆಯಿತು. ತನ್ನ ತತ್ತ್ವಗಳಿಗೆ ವಿರೋಧವಾದ ಯಜ್ಞವನ್ನು ಒಂದು ದಾಕ್ಷಿಣ್ಯ (ದಕ್ಷ ಬ್ರಹ್ಮನು ಮಾವನು ಎಂಬ) ದಿಂದ ಸಹಿಸಿದ್ದ. ಪತ್ನಿಗೆ ಆದ ದುರ್ಮರಣ ಕಂಡು ಮನನೊಂದು, ತನ್ನ ಜಟಿಯನ್ನೇ ಕೆದರಿದ "ಋಷಿಕೇಶ" ನಗರದಲ್ಲಿ ಬೀಡು ಬಿಟ್ಟಿದ್ದ ಶಿವನು. ಮಾನಸ ಪುತ್ರ (ಶಿಷ್ಯ) ವೀರಭದ್ರನು ಮಹಾದೇವನ ಆಜ್ಞೆಯಂತೆ ಸೈನ್ಯ ಸಮೇತನಾಗಿ ಸಾಗಿ ಹರದ್ವಾರ (ಶಿವರಾಜ್ಯದ ಮಹಾದ್ವಾರ) ದಲ್ಲಿ ನಡೆಯುತ್ತಿದ್ದ ದಕ್ಷಯಾಗವನ್ನು ಭಂಗಪಡಿಸಿದ.

ಸ್ವಭಾವತಃ ಶಾಂತ-ಸಾತ್ವಿಕನೂ ಅಂತರ್ಮುಖಿ ದಯಾಳುವೂ ಆದ ಶಿವನು ವಿರಕ್ತಿಭಾವ ತಾಳಿ, ಪತ್ನಿ ವಿರಹಿತನಾದ ದುಃಖವನ್ನು ಶಮನ ಮಾಡಿಕೊಳ್ಳಲೋಸುಗ ಹಿಮಾಲಯದ ಅಂತರ್ಭಾಗ ಪ್ರವೇಶಿಸಿ ತಪೋಮಗ್ನನಾದ. ನಿರಾಹಾರ, ಜಾಗರಣೆ, ಅರ್ಚನೆ,ಧ್ಯಾನಾದಿ ಕ್ರಿಯೆಗಳಿಂದ ತಪೋನಿರತನಾದ ದಿನವೇ ಶಿವರಾತ್ರಿ. ಮಹಾಗುರುವು ನಿರಾಹಾರ-ಜಾಗರಣಾದಿಗಳಿಂದ ತಪೋಮಗ್ನನಾದಾಗ ಅವನ ಅನುಯಾಯಿಗಳೂ ಅನುಷ್ಠಾನ ಕೈಗೊಂಡರು. ಶಿವನ ತಪಸ್ಸು ನಿರಂತರವಾಗಿ ಸಾಗಿತ್ತು. ಉಳಿದವರು ಮಾತ್ರ ಸಾಂಕೇತಿಕವಾಗಿ ಒಂದು ದಿನ ಆಚರಿಸಿ ಅನಂತರ ವ್ಯವಹಾರದಲ್ಲಿ ತಲ್ಲೀನರಾದರು. ಆದರೆ ಮಹಾದೇವನು ಬಹಿರ್ಮುಖನಾಗದಿದ್ದಾಗ ಅವರು ಆತಂಕಗೊಂಡರು. ಏನಾದರೂ ಪ್ರಯತ್ನ ಮಾಡಿ ಶಿವನನ್ನು ಬಹಿರ್ಮುಖ

ಗೊಳಿಸಿ, ಕರ್ತವ್ಯಮುಖನನ್ನಾಗಿ ಮಾಡಬೇಕಾಗಿತ್ತು. ಅಂತೆಯೇ ಪರ್ವತರಾಜನ ಪುತ್ರಿ ಲೋಕೈಕ ಸುಂದರಿ ಪಾರ್ವತಿಯನ್ನು ಲಗ್ನ ಮಾಡುವ ಹವಣಿಕೆಯಲ್ಲಿ ತೊಡಗಿದರು. ಶಿವರಾತ್ರಿಯಂದು ತಪೋಮಗ್ನನಾದ ಶಿವನು ಪಾರ್ವತಿಯ ಲಾವಣ್ಯದಿಂದ ಕ್ಷಣಕಾಲ ವಿಚಲಿತನಾಗಿ, ಮತ್ತೆ ತನ್ನ ವೈರಾಗ್ಯ ನೇತ್ರವನ್ನರಳಿಸಿ ಆ ಕಾಮಭಾವವನ್ನು ದಹಿಸಿ, ಅಖಂಡ ತಪಸ್ಸಿಗೆ ತೊಡಗುವ ಕಾಮನ ಹಬ್ಬದ ಆಚರಣೆಯ ಹಿಂದೆ ಒಂದು ಕಥೆ, ಘಟನೆ ಇರುವುದು ಅತ್ಯಂತ ಸಹಜ.

ಶೈವಧರ್ಮದ ಆದ್ಯನಾದ, ಭಾರತೀಯ ಪರಂಪರೆಯ ಆದಿಯೋಗಿ ಶಿವನು ಅನುಷ್ಠಾನನಿರತನಾದ ದಿನ ಶಿವರಾತ್ರಿಯಾದ್ದರಿಂದ ಅದನ್ನು ಅಷ್ಟೇ ಸಾತ್ವಿಕವಾಗಿ ಆಚರಿಸಬೇಕಾದ ಸಂಪ್ರದಾಯ ಅವ್ಯಾಹತವಾಗಿ ಸಾಗಿಬಂದಿದೆ. ಈ ವ್ರತವಾದರೂ ಫಲಾಪೇಕ್ಷೆಯಿಂದ ಮಾಡುವಂತಹುದಲ್ಲ; ಶಿವಾರ್ಪಿತ ಭಾವದಿಂದ ಮಾಡುವ ನಿಷ್ಕಾಮ ವ್ರತ.

ನಿತ್ಯಂ ನೈಮಿತ್ತಿಕಂ ಕಾರ್ಯಂ
ಯತ್ಕೃತಂ ತು ಮಯಾ ಶಿವ ।
ತತ್ಸರ್ವಂ ಪರಮೇಶಾನ
ಮಯಾ ತುಭ್ಯಂ ಸಮರ್ಪಿತಮ್ ॥

ಈ ಪೂಜಾನಂತರ ಭಕ್ತನು ಬೇಡುವುದು ಧನಕನಕ ಐಶ್ವರ್ಯಗಳನ್ನಲ್ಲ; ಶಿವನ ಕರುಣೆ, ಬಾಳಿನಲ್ಲಿ ಶಾಂತಿ, ಸುಜ್ಞಾನ ಮುಂತಾದುವನ್ನು.

ಸಂಸಾರ ಕ್ಲೇಶ ದಗ್ಧಸ್ಯ
ವ್ರತೇನಾನೇನ ಶಂಕರ
ಪ್ರಸೀದ ಸುಮುಖೋನಾಥ
ಜ್ಞಾನ ದೃಷ್ಟಿ ಪ್ರದೋ ಭವ ॥

ಶಿವನು ಜ್ಞಾನ ಸೂರ್ಯನು, ತನ್ನ ಕಾರುಣ್ಯ ಕಿರಣಗಳಿಂದ ಭಕ್ತರ ಹೃತ್ಕಮಲಗಳನ್ನು ಅರಳಿಸುವವನು. ಅವನ ಮಂತ್ರವು ಭವಕ್ಲೇಶವನ್ನು ಪರಿಹರಿಸುವ ದಿವ್ಯ ಸಂಜೀವಿನಿಯು. ಭವ ನದಿಯನ್ನು ದಾಂಟಿಸುವ ಛತ್ರ ಅವನ ನೆನಹು. ಶಿವನು ಗಂಗಾಧರ; ಅಂದರೆ ನೊಂದು ಬೆಂದು ಬಸವಳಿದು ಬಾಡುವ ಹೃದಯಗಳಿಗೆ ಕರುಣೆಯ ಗಂಗೆಯನೆರೆದು ಪುನರ್ಜನ್ಮ ನೀಡುವವನು. ಅವನು ಭವರುಜೆಗೆ ಆದಿವೈದ್ಯ. ಹೀಗೆ ವೈವಿಧ್ಯಮಯವಾಗಿ ಭಾವಿಸಲ್ಪಟ್ಟು ಕೀರ್ತಿಸಲ್ಪಡುವವನು ಶಿವ.

Digitalized by e-Sahithya Documentation Forum
Sponsored by Sarayu Foundation Trust

ದಿವ್ಯರಾತ್ರಿ

ಐತಿಹಾಸಿಕ ಶಿವನ ಸಾಂಕೇತಿಕ ತಪೋದಿನ ಶಿವರಾತ್ರಿ ಎಂಬುದರ ಒಡನೆ 'ಆತ್ಮ ಶುದ್ಧಿಯ ದಿನ' ಎಂದು ದೈವೀಜ್ಞಾನ ಸಂಪಾದನೆಗಾಗಿ ನಾವು ಆಚರಿಸಬಹುದು. ಶಿವ ಎಂದರೆ ಅಕಲ್ಮಷ, ಕಲ್ಯಾಣ ರೂಪಿ, ಮಂಗಳಮೂರ್ತಿ. ಇವು ಪರಮಾತ್ಮನ ಲಕ್ಷಣಗಳಾದ ಕಾರಣ ಅಂದು ಅಂತರ್ಮುಖ ಚಿಂತನೆಗೆ ತೊಡಗಿ, ಹಾವು ಪೊರೆ ಕಳಚಿ ಚುರುಕಾಗುವಂತೆ, ಮನದ ಮಾಲೀನ್ಯತೆ ಕಳೆದು ದೇವನತ್ತ ಸಾಗುವ ಯತ್ನ ಮಾಡಬೇಕು ಸಿನಿಮಾ ನೋಡಿ ಶಿವರಾತ್ರಿ (ಅಲ್ಲ ಭವರಾತ್ರಿ) ಮಾಡದೆ, ಯೋಗರಾತ್ರಿ (ಭೋಗರಾತ್ರಿಯಲ್ಲ) ಯನ್ನಾಗಿ ಆಚರಿಸಬೇಕು.

ಶರಣರ ದೃಷ್ಟಿಯಲ್ಲಿ ಶಿವರಾತ್ರಿ

ಸಾಂಕೇತಿಕವಾಗಿ ವರ್ಷಕ್ಕೊಮ್ಮೆ ಶಿವರಾತ್ರಿ ಮಾಡಿದರೂ, ನಿಚ್ಚ ನಿಚ್ಚ ಶಿವರಾತ್ರಿಯನ್ನಾಚರಿಸಬೇಕೆಂಬುದು ಬಸವಣ್ಣನವರ ಉದ್ದೇಶ.

ಶರಣ ನಿದ್ರೆಗೈದಡೆ ಜಪಕಾಣಿರೋ
ಶರಣನೆದ್ದು ಕುಳಿತರೆ ಶಿವರಾತ್ರಿ ಕಾಣಿರೋ
ಶರಣ ನಡೆದುದೇ ಪಾವನ ಕಾಣಿರೋ
ಶರಣ ನುಡಿದುದೇ ಶಿವತತ್ತ್ವ ಕಾಣಿರೋ
ಕೂಡಲ ಸಂಗನ ಶರಣನ ಕಾಯವೇ ಕೈಲಾಸ ಕಾಣಿರೋ.

ಉಪವಾಸ, ಜಾಗರಣೆ, ಅರ್ಚನೆಗಳನ್ನು ಮಾಡುವುದು ಶಿವರಾತ್ರಿ ತಾನೇ! ಇಂದ್ರಿಯಗಳನ್ನು ಕೆಟ್ಟುದರೆಡೆಗೆ ಹರಿಸದೆ ನಿರಾಹಾರದಿಂದಿಡಬೇಕು. ನಾಲಿಗೆಯನ್ನು ಸಿಕ್ಕಾಪಟ್ಟೆ ತಿನ್ನುವುದರಲ್ಲಿ ತೊಡಗಿಸದೆ ಸಂಯಮದಿಂದಿಡಬೇಕು. ಅದುವೇ ಉಪವಾಸ! ಆತ್ಮಜಾಗೃತಿ ಮಾಡಿಕೊಂಡು ಸದಾ ದೇವನ ಚಿಂತನೆಯಲ್ಲಿ ತೊಡಗುವುದು ಜಾಗರಣೆ. ಕಾಯ-ವಾಕ್ಕು-ಮನಗಳಿಂದ ಅರ್ಚನೆ-ಪ್ರಾರ್ಥನೆ-ಧ್ಯಾನದಲ್ಲಿ ನಿರತನಾಗುವುದು ಉಪಾಸನೆ. ಈ ಮೂರನ್ನೂ ಪ್ರತಿನಿತ್ಯ ಮಾಡಿದಾಗ ನಿತ್ಯ ನಿತ್ಯ ಶಿವರಾತ್ರಿ ಮಾಡುವ ಶರಣನ ಕಾಯವೇ ಕೈಲಾಸ, ಅವನದ್ದು ಚೈತನ್ಯ ಸಮಾಧಿ, ಪ್ರತಿ ರಾತ್ರಿಯೂ ದಿವ್ಯರಾತ್ರಿ, ಜೀವನವೆಲ್ಲ ದಿವ್ಯಜೀವನ.

(ಮಾರ್ಚ್ ೪ ರಂದು ಆಚರಿಸಲ್ಪಡುವ ಮಹಾಶಿವರಾತ್ರಿ (ಸರ್ವ ಶರಣರ ದಿನಾಚರಣೆ) ಪ್ರಯುಕ್ತ ಈ ವಿಶೇಷ ಲೇಖನ ಪ್ರಕಟಿತ.

—★—

Digitalized by e-Sahithya Documentation Forum
Sponsored by Sarayu Foundation Trust

ಕಲ್ಯಾಣ ಕಿರಣಕ್ಕೆ ಆದ ಹೊಸ ಆಜೀವ ಸದಸ್ಯರು

ಶರಣರುಗಳಾದ—

೧. ಸಿ. ಶಿವಕುಮಾರ್, ಮಾಧವ ರೈಸ್ ಅಂಡ್ ಆಯಿಲ್ ಮಿಲ್ಸ್ ತುಮಕೂರು.
೨. ಕೆ. ಸೂರ್ಯರಾವ್, ಸಿಂಧನೂರು.
೩. ಮಜ್ಜಿಗೆ ವಿರೂಪಾಕ್ಷಪ್ಪ, ಬಳ್ಳಾರಿ.
೪. ಜಯವಿಭವ, ದಾವಣಗೆರೆ.
೫. ಶ್ರೀಸರ್ಪಭೂಷಣ ಗೌರಿಶಂಕರ್ ರೈಸ್‌ಮಿಲ್ ಮಾಲೀಕರು, ಚನ್ನಪಟ್ಟಣ.
೬. ಪಿ. ಶಾರದಾಂಬಾ, ಕನಕಪುರ.
೭. ಪಿ. ಮಲ್ಲೇಶಯ್ಯಗುಪ್ತ, ಬೆಂಗಳೂರು-2
೮. ಶಾಂತಪ್ಪ, ಬೆಂಗಳೂರು-23
೯. ಬಿ. ರಾಚಪ್ಪ, ಗುಲ್ಬರ್ಗಾ.
೧೦. ನಾಗಪ್ಪ ಧೂಳಪ್ಪ ಕುರುಬೂರು, ಚಿಂಚೋಳಿ ತಾಲ್ಲೂಕು.
೧೧. ಶ್ರೀ ಪ್ರಭುಶೆಟ್ಟಿ, ಬೀದರ.
೧೨. ಕಮಲಮ್ಮ ಚೌಡೇಶ್ವರಿ, ಚಟ್ನಳ್ಳಿ, ಬೀದರ್ ಜಿಲ್ಲೆ.
೧೩. ಪಿ. ಬಸವರಾಜಸ್ವಾಮಿ, ತಾಂಡೂರು, ಆಂಧ್ರಪ್ರದೇಶ.
೧೪. ಡಾ. ಕಲ್ಲಪ್ಪ ಉಪ್ಪೆ, ಔರಾದ್.
೧೫. ಎಂ. ಎ. ಶೇಖರ್, ಬೆಂಗಳೂರು-50
೧೬. ಪಿ. ಎಲ್. ಗುರುಸಿದ್ದಪ್ಪ, ಮೈಸೂರು-10
೧೭. ಬೀರನಹಳ್ಳಿ ಗಂಗಮ್ಮ, ತಾಂಡೂರು, ಆಂಧ್ರಪ್ರದೇಶ.
೧೮. ಎಸ್. ಬಸವರಾಜ್, ಬಳ್ಳಾರಿ-1
೧೯. ಐ. ಎಂ. ಮಗ್ದುಂ, ಬೆಂಗಳೂರು.
೨೦. ಎಂ. ಆರ್ ಶಿವಕುಮಾರಯ್ಯ, ಮಾಗಡಿ.
೨೧. ಎಂ. ಶಿವಶಂಕರ್, ಬೆಂಗಳೂರು-53
೨೨. ಬಿ. ಎಸ್. ಸದಾಶಿವನ್, ಬಿಡದಿ.
೨೩. ಶಿವಶರಣರಾವ್ ದೇಶಮುಖ, ಚಿಂತಪಳ್ಳಿ, ಗುಲ್ಬರ್ಗಾ ಜಿಲ್ಲೆ.
೨೪. ಎಂ. ಕೃಷ್ಣನ್, ಮದ್ರಾಸ್-2
೨೫. ಕೆ. ಎಂ. ಆರ್. ರುದ್ರಪ್ಪ, ಕೆಂಗೇರಿ.

Regd. No. KRNB 312
Licenced to post without pre-payment No. WPP-25

ಸುಯಿಧಾನ ಸುಗ್ರಂಥ ಮಾಲೆಯಲ್ಲಿ
ಈಗತಾನೆ ಅರಳಿದ ಪುಷ್ಪಗಳು

ಪೂಜ್ಯ ಮಾತಾಜಿಯವರಿಂದ ರಚಿತವಾದ
ವಿಶ್ವಗುರು ಬಸವಣ್ಣನವರ ಸಂಕ್ಷಿಪ್ತ ಜೀವನವನ್ನು ಪರಿಚಯಿಸುವ
"ವಿಶ್ವಗುರು ಬಸವಣ್ಣ"
ಬೆಲೆ : 4-50 ರೂ.

ಶರಣರ ಆಯ್ದ ವಚನಗಳ ಸರಳ ವ್ಯಾಖ್ಯಾನವನ್ನೊಳಗೊಂಡ
"ಒಲಿದು ಹಾಡಿದ ಗೀತೆ"
ಬೆಲೆ : 3-00 ರೂ.

ಬಸವಣ್ಣನವರ ದೀಕ್ಷಾ ಗುರು ಯಾರು?
ಬೆಲೆ : 1 ರೂ.

ಇಷ್ಟಲಿಂಗ ಜನಕ ಬಸವಣ್ಣ
ಬೆಲೆ : 50 ಪೈಸೆ

ವಿಶ್ವಜ್ಯೋತಿ ಬಸವಣ್ಣ
ಬೆಲೆ : 50 ಪೈಸೆ

ಅನುಭವ ಮಂಟಪದ ಆಧಾರ ಸ್ಥಂಭವಾಗಿದ್ದ ಮಹಾಶರಣರೈವರ
ಸಂಕ್ಷಿಪ್ತ ಜೀವನ, ಸಾಧನೆ ಮತ್ತು ಸಿದ್ಧಿಗಳನ್ನು ಸಾರುವ
ಪಂಚಧಾರೆ
ಸಂ. ಜಗದ್ಗುರು ಮಾತೆ ಮಹಾದೇವಿ
ಬೆಲೆ : 5-00 ರೂ.

ಶರಣರ ಆಯ್ದ ವಚನಗಳಿಗೆ-ಸರಳ, ಭಾಷೆ, ಸುಂದರ ಶೈಲಿ ಮತ್ತು
ತಾತ್ವಿಕ ವಿಶ್ಲೇಷಣೆಗಳಿಂದೊಡಗೂಡಿದ ವ್ಯಾಖ್ಯಾನವನ್ನೊಳಗೊಂಡಂಥ
ವಚನ ಗೀತ
ಲೇಖಕ : ಸದ್ಗುರು ಲಿಂಗಾನಂದ ಸ್ವಾಮಿಗಳು
ಬೆಲೆ : 3-00

ಪ್ರತಿಗಳಿಗಾಗಿ ಬರೆಯಿರಿ :
ವಿಶ್ವಕಲ್ಯಾಣ ಮಿಷನ್
ರಾಜಾಜಿನಗರ, ಬೆಂಗಳೂರು-10

Digitalized by e-Sahithya Documentation Forum
Sponsored by Sarayu Foundation Trust